Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–26 ಜೂನ್ 26–ಜುಲೈ 2, 2023 ಪುಟ 16 ರೂ. 10/–
Volume-17 Issue-26 June 26-July 2, 2023 Pages:16 Price: 10/-



ಮಣಿಪುರಕ್ಕೆ ಕೈಕೊಟ್ಟ ಪ್ರಧಾನಿ ಮೋದಿ

ಸ್ಪೀಕರ್! ಇದೆಂಥಾ ನೀತಿ ಪಾಠ



ಸೌಜನ್ಯ ಪ್ರಕರಣ: ಅಪರಾಧಿ ಯಾರು?

ಉಡುಪಿ, ಧಾರವಾಡ: ಚುನಾವಣಾ ಫಲಿತಾಂಶದ ಅವಲೋಕನ

'ಡೇರ್ ಡೆವಿಲ್ ಮುಸ್ತಾಫಾ' ಸೌಹಾರ್ದತೆಯ ಗಟ್ಟಿ ಸಂದೇಶ

ಸಾವಿನ ನೆರಳಲ್ಲಿ ಪುಟ್ಟ ಹಕ್ಕಿಯ ಹಾಡು – ಆನ್ ಫ್ರಾಂಕ್

ಈ ಎಳೆ ನಗೆಯ ಮುದ್ದು ಪೋರಿ ಬದುಕಿದ್ದರೆ ಇಂದಿಗೆ 99 ವರ್ಷ. ಈ ಬಾಲಕಿ ಎಳೆ ವಯಸ್ಸಿನಲ್ಲೇ ಹತ್ಯೆಯಾಗುವ ಮೊದಲು ತನ್ನ ಬಾಲ ಬರಹದಿಂದ ಜಗತ್ತನ್ನು ಎಚ್ಚರಿಸಿದವಳು. ಇವಳ ಬರಹ ಮತ್ತದರ ಸುತ್ತಲಿನ ಎಲ್ಲ ಘಟನೆಗಳೂ ಇಂದು ನಮಗೆ ಬಹಳ ಮುಖ್ಯವಲ್ಲವೇ?

ಆಕೆ Anne Frank, ಹಿಟ್ಲರ್ ನ ಕ್ರೌರ್ಯಕ್ಕೆ ನಲುಗಿದವಳು. ಆಕೆಯ ಕುರಿತ ಡಾ|| ಜೆ. ಬಾಲಕೃಷ್ಣ ರವರ ಲೇಖನ ಮುಂದುವರಿದ ಕೊನೆಯ ಭಾಗ ಇಲ್ಲಿದೆ.

'ಸಂಜೆ ಕತ್ತಲಾದಾಗ ಕಿಟಕಿಯ ಬಿರುಕಲ್ಲಿ ನೋಡುತ್ತೇನೆ, ಸಾಲು ಸಾಲಾಗಿ ಜನಗಳನ್ನು ತಮ್ಮ ರೋದಿಸುವ ಮಕ್ಕಳೊಂದಿಗೆ ನಾತ್ಸಿ ಪೋಲೀಸರು ದನಕ್ಕೆ ಬಡಿದ ಹಾಗೆ ಬಡಿಯುತ್ತಾ ಕರೆದೊಯ್ಯುತ್ತಿರುತ್ತಾರೆ. ಕೆಲವರಂತೂ ಅಲ್ಲೇ ಕುಸಿಯುತ್ತಾರೆ. ಆದರೆ ಅವರು ಯಾರನ್ನೂ ಬಿಡುವುದಿಲ್ಲ. ಮುದುಕರು, ಮಕ್ಕಳು, ಗರ್ಭಿಣಿ ಹೆಂಗಸರು, ರೋಗಿಗಳು– ಎಲ್ಲರೂ ಹೊರಡಲೇಬೇಕು, ಸಾವಿನ ಮೆರವಣಿಗೆಯಲ್ಲಿ.'

'ನನ್ನ ಬೆಚ್ಚಗಿನ ಹಾಸಿಗೆಯಲ್ಲಿ ಮಲಗಲು ಕೆಟ್ಟದೆನಿಸುತ್ತದೆ. ನಮ್ಮ ಗೆಳೆಯರು ಅತ್ಯಂತ ಕ್ರೂರ ಕೈಗಳ ಹಿಡಿತದಲ್ಲಿರುವಾಗ ನಾನು ಹೇಗೆ ಬೆಚ್ಚಗೆ ನಿದ್ದೆ ಮಾಡಲಿ?' ಆನ್ ಫ್ರಾಂಕ್‌ಳಿಗೆ ಸರಿಯಾಗಿ ನಿದ್ದೆಯಿಲ್ಲದೆ ಕಣ್ಣ ಸುತ್ತಲ್ಕೈ ಕಪ್ಪಗಿನ ಚಕ್ರಗಳು ಮೂಡತೊಡಗಿದ್ದವು.

'ಅದೇಕೋ ನಾನು ಅನಾಥಳು ಎನ್ನಿಸುತ್ತಿದೆ. ನನ್ನ ಸುತ್ತಲೂ ಶೂನ್ಯ ಕವಿದಿರುವಂತೆ ಭಾಸವಾಗುತ್ತಿದೆ. ನನ್ನ ಆಟ–ಪಾಠಗಳು, ಗೆಳೆಯ–ಗೆಳತಿಯರು ನನ್ನ ಮನಸ್ಸನ್ನು ಸದಾ ತುಂಬಿರುತ್ತಿದ್ದರು. ಆದರೆ ಈಗ ಕೆಟ್ಟ ಘಟನೆಗಳ ಬಗೆಯಾಗಲೀ, ನ್ನ ಬಗ್ಗೆಯಾಗಲೀ ಯೋಚಿಸಲೇ ಸಾಧ್ಯವಾಗುತ್ತಿಲ್ಲ.'

'ಯೋಚನೆ, ಖಿನ್ನತೆಯಿಂದ ಬಿಡುಗಡೆ ಹೊಂದಲು ವ್ಯಾಲೆರಿಯನ್ ಮಾತ್ರೆಗಳನ್ನು ನುಂಗಬಹುದು. ಆದರೆ ಮರುದಿನ ಮನಃಸ್ಥಿತಿ ಮೊದಲಿನ ಹಾಗೇ ಆಗಿರುತ್ತದೆ. ಒಮ್ಮೆ ಮನಸಾರೆ ನಕ್ಕರೆ ಅದು ಹತ್ತು ವ್ಯಾಲೆರಿಯನ್ ಮಾತ್ರೆಗಳಿಗಿಂತ ಚೆನ್ನಾಗಿ ಕೆಲಸಮಾಡುತ್ತದೆ. ಆದರೆ ನಾವು ಈಗೀಗ ನಗುವುದನ್ನೇ ಮರೆತಿದ್ದೇವೆ.'

ಇನ್ನೂ ಬದುಕಿನ ಹೊಸ್ತಿಲಲ್ಲಿದ್ದ ಆನ್ ಫ್ರಾಂಕ್ ಬದುಕನ್ನು ತೀವ್ರವಾಗಿ ಪ್ರೀತಿಸುತ್ತಿದ್ದುದರಿಂದಲೇ ಅವಳಿಗೆ ಸಾವಿನ ಹೆದರಿಕೆ ಸದಾ ಕಾಡುತ್ತಿತ್ತು. ಯುದ್ಧದ ಬಗ್ಗೆ ಬರೆದಾಗಲೆಲ್ಲಾ ಸಾವಿನ ಬಗ್ಗೆ ಸೂಚ್ಯವಾಗಿ ತಿಳಿಸುತ್ತಿದ್ದಳು. 'ಕಿಟ್ಟೀ, ಈ ಯುದ್ಧ ತಂದಿರುವ ನೋವು ದುಃಖದ ಬಗ್ಗೆ ನಿನಗೆ ಗಂಟೆಗಟ್ಟಲೆ ಹೇಳಬಲ್ಲೆ. ಆದರೆ ಅದರಿಂದ ನನ್ನ ದುಃಖ ಮತ್ತಷ್ಟು ಹೆಚ್ಚಾಗುತ್ತದೆ. ನಾವು ಈಗ ಏನು ಮಾಡಲೂ ಸಾಧ್ಯವಿಲ್ಲ. ಈ ನಮ್ಮ ಕಷ್ಟದ ದಿನಗಳು ಮುಗಿಯುವವರೆಗೂ ತಾಳ್ಮೆಯಿಂದ ಕಾಯುತ್ತಿರಬೇಕು. ಜ್ಯೂಗಳು, ಕ್ರಿಶ್ಚಿಯನ್ನರು ಎಲ್ಲರೂ ಕಾಯುತ್ತಿದ್ದಾರೆ. ಇಡೀ ಪ್ರಪಂಚವೇ ಕಾಯುತ್ತಿದೆ. ಆದರೆ ಇನ್ನೂ ಕೆಲವರು ಕಾಯುತ್ತಿದ್ದಾರೆ, ಬರುತ್ತಿರುವ ಸಾವಿಗಾಗಿ.'

'ರಾತ್ರಿಯೆಲ್ಲಾ ಆಡುವ ಈ ಬಂದೂಕಿನ ಮತ್ತು ಏರೋಪ್ಲೇನುಗಳು ಸದ್ದಿನ ಹೆದರಿಕೆಯಿಂದ ತಪ್ಪಿಸಿಕೊಳ್ಳಲು ನನ್ನಿಂದ ಸಾಧ್ಯವಾಗುತ್ತಲೇ ಇಲ್ಲ. ದೂರದಲ್ಲಿ ಎಲ್ಲಾದರೂ ಏರೋಪ್ಲೇನಿನ ಸದ್ದು ಕೇಳಿಸಿದರೆ ನಮ್ಮ ಬದುಕಿನ ಕೊನೆ ಹತ್ತಿರ ಹತ್ತಿರವಾಗುತ್ತಿದೆ ಎನ್ನಿಸುತ್ತದೆ. ಪ್ರತೀ ಕ್ಷಣವೂ ಈಗ ನಮ್ಮ ಮೇಲೊಂದು ಬಾಂಬು ಬೀಳುತ್ತದೆ ಎನ್ನುವ ಹೆದರಿಕೆ ಇದ್ದೇ ಇರುತ್ತದೆ. ಧೈರ್ಯವಾಗಿರಲು ಹಲ್ಲು ಕಚ್ಚಿ ಹಿಡಿದು ಕೂರುತ್ತೇನೆ. ಮಲಗಿದರೂ ಎಂಥೆಂಥದೋ ಕೆಟ್ಟ ಕನಸುಗಳು– ನಾನೆಲ್ಲೋ ಕಂದಕದಲ್ಲಿ ಒಬ್ಬಳೇ ಬಿದ್ದಿರುವಂತೆ, ನಾವು ಅವಿತಿರುವ ಮನೆಗೆ ಬೆಂಕಿ ಬಿದ್ದಂತೆ ಅಥವಾ ನಾತ್ಸಿ ಪೊಲೀಸರು ಬಂದು ನಮ್ಮನ್ನು ಎಳೆದೊಯ್ದಂತೆ ಭಾಸವಾಗುತ್ತದೆ. ಕೆಲವೊಮ್ಮೆ ಅದು ಕನಸೋ ನಿಜವೋ ತಿಳಿಯದೆ ಬೆಚ್ಚಿ ಬೀಳುತ್ತೇನೆ. ಇದೆಲ್ಲಾ ಅನುಭವಿಸುತ್ತಿದ್ದರೆ ನನ್ನ ಸಾವು ತೀರಾ ಹತ್ತಿರದಲ್ಲಿರುವಂತೆ ಭಾಸವಾಗುತ್ತದೆ.'

'ಈ ಪ್ರಪಂಚ ಮೊದಲಿನ ಹಾಗೆ ಸರಿ ಹೋಗುತ್ತದೆಂದು ಊಹಿಸಿಕೊಳ್ಳಲು ಸಾಧ್ಯವೇ ಇಲ್ಲ. ಎಷ್ಟೋ ಸಾರಿ ನಾನು 'ಯುದ್ಧ ಮುಗಿನನಂತರ..'ಎಂದು ಮಾತನಾಡುತ್ತೇನೆ. ಆದರೆ ಅದೆಲ್ಲಾ ಗಾಳಿಯಲ್ಲಿ ಕಟ್ಟುವ ಅರಮನೆ ಅಷ್ಟೆ. ಯುದ್ಧದ ಕೊನೆಯೇ ಕಾಣುತ್ತಿಲ್ಲ. ಅದು ದೂರ, ಬಹಳ ದೂರವಿದೆ – ದಂತಕತೆಯ ಹಾಗೆ. ನನ್ನ ಹಳೆಯ ಮನೆ, ಗೆಳೆಯರು, ಶಾಲೆಯಲ್ಲಿನ ಆಟ–ಪಾಠಗಳ ಬಗ್ಗೆ ಯೋಚಿಸಿದಾಗೆಲ್ಲಾ ನನಗನ್ನಿಸುತ್ತದೆ ಅಲ್ಲಿ ಇದ್ದುದು ನಾನಲ್ಲ, ಅದು ಬೇರೊಬ್ಬ ವ್ಯಕ್ತಿಯೇ ಎಂದು.'

ಸೆರೆಮನೆ ವಾಸ ಏನೆಂದರೆಂದು ಅರಿಯದ ಆನ್ ಫ್ರಾಂಕ್‌ಳಿಗೆ ಆ ಎರಡು ವರ್ಷಗಳ ಅನಿಶ್ಚಿತ ಖೈದು ನಿರಂತರ ಎನ್ನಿಸಿತ್ತು. ನಿರಾಳ, ಸ್ವತಂತ್ರ ಬದುಕಿಗೆ ಹಂಬಲಿಸುತ್ತಿದ್ದ ಆನ್ ಫ್ರಾಂಕ್‌ಳ ದಿನಚರಿಯಲ್ಲಿ ಮಹಾತ್ಮ ಗಾಂಧಿಯ ಉಲ್ಲೇಖವೂ ಇದೆ. 27ನೇ ಫೆಬ್ರವರಿ 1943ರಂದು, 'ಇಂಡಿಯಾದ ಸ್ವಾತಂತ್ರ್ಯ ಪ್ರಿಯ ಗಾಂಧಿ ತನ್ನ ಲೆಕ್ಕವಿಲ್ಲದಷ್ಟನೇ ಬಾರಿಯ ಉಪವಾಸ ಸತ್ಯಾಗ್ರಹ ಹೂಡುತ್ತಿದ್ದಾರೆ' ಎಂದು ಬರೆದಿದ್ದಾಳೆ.

ಆನ್ ಫ್ರಾಂಕ್‌ಳಿಗೆ ನಾಲ್ಕು ಗೋಡೆಗಳ ನಡುವಿನ ಸೆರೆವಾಸ ಅಸಹನೀಯವಾಗಿತ್ತು. ಸ್ವಾತಂತ್ರ್ಯದ ಶುಭ್ರಗಾಳಿಗಾಗಿ ತಹತಹಿಸುತ್ತಿದ್ದಳು. 'ಪ್ರತಿ ದಿನ ಬೆಳಿಗ್ಗೆ ನಿದ್ದೆಯಿಂದ ಎದ್ದಾಗ ಮಂಕಾಗಿರುವ ಮನಸ್ಸನ್ನು ಎಚ್ಚರಗೊಳಿಸಲು ತಕ್ಷಣ ಕಿಟಕಿಯ ಬಳಿ ಹೋಗಿ ಒಂಚೂರು ತೆರೆದು ಅಲ್ಲಿ ಮೂಗು ಸೇರಿಸಿ ಶುಭ್ರ ಗಾಳಿಯನ್ನು ಉಸಿರಾಡಲು ಯತ್ನಿಸುತ್ತೇನೆ. ಸ್ವಚ್ಛ ಗಾಳಿ ಒಳಹೋದಂತೆ ನಾನು ನಿದ್ದೆಯಿಂದ ಸಂಪೂರ್ಣ ಎಚ್ಚರಾಗುತ್ತೇನೆ.'

'ಯಾರಾದರೂ ಗೆಳೆಯರು ಹೊರಗಿನಿಂದ ನಮ್ಮ ಕತ್ತಲ ಕೋಣೆಗೆ ಬಂದಾಗ ಅವರ ಬಟ್ಟೆಗಳಲ್ಲಿ ಹರಿದಾಡಿದ ಶುಭ್ರ ಗಾಳಿಯನ್ನು ನೆನೆಸಿಕೊಂಡು, ಅವರ ಮುಖದಲ್ಲಿನ ತಾಜಾ ಥಂಡಿಯನ್ನು ನೋಡಿದಾಗಲೆಲ್ಲಾ ನನಗೆ ದುಃಖ ತಡೆಯಲಾಗದೆ, 'ನನಗೇಕೆ ಶುಭ್ರ ಗಾಳಿ ಉಸಿರಾಡುವ ಅವಕಾಶವಿಲ್ಲ?' ಎಂದು ಹೊದಿಕೆಗಳಲ್ಲಿ ಮುಖ ಹುದುಗಿಸಿ ಅತ್ತಿದ್ದೇನೆ.'





'ಕೆಲವೊಮ್ಮೆ ಈ ವಾತಾವರಣ ಅತ್ಯಂತ ಅಸಹನೀಯವಾಗುತ್ತದೆ, ಮುಖ್ಯವಾಗಿ ಭಾನವಾರಗಳಂದು. ಒಂದು ಪಕ್ಷಿ ಸಹ ಹಾಡುವುದು ಕೇಳುವುದಿಲ್ಲ. ಎಲ್ಲೆಲ್ಲೂ ಸಾವಿನಂತಹ ಮೌನ ನೇತಾಡುತ್ತಿರುತ್ತದೆ. ಎಲ್ಲಿ ಅದು ನನ್ನನ್ನು ಹಿಡಿದು ಪಾತಾಳಕ್ಕೆ ಎಳೆದುಕೊಂಡುಹೋಗಿಬಿಡುತ್ತದೋ ಎನ್ನುವ ಹೆದರಿಕೆಯಾಗುತ್ತದೆ. ಅಂಥ ಸಮಯಗಳಲ್ಲಿ ಈ ಮನೆಯಲ್ಲೇ ಅಲ್ಲಿ, ಇಲ್ಲಿ ಅಲೆದಾಡುತ್ತೇನೆ. ರೆಕ್ಕೆ ಕತ್ತರಿಸಿದ ಹಾಡುಹಕ್ಕಿ ಕತ್ತಲಲ್ಲಿ ತನ್ನ ಪಂಜರದ ಸರಳುಗಳಿಗೆ ಡಿಕ್ಕಿ ಹೊಡೆಯುವ ಹಾಗೆ. 'ಹೊರಗೆ ಹೋಗು, ನಲಿದಾಡು, ಶುಭ್ರ ಗಾಳಿಯನ್ನು ಮನಸಾರೆ ಉಸಿರಾಡು ಎಂದು ನನ್ನೊಳಗಿನ ಧ್ವನಿ ಕಿರುಚುತ್ತದೆ. ಆದರೆ ಸಾಧ್ಯವಿಲ್ಲ. ಹೋಗಿ ಮಲಗಿ ನಿದ್ರಿಸಲು ಯತ್ನಿಸುತ್ತೇನೆ. ಈ ಮೌನ ಮತ್ತು ಹೆದರಿಕೆಯನ್ನು ಕೊಲ್ಲಲು ನಿದ್ದೆಗಿಂತ ಬೇರೆ ದಾರಿಯೇ ಇಲ್ಲ.'



ಆನ್ ಫ್ರಾಂಕ್ ಹುಟ್ಟು ಬರಹಗಾರ್ತಿ. ಅಲ್ಲದೆ ಅಲ್ಲಿ ಗೆಳೆಯರು ತಂದುಕೊಡುತ್ತಿದ್ದ ಪುಸ್ತಕಗಳನ್ನೆಲ್ಲಾ ಓದುತ್ತಿದ್ದಳು. 'ನಾವು ಪ್ರತೀ ಶನಿವಾರ ಪುಸ್ತಕಗಳಿಗಾಗಿ ಎದುರು ನೋಡುತ್ತಿರುತ್ತೇವೆ, ಸಣ್ಣ ಮಕ್ಕಳು ಉಡುಗೊರೆಗಳಿಗೆ ಕಾಯುವ ಹಾಗೆ. ಹೀಗೆ ಅವಿತುಕೊಂಡಿರುವ ನಮ್ಮಂಥವರಿಗೆ ಪುಸ್ತಕಗಳ ಅವಶ್ಯಕತೆ ಎಷ್ಟಿದೆಯೆಂಬುದು ಸಾಮಾನ್ಯ ಜನರಿಗೇನು ಗೊತ್ತು?' ಯಾವುದಾದರೂ ಪುಸ್ತಕ ಚೆನ್ನಾಗಿದೆ ಎನ್ನಿಸಿದಲ್ಲಿ, ತಕ್ಷಣವೇ ನಿರ್ಧರಿಸುತ್ತಿದ್ದಳು, 'ನನ್ನ ಮಕ್ಕಳಿಗೆ ಈ ಪುಸ್ತಕ ಓದಲು ಕೊಡುತ್ತೇನೆ' ಎಂದು. ಅವಳ ಪ್ರಿಯವಾದ ವಿಷಯ ಗ್ರೀಕ್ ಮತ್ತು ರೋಮ್ ಪುರಾಣದ ಕತೆಗಳು.

ಆನ್ ಫ್ರಾಂಕ್‌ಳ ಮಹದಾಸೆ ಲೇಖಕಿ ಮತ್ತು ಪತ್ರಕರ್ತೆಯಾಗಬೇಕೆಂಬುದು. 'ನಾನು ಸಮಯ ಹಾಳು ಮಾಡಬಾರದು, ನಾನು ಬರೆಯಬೇಕು, ಪತ್ರಕರ್ತೆಯಾಗಬೇಕು. ಅದು ನನ್ನ ಮಹದಾಸೆ (ಅಥವಾ ಹುಚ್ಚುತನ?). ನಾನು ಬರೆಯಬಲ್ಲೆ. ಈಗಾಗಲೇ ನಾನು ಬರೆದಿರುವ ಕೆಲವು ಕತೆಗಳು ಚೆನ್ನಾಗಿವೆ. ನಾನು ಬರೆಯಬಲ್ಲವಳೆಂದು ನನ್ನ ದಿನಚರಿಯೇ ಹೇಳುತ್ತದೆ. ಆದರೆ ನನಗೆ ಬರೆಯುವ ಕಲೆ ಇದೆಯೋ ಇಲ್ಲವೋ ಗೊತ್ತಿಲ್ಲ. ನಾನು ಪುಸ್ತಕಗಳನ್ನು ಮತ್ತು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯಲು ಸಾಧ್ಯವಾಗದಿದ್ದಲ್ಲಿ, ಕನಿಷ್ಠ ನನಗಾಗಿಯಾದರೂ ಬರೆದುಕೊಳ್ಳುತ್ತೇನೆ.'

'ನಾನು ಬರೆಯತೊಡಗಿದಂತೆ ನನ್ನ ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತದೆ, ನನ್ನ ದುಃಖ ಮಾಯವಾಗುತ್ತದೆ. ನನ್ನಲ್ಲಿನ ಧೈರ್ಯ ಪುನಃಶ್ಚೈತನ್ಯಗೊಳ್ಳುತ್ತದೆ.'

'ನನಗೆ ನನ್ನ ಅಮ್ಮನ ಹಾಗೆ ಮತ್ತು ಶ್ರೀಮತಿ ವಾನ್ ಡಾನ್‌ಳ ಹಾಗೆ ಬದುಕುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ನನಗೆ ಗಂಡ ಮತ್ತು ಮಕ್ಕಳ ಜೊತೆಗೆ ಬೇರೇನಾದರೂ ಇರಬೇಕು. ಅದರಲ್ಲಿ ನನ್ನೇ ನಾನು ತೊಡಗಿಸಿಕೊಳ್ಳಬೇಕು.'

'ನನ್ನ ಸಾವಿನ ನಂತರವೂ ನಾನು ಬದುಕಬೇಕು' ಎಂದು ಆನ್ ಫ್ರಾಂಕ್ ಬರೆದಾಗ ಆಕೆ ತನ್ನ ದಿನಚರಿಯ ಬಗ್ಗೆ ಬರೆಯಲಿಲ್ಲ. ಅದಕ್ಕಿಂತ ಮಹತ್ತರವಾದುದನ್ನು ಬರೆಯಬೇಕು, ಕಾಲನ ಮಡಿಲಲ್ಲಿ ಶಾಶ್ವತವಾಗಿರುವ ಹಾಗೆ ಮಾಡಬೇಕೆಂದಿದ್ದಳು. ಆದರೆ ಕೊಲೆಗಡುಕ ಹಿಟ್ಲರ್ ಆನ್ ಫ್ರಾಂಕ್‌ಳಂಥ ಮುಗ್ಧ ಹಸುಳೆಯನ್ನೂ ಬಿಡಲಿಲ್ಲ.

'1942ರಿಂದ 1944ರವರೆಗಿನ ಅಜ್ಞಾತವಾಸದಲ್ಲಿ, ತನ್ನ ಅಪ್ಪ–ಅಮ್ಮ ಮತ್ತು ಅಕ್ಕ ಇದ್ದರೂ ಸೂಕ್ಷ್ಮಮತಿಯಾದ ಆನ್ ಫ್ರಾಂಕ್‌ಳಿಗೆ ಒಂಟಿತನ ಕಾಡುತ್ತಿತ್ತು. ಆಕೆಯಲ್ಲಿ ದೈಹಿಕ ಬದಲಾವಣೆಗಳಾಗಿ ಪ್ರೌಢಾವಸ್ಥೆಗೆ ಕಾಲಿಡುತ್ತಿರುವಂತೆ, ತನಗೊಬ್ಬ ಗೆಳೆಯ ಬೇಕೆಂದೆನ್ನಿಸಿ, ಅವರ ಜೊತೆಯಲ್ಲೇ ಇರುವ ವಾನ್ ಡಾಲ್‌ರ ಮಗ ಹದಿನಾರರ ವಯಸ್ಸಿನ ಪೀಟರ್‌ನಲ್ಲಿ ಅಂಥ ಗೆಳೆಯನನ್ನು ಹುಡುಕುವ ಪ್ರಯತ್ನ ಮಾಡುತ್ತಾಳೆ. 'ಯಾರೊಟ್ಟಿಗಾದರೂ ಮಾತನಾಡಬೇಕೆನ್ನುವ ತೀವ್ರ ಆಸೆ ನನಗರಿವಿಲ್ಲದೆ ಪೀಟರ್‌ನನ್ನು ಆಯ್ದುಕೊಳ್ಳುವಂತೆ ಮಾಡಿತು. ಅವನ ಆಳ ನೀಲಿ ಕಣ್ಣುಗಳಲ್ಲಿ ನೋಡುತ್ತಿದ್ದರೆ ಅವನ ಮನಸ್ಸನ್ನೇ ಓದಿಬಿಡಬಹುದು.'

'ನನ್ನ ವಯಸ್ಸು ಹೆಚ್ಚುತ್ತಿರುವಂತೆ ನನ್ನಲ್ಲಿನ ಪ್ರೀತಿ ಸಹ ಪ್ರೌಢವಾಗುತ್ತಿದೆ. ಈ ಪುಟ್ಟ ಹುಡುಗಿಯ ಮನಸ್ಸಿನಲ್ಲಿ ಇಷ್ಟೊಂದು ಅಲ್ಲೋಲ ಕಲ್ಲೋಲವಾಗುತ್ತಿದೆಯೆಂದು ಯಾರಿಗೆ ತಾನೆ ಗೊತ್ತಾಗಬಲ್ಲದು?' ಆ ಸೆರೆವಾಸದಲ್ಲೂ, ಸಾವಿನ ಹೆದರಿಕೆಯ ವಾತಾವರಣದಲ್ಲೂ ಪ್ರೀತಿ, ಪ್ರೇಮ ಅವಳ ಆಲೋಚನೆಗಳ ದಿಕ್ಕನ್ನೇ ಬದಲಿಸಿಬಿಡುತ್ತದೆ. 'ಈಗೀಗ ಬದುಕು ಹೆಚ್ಚು ಸುಂದರ ಎನ್ನಿಸುತ್ತಿದೆ, ಅದಕ್ಕೆ ಪೀಟರೇ ಕಾರಣ' ಎನ್ನುತ್ತಾಳೆ. 'ಬೆಳಗಿನಿಂದ ಸಂಜೆಯವರೆಗೂ ಪೀಟರ್‌ನನ್ನು ಭೇಟಿಯಾಗಲು ಕಾತರಿಸುತ್ತಿರುತ್ತೇನೆ. ಕಿಟ್ಟಿ, ನಾನು ನಿನ್ನೊಂದಿಗೆ ಸದಾ ಪ್ರಾಮಾಣಿಕವಾಗಿದ್ದೇನೆ, ನಿಜ ಹೇಳುತ್ತೇನೆ ಕೇಳು, ನಾನು ಜೀವಂತವಿರುವುದೇ ಆ ಭೇಟಿಗಳಿಂದ'

ಪೀಟರ್‌ನಿಂದಾಗಿ ಅವಳು ಬದುಕನ್ನು ನೋಡುವ ದೃಷ್ಟಿಯೇ ಬದಲಾಯಿತು. 'ನನಗನ್ನಿಸುತ್ತಿದೆ, ಈ ಬದುಕಿನಲ್ಲಿ ಇನ್ನೂ ಸೌಂದರ್ಯ ಉಳಿದಿದೆ ಎಂದು. ಈ ಪ್ರಕೃತಿಯಲ್ಲಿ ಸೂರ್ಯನ ಹೊಂಗಿರಣಗಳಲ್ಲಿ, ಸ್ವಾತಂತ್ರ್ಯದಲ್ಲಿ, ನಿನ್ನಲ್ಲಿಯೂ ಸಹ. ಇವುಗಳನ್ನು ನೋಡು, ಕಳೆದುಕೊಂಡ ನಿನ್ನನ್ನೇ ನೀನು ಹುಡುಕಿಕೊಳ್ಳಬಲ್ಲೆ. ಧೈರ್ಯ ಮತ್ತು ನಂಬಿಕೆ ಇರುವವರು ಎಂದಿಗೂ ದುಃಖದಲ್ಲಿ ಕೊಳೆಯಲಾರರು.'

'ನಾನು ನನ್ನ ದುಃಖಗಳನ್ನು ಯಾರೊಂದಿಗೂ ಹೇಳಿಕೊಂಡಿಲ್ಲ. ನನ್ನ ಅಮ್ಮನ ಭುಜಕ್ಕೊರಗಿ ಕಣ್ಣೀರು ಹಾಕಿಲ್ಲ. ಆದರೆ ಈಗ 'ಅವನ' ಭುಜಕ್ಕೊರಗಿ ಸದಾ ಹಾಗೇ ಇರಬೇಕೆನ್ನಿಸುತ್ತದೆ. ಈಗ ನನ್ನ ಬದುಕು ಎಷ್ಟು ಸುಧಾರಣೆಗೊಂಡಿದೆ! ದೇವರು ನನ್ನನ್ನು ಈ ಪ್ರಪಂಚದಲ್ಲಿ ಒಂಟಿಯಾಗಿ ಬಿಟ್ಟಿಲ್ಲ, ಬಿಡುವುದೂ ಇಲ್ಲ. ಪೀಟರ್ ನನ್ನ ಭಾವನೆಗಳನ್ನು ಸ್ಪರ್ಶಿಸಿದ ಹಾಗೆ ಇನ್ನಾರೂ ಸ್ಪರ್ಶಿಸಿಲ್ಲ.'

'ನಾನು ಕೆಲವೊಮ್ಮೆ ಭಾವುಕಳಾಗಿಬಿಡುತ್ತೇನೆ. ಇಲ್ಲಿ ಈ ಅಟ್ಟದ ಮೇಲೆ, ಕಸ ಧೂಳಿನ ಮಧ್ಯೆಯೂ ಸಹ ಪೀಟರ್ ಭುಜಕ್ಕೊರಗಿ, ಅವನು ನನ್ನ ಮುಂಗುರುಳಲ್ಲಿ ಕೈಯಾಡಿಸುವಾಗ, ತೆರೆದ ಕಿಟಕಿಯಲ್ಲಿ ಹಸಿರು ಮರಗಳನ್ನು ನೋಡುವಾಗ, ಪಕ್ಷಿಗಳು ಹಾಡುವುದನ್ನು ಕೇಳುತ್ತಾ ಮೈ ಮರೆತಿರುವಾಗ ಸೂರ್ಯ ಹೊರಗಿನ ಸ್ವಚ್ಛಂದ ಪ್ರಪಂಚಕ್ಕೆ ಬಾ ಎಂದು ಆಹ್ವಾನಿಸುತ್ತಾನೆ. ಹೋ! ನಾವು ಹೊರ ಹೋಗುವ ಹಾಗಿದ್ದಿದ್ದರೆ ಎಷ್ಟು

ಪುಟ 04 ಕ್ಕೆ

ಸಂಪಾದಕೀಯ

ಸಭಾಧ್ಯಕ್ಷರೇ, ಇಂತಹ ನೀತಿ ಪಾಠಕ್ಕೆ 'ಪ್ರೇರಣೆ' ಎಲ್ಲಿಂದ?

ಕರ್ನಾಟಕ ವಿಧಾನಸಭೆಯ ನೂತನ ಶಾಸಕರಿಗೆ ನಡೆಸಲಿರುವ ತರಬೇತಿ ಕಾರ್ಯಾಗಾರಕ್ಕೆ ಆಹ್ವಾನಿಸಲಾದ ಕೆಲವರ ಕುರಿತಂತೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಅವರು ವಿವಾದಿತ ಹಾಗೂ ಹಲವು ಪ್ರಮುಖ ಕ್ರಿಮಿನಲ್ ಮೊಕದ್ದಮೆಗಳನ್ನು, ಆರೋಪಗಳನ್ನು ಎದುರಿಸುತ್ತಿರುವವರು ಆಗಿದ್ದು ಅಂತಹವರಿಂದ ಎಂತಹ ನೈತಿಕತೆಯ ಪಾಠ ಹೇಳಿಸುವುದು ಎಂಬ ಪ್ರಶ್ನೆಯನ್ನು ಮುಂದಿಡಲಾಗಿದೆ. ಮೂವರು ಮತಧರ್ಮದ ಪ್ರತಿನಿಧಿಗಳು, ಒಬ್ಬರು ಬಲಪಂಥೀಯ ಪ್ರತಿಗಾಮಿ ಮೌಲ್ಯಗಳ ಸಮರ್ಥಕರು. ಮೇಲಾಗಿ ಅವರೆಲ್ಲಾ ಅತ್ಯಂತ ಬಲ ಪ್ರತಿಗಾಮಿ ಫ್ಯಾಶಿಸ್ಟ್ ಮನೋಭಾವದ ಸಿದ್ಧಾಂತದ ಪ್ರತಿಪಾದಕರು, ಪೋಷಕರೂ ಆಗಿದ್ದಾರೆ. ಅದು ಅವರ ವೈಯುಕ್ತಿಕ ನಂಬಿಕೆಯಾಗಿ ಇರಿಸಿಕೊಂಡರೆ ತಕರಾರಿಲ್ಲ. ಆದರೆ. ಪ್ರಜಾಪ್ರಭುತ್ವದ ಅತ್ಯುನ್ನತ ಅಂಗವಾದ ಶಾಸಕಾಂಗದ ಸದಸ್ಯರಿಗೆ ಅಂತಹವರಿಂದ ಪಾಠ, ಪ್ರವಚನ ಮಾಡಿಸಿದರೆ ಎಂತಹ ಪರಿಣಾಮ ಉಂಟಾದೀತು ಎನ್ನುವ ಆಕ್ಷೇಪವೂ ಇದೆ. ಇಂತಹ ನಿರ್ಧಾರ ಕೈಗೊಳ್ಳಲು ಸಭಾಧ್ಯಕ್ಷರು ಸ್ವತಂತ್ರರಾದರೂ ವರ್ತಮಾನದ ವಿದ್ಯಾಮಾನಗಳನ್ನು ಗಮನದಲ್ಲಿರಿಸಿ ಸೂಕ್ತವಾಗಿ ಸಮಾಲೋಚನೆಯನ್ನು ನಡೆಸಿ ನಿರ್ಧಾರ ಕೈಗೊಳ್ಳ ಬೇಕಿತ್ತು. ಅಂತಹ ಅದ್ಯಾತ್ಮವಾದಿಗಳು, ಧಾರ್ಮಿಕ ಪ್ರತಿನಿಧಿಗಳಿಂದ ಮಾತ್ರ ನೈತಿಕ ಪಾಠ, ಮಾನಸಿಕ ಪರಿಹಾರಗಳು ಸಿಗುತ್ತವೆ ಎಂದು ನಂಬುವುದೇ ಅಭಾಸ ಹಾಗೂ ಅವೈಜ್ಞಾನಿಕ. ಅಂಥವರು ಒಂದು ಮತ ಧರ್ಮದ ಪ್ರತಿನಿಧಿಗಳಾಗಬಹುದೇ ಹೊರತು ಇಡಿಯಾಗಿ ಮತನಿರಪೇಕ್ಷತೆಯ, ಬಹು ಸಂಸ್ಕೃತಿ ಮತ್ತು ಬಹುತ್ವದ ಪ್ರತಿನಿಧಿಗಳು ಆಗಿರುವುದಿಲ್ಲ. ವೈಯಕ್ತಿಕವಾಗಿ ಅಂತಹ ನಂಬಿಕೆಗಳನ್ನು ನೂತನ ಸಭಾಧ್ಯಕ್ಷರು ಇರಿಸಿಕೊಳ್ಳಬಹುದಾದರೂ ಸಂವಿಧಾನಾತ್ಮಕ ಸಂಸ್ಥೆಗಳಿಗೆ ತನ್ನದೇ ಆದಂತಹ ರೀತಿ, ನೀತಿ, ನಡವಳಿಕೆ, ನಿಯಮ ಮತ್ತು ತಾತ್ವಿಕ ಬದ್ಧತೆಗಳು ಇರುತ್ತವೆ ಎನ್ನುವುದನ್ನು ಅವರು ಅರ್ಥಮಾಡಿಕೊಳ್ಳಬೇಕು.

ನೂತನವಾಗಿ ಆಯ್ಕೆಗೊಂಡ ಸಂಸದರು ಅಥವಾ ಶಾಸಕರುಗಳಿಗೆ ಹಾಗೂ ಶಾಸಕಾಂಗದ ಈ ಪರಿವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೂ ಕಾಲದಿಂದ ಕಾಲಕ್ಕೆ ಸೂಕ್ತವಾದ ತರಬೇತಿಯನ್ನು ಮತ್ತು ಹೊಸ ವಿಷಯಗಳ ಕುರಿತು ಉಪನ್ಯಾಸಗಳನ್ನು ಏರ್ಪಡಿಸುವ ಮೂಲಕ ಪರಿಣಾಮಕಾರಿಯಾಗಿ ಈ ಅಂಗದೊಳಗೆ ಕೆಲಸ ಮಾಡಲು ತರಬೇತಿ ಕೊಡುವುದು ಇರುವ ಪರಿಪಾಠ. ಅದಕ್ಕಾಗಿಯೇ ಅಖಿಲ ಭಾರತ ಮಟ್ಟದಲ್ಲಿ ತರಬೇತಿ ನೀಡುವುದಕ್ಕಾಗಿ ಸಂಸ್ಥೆಯೊಂದು (ಪ್ರೈಡ್) ಕಾರ್ಯ ನಿರ್ವಹಿಸುತ್ತಿದೆ. ಇಂತಹ ತರಬೇತಿಗಳು ಪ್ರಮುಖವಾಗಿ, ಶಾಸಕಾಂಗದ ಕಾರ್ಯನಿರ್ವಹಣೆ, ವಿಧಿ ವಿಧಾನಗಳು, ಕಲಾಪಗಳು, ಕಲಾಪಗಳಲ್ಲಿ ಮಾನ್ಯ ಸದಸ್ಯರು ಭಾಗವಹಿಸುವ ರೀತಿ, ಹಕ್ಕು ಬಾಧ್ಯತೆಗಳು, ಅಲ್ಲದೆ ಹಲವು ತಾಂತ್ರಿಕವಾದ ಅಂಶಗಳ ಕುರಿತಾಗಿ ತರಬೇತಿ ನೀಡಲಾಗುತ್ತದೆ. ಶಾಸಕರ ಬಹುಮುಖಿ ಕಾರ್ಯಗಳ ನಿರ್ವಹಣೆಗೆ, ಪರಿಣಾಮಕಾರಿ ಕಾರ್ಯಕ್ಕೆ, ಸಾಮರ್ಥ್ಯ ಬೆಳೆಸಲು ಶ್ರಮಿಸಲಾಗುತ್ತದೆ. ಇಂತಹ ತರಬೇತಿಗಳಿಂದ ಪ್ರತಿಯೊಬ್ಬರ ಸಾಮರ್ಥ್ಯವು ಅಭಿವೃದ್ಧಿ ಆಗಬೇಕು, ಪರಿಣಾಮಕಾರಿಯಾಗಿ ಕಲಾಪಗಳಲ್ಲಿ ತೊಡಗಿ ಉತ್ತಮ ಸಂಸದೀಯ ಪಟು ಆಗಬೇಕು ಎನ್ನುವುದು ಅದರ ಆಶಯ.

ಕರ್ನಾಟಕದಲ್ಲಿಯೂ ಇಂತಹ ತರಬೇತಿಗಳನ್ನು ನೂತನವಾಗಿ ಆಯ್ಕೆಗೊಂಡ ಸದಸ್ಯರಿಗೆ ಮತ್ತು ಆಗೀಗ ವಿಶೇಷ ಕಾರ್ಯಾಗಾರಗಳನ್ನು ವ್ಯವಸ್ಥೆಗೊಳಿಸುವ ಪರಿಪಾಠವು ಇದೆ. ಈಗ ಇಂಥ ತರಬೇತಿ ಈಗಾಗಲೇ ಚಾಲ್ತಿಯಲ್ಲಿರುವ ಅಂಶಗಳಿಗೆ ಬದ್ಧವಾಗಿ ನೀಡಬೇಕಾಗಿತ್ತು. ಅಂತಹ ವಿಷಯ ತಜ್ಞರು, ಶಾಸಕಾಂಗದಲ್ಲಿ ನುರಿತ ಅನುಭವಿಗಳನ್ನು ಮಾತ್ರ ಆಹ್ವಾನಿಸಿ ಉಪನ್ಯಾಸ ಮಾಡಿಸಿದ್ದರೆ ಆಕ್ಷೇಪ ಬರುತ್ತಿರಲಿಲ್ಲ. ಆದರೆ ಸಭಾಧ್ಯಕ್ಷರಾದ ಯು.ಟಿ. ಖಾದರ್ ಅವರು ಈ ಸಂಸದೀಯ ಕ್ಷೇತ್ರದಲ್ಲಿ ತಜ್ಞರಲ್ಲದೇ ಇರುವ, ಧಾರ್ಮಿಕ ರಂಗದಲ್ಲಿರುವ ಕೆಲವರಿಂದ ನೈತಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಉಪನ್ಯಾಸ ಏರ್ಪಡಿಸಲು ಹೊರಟಿದ್ದಾರೆ. ಇದಕ್ಕಾಗಿ ಅವರು ಆಹ್ವಾನಿಸಿರುವ ರವಿಶಂಕರ್ ಗುರೂಜಿ, ಧರ್ಮಸ್ಥಳದ ವೀರೇಂದ್ರ ಹೆಗಡೆ, ಉಪನ್ಯಾಸಕಾರ ಗುರುರಾಜ ಕರ್ಜಗಿ, ಜಮಾತ್ ಮುಸ್ಲಿಂ ಹಿಂದ್ ಸಂಘಟನೆಯ ಮಹಮ್ಮದ್ ಕುಂಞ ಇವರುಗಳೆಲ್ಲರೂ ಧಾರ್ಮಿಕ ಪ್ರತಿನಿಧಿಗಳು, ಮೂಲಭೂತವಾದದ ಪ್ರತಿಪಾದಕರು. ಗುರೂಜಿ, ಹೆಗ್ಗಡೆ, ಕರ್ಜಗಿ ಇವರು ಸಂಘ ಪರಿವಾರದ ಬಳಗಕ್ಕೆ ಸೇರಿದ ಮತ್ತು ಸಂವಿಧಾನಕ್ಕೆ ವ್ಯತಿರಿಕ್ತವಾದ ಮೌಲ್ಯಗಳನ್ನು ಪ್ರತಿಪಾದಿಸುವವರು. ಅಲ್ಲದೆ ಹಲವು ಭೂಮಿ ವಶ ಹಾಗೂ ಸೌಜನ್ಯಾ ಹತ್ಯೆಯಂತಹ ಪ್ರಕರಣಗಳಲ್ಲಿ ಇವರ ಸಂಬಂಧಿಗಳ ಭಾಗಿತ್ವದ ಆರೋಪದ ಮುಳ್ಳು ಹೊತ್ತವರು ಅಥವಾ ತನಿಖೆ ಎದುರಿಸಬೇಕಾಗಿ ಬರಬಹುದಾದವರು. ಸಮಾಜವನ್ನು ಮತೀಯ ದ್ವೇಷದ ದಳ್ಳುರಿಯಲ್ಲಿ ಬೇಯಿಸುವವರನ್ನು ವಿರೋಧಿಸದ, ತಮ್ಮದೇ ಶೈಲಿಯಲ್ಲಿ ಸಮರ್ಥಿಸುವ ಇಂತಹವರನ್ನು, ಸಂವಿಧಾನಕ್ಕೆ ವ್ಯತಿರಿಕ್ತವಾದ ಮೌಲ್ಯಗಳನ್ನು ಪ್ರತಿಪಾದಿಸುವವರಿಂದ ಶಾಸಕರುಗಳಿಗೆ ಪ್ರೇರಣಾ ತರಗತಿಗಳನ್ನು ಕೊಡಿಸುವುದಾದರೆ ಪರಿಸ್ಥಿತಿ ಏನಾಗಬಹುದೋ ಎನ್ನುವುದರ ಕನಿಷ್ಠ ಪ್ರಜ್ಞೆ ಸಭಾಧ್ಯಕ್ಷರಿಗೆ ಇರಬೇಕಾಗಿತ್ತು. ತಮ್ಮ 'ಲೌಕಿಕ ವ್ಯವಹಾರ' ಜ್ಞಾನದಿಂದ ಮತ್ತು ಸರ್ವರನ್ನು ಸಂತೃಪ್ತಗೊಳ ಪಡಿಸುವ ಉದ್ದೇಶದಿಂದ ಇಂತಹ ನಿರ್ಧಾರವನ್ನು ಕೈಗೊಳ್ಳುವುದು ಸಭಾಧ್ಯಕ್ಷರ ಹೊಣೆಗಾರಿಕೆಯ ಸ್ಥಾನಕ್ಕೆ ಗೌರವ ತರುವಂತದ್ದಲ್ಲ. ಆಕ್ಷೇಪಗಳು ಬಂದ ನಂತರವೂ ಶಿಬಿರ ಮುಗಿದ ಮೇಲೆಯೇ ಏನಾದರೂ ಮಾತನಾಡಬೇಕು ಎನ್ನುವ ಹೇಳಿಕೆಯೂ ತೀರಾ ಉಡಾಫೆ ಉತ್ತರ ವಾಗಬಹುದು. ಇಲ್ಲಿ ಸಭಾಧ್ಯಕ್ಷರ ಅಪೇಕ್ಷೆಯ ಜೊತೆಗೆ ಅವರಿಗೆ ಸಹಾಯಕವಾಗಿರುವ ಸಲಹಾ ಹಾಗೂ ಸಿಬ್ಬಂದಿಯ ತಂಡದ ಪಾತ್ರವನ್ನೂ ತಳ್ಳಿ ಹಾಕುವಂತಿಲ್ಲ. ಆದರೆ ಸಭಾಧ್ಯಕ್ಷರಾದವರಿಗೆ ಸೂಕ್ಷ್ಮ ಸಂವೇದನೆಗಳು ಇರಬೇಕಾಗುತ್ತದೆ. ಸನ್ನಿವೇಶ, ಜನಾದೇಶ, ವಸ್ತು ಸ್ಥಿತಿ ಸಂಗತಿಗಳನ್ನು ಲಕ್ಷಿಸಿ ಸ್ವಯಂ ನಿರ್ಧಾರವನ್ನು ಕೈಗೊಳ್ಳಬೇಕಾಗುತ್ತದೆ. ಈ ವಿಷಯದಲ್ಲಿ ಸಭಾಧ್ಯಕ್ಷರು ಎಡವಿದ್ದಾರೆ. ತಮ್ಮ ವೈಯುಕ್ತಿಕ ಆಸೆ, ನಿಲುವುಗಳನ್ನು ಸಂವಿಧಾನಾತ್ಮಕ ಕಾರ್ಯದಲ್ಲಿ ತಂದಿರುವುದು ಸೂಕ್ತವಲ್ಲ. ಇದು ವಿವೇಚನಾಹೀನ ನಡೆ. ಸಭಾಧ್ಯಕ್ಷರ ನಡೆಗಳು ಸಂವಿಧಾನಾತ್ಮಕ ಶಾಸಕಾಂಗದ ಕಾರ್ಯನಿರ್ವಹಣೆಯ ಕುರಿತಾದಂತೆ ಸಮರ್ಥತೆಯನ್ನು ತರಲು ಆದ್ಯತೆ ಇರಬೇಕೇ ಹೊರತು ಮತಕ್ಷೇತ್ರದಲ್ಲಿ ಗೆಲುವಿಗೆ ಮಾಡಿಕೊಳ್ಳುವ ಚುನಾವಣೆಯ 'ಒಳ ಹೊಂದಾಣಿಕೆ'ಯಂತೆ ಇರಬಾರದು.

ಸಭಾಧ್ಯಕ್ಷರು ಈಗಲಾದರೂ ಸಂವಿಧಾನಾತ್ಮಕ ಹಾಗೂ ರಾಜಕೀಯ, ಸೈದ್ಧಾಂತಿಕ ಸೂಕ್ಷ್ಮತೆಗಳೊಂದಿಗೆ ತಮ್ಮ ನಿಲುವನ್ನು ಪುನರ್ ವಿಮರ್ಶಿಸಿಕೊಳ್ಳುವುದು ಅತೀ ಜರೂರಿದೆ. ಇಲ್ಲವಾದರೆ ಆರಂಭದಲ್ಲಿಯೇ ಸಂವಿಧಾನ ಮೌಲ್ಯಗಳ ವಿರೋಧಿ ನಡೆಯ, ಪಕ್ಕಾ ವ್ಯವಹಾರ ಬುದ್ದಿಯ, ನಿಷ್ಕಾಳಜಿಯ ಕಳಂಕ ಅಂಟಿಸಿ ಕೊಳ್ಳಬೇಕಾಗುತ್ತದೆ. ಹಾಗಾಗಿ ಶಾಸಕರ ಜೊತೆಗೆ ಸಭಾಧ್ಯಕ್ಷರಿಗೂ ಬೇಕಾಗಿದೆ ಸಂವಿಧಾನದ ನೀತಿ ನಿಯಮಗಳ ಪಾಠ.

ಸೌಜನ್ಯ ಪ್ರಕರಣ: ರಾವ್ ಅಪರಾಧಿ ಅಲ್ಲ ನಿಜ, ಹಾಗಾದರೆ ಅಪರಾಧಿಗಳು ಯಾರು?

ಈ ವಾರ

ಎಸ್.ವೈ. ಗುರುಶಾಂತ್

2012 ರಲ್ಲಿ ಬೆಳ್ತಂಗಡಿ ತಾಲೂಕಿನ ಉಜಿರೆಯಲ್ಲಿ ಅತ್ಯಾಚಾರಕ್ಕೀಡಾಗಿ ಹತ್ಯೆಯಾದ ಸೌಜನ್ಯ ಪ್ರಕರಣದ ತನಿಖೆ ನಡೆಸಿದ ಸಿಬಿಐ ವಿಶೇಷ ನ್ಯಾಯಾಲಯವು ಆರೋಪಿ ಒಬ್ಬಾತನನ್ನು ಖುಲಾಸೆಗೊಳಿಸಿದೆ. ಈ ತೀರ್ಪು ಹಲವು ಹೊಸ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಹತ್ಯೆಯನ್ನು ಪ್ರತಿಭಟಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್, ಸಿಐಟಿಯು, ಅಲ್ಲದೇ ಇನ್ನೂ ಹಲವಾರು ನಾಗರಿಕ ಸಂಘಟನೆಗಳು ಚಳುವಳಿ ನಡೆಸಿದ್ದವು. ನಿಜ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ನಿರಂತರ ಹೋರಾಟದ ಒತ್ತಡ ಹೆಚ್ಚಿದ ಬಳಿಕ ಮಾನಸಿಕ ಅಸ್ವಸ್ಥ ಎನ್ನಲಾಗಿದ್ದ ಸಂತೋಷ್ ರಾವ್ ಎನ್ನುವವರನ್ನು ಆರೋಪಿ ಎಂದು ಪೋಲೀಸರು ಬಂಧಿಸಿ ಜೈಲಿಗೆ ತಳ್ಳಿದ್ದರು. ಆದರೆ ಈ ವ್ಯಕ್ತಿ ಕೃತ್ಯ ಆ ಎಸಗಿದ್ದಾನೆ ಎಂಬುದನ್ನು ಹೋರಾಟ ನಡೆಸುತ್ತಿದ್ದ ಸಂಘಟನೆಗಳು, ಸೌಜನ್ಯಾಳ ಕುಟುಂಬ ಒಪ್ಪಿಯೇ ಇರಲಿಲ್ಲ. ಈ ಕೃತ್ಯದಲ್ಲಿನ ಅತ್ಯಂತ ಪ್ರಭಾವಿ ಪ್ರಮುಖರನ್ನು ರಕ್ಷಿಸಲೆಂದೇ ಒಬ್ಬ ಅಮಾಯಕನನ್ನು ಬಲಿ ಕೊಡಲಾಗುತ್ತಿದೆ ಎಂದೇ ಪ್ರತಿಭಟಿಸಲಾಗಿತ್ತು. ಈಗ ಸಿಬಿಐ ವಿಶೇಷ ನ್ಯಾಯಾಲಯ ನೀಡಿದ ತೀರ್ಪು ಅದನ್ನು ಸಮರ್ಥಿಸಿದೆ. ಅಪರಾಧಿಗಳು ಬೇರೆ ಇದ್ದಾರೆ ಎನ್ನುವುದನ್ನು ಧೃಡ ಪಡಿಸಿದೆ.

ಈ ತೀರ್ಪಿನ ಬಳಿಕ ಮತ್ತೆ ಮುನ್ನೆಲೆಗೆ ಬಂದಿರುವ ಪ್ರಶ್ನೆ ಆ ಅಪರಾಧಿಗಳು ಯಾರು? ಯಾರು ಪ್ರಭಾವಿ ಪ್ರಬಲರು? ಅವರನ್ನು ರಕ್ಷಿಸುತ್ತಿರುವವರು ಯಾರು? ಸೌಜನ್ಯಳ ಅತ್ಯಾಚಾರ, ಕೊಲೆಯಂತಹ ಒಂದು ಪ್ರಕರಣವನ್ನು ಭೇದಿಸಲಾಗದಷ್ಟು ನಮ್ಮ ಪೊಲೀಸ್ ವ್ಯವಸ್ಥೆ, ತನಿಖಾ ಸಂಸ್ಥೆಗಳು ದುರ್ಬಲವಾಗಿವೆಯೇ ಅಥವಾ ಹಾಗೆ ಮಾಡಲಾಗುತ್ತಿದೆಯೇ? ಅದೇ ಹೊತ್ತಿನಲ್ಲಿ ಮತ್ತೆ ಎತ್ತಲಾಗಿದ್ದ ಪ್ರಶ್ನೆ– ಪ್ರತಿ ವರ್ಷವೂ ಧರ್ಮಸ್ಥಳದ ಆ ಪ್ರದೇಶಕ್ಕೆ ಬಂದ ನೂರಾರು ಯುವತಿಯರು ಕಣ್ಮರೆಯಾಗುವುದು, ಕೊಲೆಯಾಗುವುದು, ನೇತ್ರಾವತಿ ನದಿಯಲ್ಲಿ ಹೆಣಗಳು ತೇಲುವುದು ಯಾಕೆ? ಅದರ ಹಿನ್ನೆಲೆ ಏನು? ಎನ್ನುವುವುದು ಇಂದಿಗೂ ಹಾಗೇ ಉಳಿದಿದೆ. ದಾಖಲಾದ ಪ್ರಕರಣಗಳು ಕಡತದಲ್ಲಿ ಧೂಳು ಹಿಡಿದು ಮೂಲೆ ಸೇರಿವೆ ಅಷ್ಟೇ. ನಮ್ಮ ಅರಕ್ಷಕ ವ್ಯವಸ್ಥೆ, ಸರಕಾರ ಕಣ್ಣು ಮುಚ್ಚಿ, ಕೈ ಕಟ್ಟಿ ಕುಳಿತಿವೆ ಏಕೆ?. ಆದರೆ ಅದಕ್ಕೆ ಇದುವರೆಗೂ ಉತ್ತರ ಸಿಕ್ಕಿಲ್ಲ! ಉತ್ತರ ಕಂಡುಕೊಳ್ಳುವ ಕಂಡು ಹಿಡಿಯುವ ಮನಸ್ಸು ಆಳುವವರಿಗೆ ಇಲ್ಲ!

ಹಾಗಾದರೆ ಸೌಜನ್ಯಳ ಪ್ರಕರಣದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ? ಈ ಪ್ರಶ್ನೆ ಹಾಗೂ ಉತ್ತರ ಅಗೋಚರವಾಗಿಯೇನೂ ಉಳಿದಿರಲಿಲ್ಲ. ಅಂದೇ ಸೂಕ್ತ ಸುಳಿವು ಮತ್ತು ಸ್ಪಷ್ಟ ಆರೋಪಗಳನ್ನು ಮಾಡಲಾಗಿತ್ತು. ನ್ಯಾಯಕ್ಕಾಗಿ ನಡೆವ ಈ ಹೋರಾಟವನ್ನು ಹೋರಾಟವನ್ನು ಬೆಂಬಲಿಸಿ ಎಂದು ಜನರ ನಡುವೆ ಹೋದಾಗ ಸಾಮಾನ್ಯ ಜನರು 'ಪ್ರಭಾವಿ'ಗಳತ್ತಲೇ ಬೊಟ್ಟು ಮಾಡಿದ್ದರು. ಪ್ರಕರಣದ ವಿವರಗಳು ಅಪರಾಧಿಗಳತ್ತ ತಪ್ಪಿಸಿಕೊಂಡು ಹೋದ ಜಾಡನ್ನು ತೋರುತ್ತಿದ್ದವು. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಸಹೋದರ ಸಂಬಂಧಿಗಳತ್ತ ಆರೋಪದ ಮುಳ್ಳಿತ್ತು. ಆದರೆ ಅಂದು ವಿಶೇಷ ತನಿಖೆ ನಡೆಸುತ್ತಿದ್ದ ಸಿಐಡಿ ಇಲಾಖೆ ಹೆಗ್ಗಡೆಯವರ ಕುಟುಂಬದ ಸದಸ್ಯರುಗಳಿಗೆ ಕ್ಲೀನ್ ಚಿಟ್ ನೀಡಿ ಬಿಟ್ಟಿತು. ಪ್ರಮುಖ ಆರೋಪಿತ ಹರ್ಷೇಂದ್ರ ಕುಮಾರ್ ಅವರ ಮಗ ನಿಶ್ಚಲ್ ಜೈನ್ ಹೆಸರು, ಆತನ ಬಾಗಿತ್ವದ ಬಗ್ಗೆ ಹೋರಾಟಗಾರರು ಪ್ರಬಲವಾಗಿ ಪ್ರಸ್ತಾಪಿಸಿದ್ದರು. ನಿಶ್ಚಲ್ ಜೈನ್ ಆ ಕೃತ್ಯ ನಡೆದ ದಿನ ಈ ದೇಶದಲ್ಲಿಯೇ ಇರಲಿಲ್ಲ ಎಂದು ಸಿಐಡಿ ಪೊಲೀಸರು ಹೇಳಿದ್ದರು. ಮಾತ್ರವಲ್ಲ, ಸೌಜನ್ಯಳ ಕುಟುಂಬ ಮತ್ತು ಹೋರಾಟಗಾರರು ಆರೋಪಿಸಿದ್ದ ಇತರೆ ಮೂವರ ಹೆಸರನ್ನು ಸಿಐಡಿ ಪೊಲೀಸರು ಗಮನಕ್ಕೂ ತೆಗೆದುಕೊಳ್ಳದೆ ಬಿಟ್ಟಿದ್ದರು! ಆ ಮೂವರೆಂದರೆ ಉದಯ್ ಜೈನ್ (ಆಟೋ ಡ್ರೈವರ್), ಮಲ್ಲಿಕ್ ಜೈನ್ (ಧರ್ಮಸ್ಥಳ ಕ್ಷೇತ್ರದಲ್ಲಿ ನೌಕರ), ಧೀರಜ್ ಜೈನ್– ಕೆಲ್ಲಾ (ಸಣ್ಣ ವ್ಯಾಪಾರಿ) ಇವರೆಲ್ಲ ಆ ಪರಿಸರದಲ್ಲೇ ಇರುವವರು. ಆ ನಡುವೆ ತಮ್ಮದೇನೂ ಪಾತ್ರ ಇಲ್ಲವೆಂದು ಈ ಮೂವರು ಮಾಧ್ಯಮಗೋಷ್ಠಿ ನಡೆಸಿ ಆರೋಪಗಳನ್ನು ನಿರಾಕರಿಸಿದ್ದರು. ನಿಶ್ಚಲ್ ಜೈನ್ ನ ಪಾಸ್ ಪೋರ್ಟ್ ಪ್ರಕಾರ ಆತ ಇಲ್ಲೇ ಇದ್ದನಂತೆ. ವಿಚಿತ್ರ ಎಂದರೆ ನಿಶ್ಚಲ್ ಜೈನ್ ನನ್ನೂ ಒಳಗೊಂಡು ಇವರಾರನ್ನೂ ಆಳವಾದ ತನಿಖೆಗೆ ಒಳ ಪಡಿಸಲೇ ಇಲ್ಲ!

ಉಜಿರೆಯ ಎಸ್.ಡಿ.ಎಂ. ಕಾಲೇಜಿನ ಪಿಯುಸಿ ವಿದ್ಯಾರ್ಥಿನಿ ಸೌಜನ್ಯ ಹತ್ಯೆಯಾದುದು 2012 ಸೆಪ್ಟಂಬರ್ 9 ರಂದು. ಆಗ ಅಧಿಕಾರದಲ್ಲಿದ್ದದ್ದು ಬಿಜೆಪಿ ಸರ್ಕಾರ, ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ. ಸಿಐಡಿ ತನಿಖೆ ಹಳ್ಳಹಿಡಿಯುತ್ತಿರುವುದು, ನಿಷ್ಪಕ್ಷಪಾತತೆ ನಿತ್ಯಹತ್ಯೆಯಾಗುತ್ತಿರುವುದು, ದೊಡ್ಡವರ ರಕ್ಷಣೆಯ ನಿದರ್ಶನಗಳು ಎದ್ದು ಕಾಣುತ್ತಿದ್ದುದರಿಂದ ಬದಲಾಗಿ ಸಿಬಿಐ ತನಿಖೆಗೆ ಒಪ್ಪಿಸಿ ಎಂಬ ಆಗ್ರಹ ಕೇಳಿ ಬಂತು. ಆದರೆ ಬಿಜೆಪಿ ಸರಕಾರ ಒಪ್ಪಿರಲಿಲ್ಲ. 2013 ಮೇ 13ರಂದು ಸಿದ್ಧರಾಮಯ್ಯನವರು ಮುಖ್ಯಮಂತ್ರಿ ಯಾದರು. ಕೇಂದ್ರದಲ್ಲಿ ಮನಮೋಹನಸಿಂಗ್ ಸರಕಾರವಿತ್ತು. 2013 ನವೆಂಬರ್ 6ರಂದು ರಾಜ್ಯ ಸರಕಾರದ ಗೃಹ ಸಚಿವ ಕೆ.ಜೆ.ಜಾರ್ಜ್ ಅವರು ನಿಷ್ಪಕ್ಷಪಾತ ತನಿಖೆಗಾಗಿ ಸಿಬಿಐಗೆ ಒಪ್ಪಿಸಲು ನಿರ್ಧರಿಸಿರುವುದಾಗಿ ಪ್ರಕಟಿಸಿದರು. 2014 ಮೇ 26 ರಂದು ಬಿಜೆಪಿಯ ನರೇಂದ್ರ ಮೋದಿ ಪ್ರಧಾನಮಂತ್ರಿಯಾದರು. ಸಿಬಿಐ ಪುಟ 04 ಕ್ಕೆ



ಮಂಗಳೂರು

ಅನ್ನಭಾಗ್ಯ: ಕೇಂದ್ರದಿಂದ ಅಕ್ಕಿ ನಿರಾಕರಣೆ ವಿರುದ್ಧ ರಾಜ್ಯಾದ್ಯಂತ ಸಿಪಿಎಂ ಪ್ರತಿಭಟನೆ

ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ಅಕ್ಕಿ ಕೊಡಲು ನಿರಾಕರಣೆ ಮಾಡಿದ್ದನ್ನು ವಿರೋಧಿಸಿ, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ನೇತೃತ್ವದಲ್ಲಿ ರಾಜ್ಯಾದ್ಯಂತ ಪ್ರತಿಭಟನೆ ನಡೆದಿದೆ.

ಬೆಂಗಳೂರು ಜಿಲ್ಲೆಯ ಆನೇಕಲ್, ಬಸವನಗುಡಿ, ಕೆಂಗೇರಿ, ಶಾಂತಿನಗರ ಮುಂತಾದ ಕಡೆಗಳಲ್ಲಿ, ಮಂಗಳೂರು, ಬಳ್ಳಾರಿ, ವಿಜಯನಗರ, ಬೆಳಗಾವಿ ಜಿಲ್ಲೆಯ ರಾಮದುರ್ಗ, ಮೈಸೂರು, ಚಿತ್ರದುರ್ಗ, ತುಮಕೂರು, ಕೊಪ್ಪಳ, ಮಂಡ್ಯ, ಮಳವಳ್ಳಿ, ಕಲಬುರ್ಗಿ, ಶಿವಮೊಗ್ಗ, ಗದಗ್, ಹಗರಿಬೊಮ್ಮನಹಳ್ಳಿ, ಸೇರಿದಂತೆ ವಿವಿಧ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ. ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿ ಕೆಲವು ಕಡೆಗಳಲ್ಲಿ ಪ್ರಧಾನಿ ಪ್ರತಿಕೃತಿ ದಹಿಸಿ ಆಕ್ರೋಶ ಹೊರಹಾಕಿದ್ದಾರೆ.

ಕರ್ನಾಟಕ ಸರಕಾರ ಜುಲೈ ಒಂದರಿಂದ ಎಲ್ಲ ಬಿಪಿಎಲ್, ಅಂತ್ಯೋದಯ ಕಾರ್ಡದಾರರಿಗೆ ಈಗ ನೀಡಲಾಗುತ್ತಿದ್ದ 5 ಕೆಜಿ ಅಕ್ಕಿಯನ್ನು ಹೆಚ್ಚಿಸಿ ತಲಾ 10 ಕೆಜಿ ಅಕ್ಕಿ ಅಥವಾ ಆಹಾರಧಾನ್ಯ ನೀಡಲು ನಿರ್ಧರಿಸಿ ಪ್ರಕಟಿಸಿದ್ದು ಸ್ವಾಗತಾರ್ಹವಾಗಿದೆ. ಆದರೇ, ಒಕ್ಕೂಟ ಸರಕಾರವು ರಾಜ್ಯಕ್ಕೆ ಹೆಚ್ಚುವರಿ ಆಹಾರಧಾನ್ಯ ನೀಡುವಲ್ಲಿ ಸಂಕುಚಿತ ರಾಜಕೀಯ ಮಾಡುತ್ತಿರುವುದು ತೀವ್ರ ಖಂಡನೀಯವಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರಕಾರದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಹೆಚ್ಚುವರಿ ಆಹಾರಧಾನ್ಯ ನೀಡಲು ಭಾರತ ಆಹಾರ ನಿಗಮದ ಅಧಿಕಾರಿಗಳು ಒಪ್ಪಿದ್ದರೂ ಕೂಡಾ, ಒಕ್ಕೂಟ ಸರಕಾರ ಬಡವರ ವಿರೋಧಿಯಾಗಿ ನಿಂತಿರುವುದು ಅಕ್ಷಮ್ಯವಾಗಿದೆ. ಬಿಜೆಪಿ ಮತ್ತು ಒಕ್ಕೂಟ ಸರಕಾರ ತಮ್ಮ ಸಂಕುಚಿತ ಜನ ವಿರೋದಿ ರಾಜಕಾರಣವನ್ನು ಈ ಕೂಡಲೇ



ಕೈ ಬಿಟ್ಟು ಒಪ್ಪಂದದಂತೆ ಭಾರತ ಆಹಾರ ನಿಗಮದ ಮೂಲಕ ಆಹಾರ ಧಾನ್ಯಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒಕ್ಕೂಟ ಸರಕಾರ ಹಾಗೂ ಪ್ರಧಾನ ಮಂತ್ರಿಗಳಿಗೆ ಆಗ್ರಹಿಸಲಾಯಿತು.

ರಾಜ್ಯ ಸರಕಾರದ ಈ ಯೋಜನೆಯು ಬಡವರ ಹಸಿವು ನೀಗಿಸಲು ನೆರವಾಗುವ ಯೋಜನೆಯಾಗಿದ್ದು ಇದು ಹಸಿವಿನ ಸೂಚ್ಯಂಕದಲ್ಲಿ ಅತ್ಯಂತ ತಳ ಮಟ್ಟದಲ್ಲಿರುವ ನಮ್ಮ ದೇಶವನ್ನು ಸ್ವಲ್ಪವಾದರೂ ಮೇಲೆತ್ತುವ ಯೋಜನೆಯೆಂಬುದನ್ನು ಒಕ್ಕೂಟ ಸರಕಾರ ಅರಿಯಬೇಕು. ಒಕ್ಕೂಟ ಸರಕಾರ ರಾಜ್ಯ ಹಿತದ ವಿರುದ್ಧ ನಗ್ನವಾಗಿ ನಿಂತಿರುವಾಗ ನಮ್ಮ ರಾಜ್ಯ ಬಹುತೇಕರು ಬಿಜೆಪಿ ಎಂಪಿ ಗಳಿರುವಾಗ ಅವರು ಬಾಯಿ ಹೊಲೆದುಕೊಂಡಿರುವುದು ಅವರ ವಿರೋದಿ ನೀತಿಯನ್ನು ಬಯಲುಗೊಳಿಸುತ್ತದೆ ಎಂದು ಪ್ರತಿಭಟನೆಕಾರರು ಕಟುವಾಗಿ ಟೀಕಿಸಿದರು.

ಜನರಿಗೆ ಆಹಾರಧಾನ್ಯದ ಬದಲು ನಗದು ವರ್ಗಾವಣೆ ಮಾಡುವಂತೆ ಸೂಚಿಸುವ ಬಿಜೆಪಿ ಧೋರಣೆಯು ಬಡವರ ಪರವಾಗಿರದೇ ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ಪರವಾದ ನೀತಿಯಾಗಿದೆ. ಒಕ್ಕೂಟ ಸರಕಾರದ ಈ ಜನ ವಿರೋಧಿ ನೀತಿಯನ್ನು ಖಂಡಿಸಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗಿದೆ ಎಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿ ಯು. ಬಸವರಾಜ ತಿಳಿಸಿದ್ದಾರೆ.





ಸೌಜನ್ಯ ಪ್ರಕರಣ..... ಪುಟ 3 ರಿಂದ

ತನಿಖೆಯ ಹೊಣೆ ವಹಿಸಿಕೊಂಡಿತಾದರೂ ಒಲ್ಲದ ಮನಸ್ಸಿನಿಂದ ಹೆಜ್ಜೆ ಇಡುತ್ತಿರುವುದು, ತನಿಖಾ ಕಛೇರಿ ಆರಂಭಿಸಿದರೂ ಸೀಮಿತ ಸಿಬ್ಬಂದಿ, ತನಿಖಾ ವಿಳಂಬ ಅದರ ಕಾರ್ಯತಂತ್ರವಾಗಿತ್ತು. ಆ ನಡುವೆ ಎಷ್ಟೋ ಸಾಕ್ಷಿಗಳು ನಾಶವಾಗಿ ಹೋದ, ಹೋಗುತ್ತಿರುವ ದೂರಿತ್ತು. ಈ ಅವಧಿಯಲ್ಲಿ ವೀರೇಂದ್ರ ಹೆಗ್ಗಡೆಯವರಿಗೆ ಕೇಂದ್ರದಿಂದ ಪದ್ಮಶ್ರೀ, ಭೂಷಣ ಇತ್ಯಾದಿ ಪ್ರಶಸ್ತಿಗಳು ಹುಡುಕಿ ಬಂದವು. ಬೇಕು ಬೇಡಗಳ ಚೌಕಾಸಿಯೂ ನಡೆಯಿತು. ಮುಂದೆ ಅವರು ಸಂಸದರೂ ಆದರು. ಸರಿ ಸುಮಾರು 11 ವರ್ಷಗಳ ಬಳಿಕ ಸಂತೋಷ್ ರಾವ್ ನಿರಪರಾಧಿ ಎಂಬ ಸತ್ಯವನ್ನು ಕೊನಗಾದರೂ ಸಿಬಿಐ ನ್ಯಾಯಾಲಯ ಘೋಷಿಸಿತು. ಮರು ತನಿಖೆಗೆ ಆದೇಶಿಸಿದ್ದರೆ ಒಳ್ಳೆಯದಿತ್ತು. ನ್ಯಾಯಾಲಯ ಸತ್ಯವನ್ನು ಹೊರ ತೆಗೆಯಿತು. ಉಳಿದ ಸತ್ಯದ ಹೆಗಲ ಮೇಲೇರಿ ಈಗಲೂ ಕುಳಿತಿದೆ ಹಾರಲಾಗದ ಅದೇ ಹಳೆಯ ಒಂದು ಪ್ರಶ್ನೆಯ ಹದ್ದು!

ವಿಳಂಬವಾದರೂ ಸಿಬಿಐ ನ್ಯಾಯಾಲಯ ನೀಡಿದ್ದು ಸ್ವಾಗತಾರ್ಹ ತೀರ್ಪು. ಏನೂ ಮಾಡದ ನಿರಪರಾಧಿ, ಮಾನಸಿಕ ಅಸ್ವಸ್ಥ ಸಂತೋಷರಾವ್ ಮಾಡದ ಕೆಲಸಕ್ಕೆ 'ದೊಡ್ಡವರ' ರಕ್ಷಿಸಲು ನಡೆಸಲಾದ ರಾಜ್ಯದ ಪೋಲೀಸರ ಮಸಲತ್ತಿಗೆ ಜೈಲುವಾಸದಂತಹ ಯಾತನೆಯ ಶಿಕ್ಷೆ ಅನುಭವಿಸಿದ್ದನ್ನು ಸರಕಾರ ಹೇಗೆ ಸರಿಪಡಿಸುತ್ತದೆ? ಅಂದೇ ಹೋರಾಟಗಾರರು ಸ್ಪಷ್ಟವಾಗಿಯೇ ಹೇಳಿದ್ದರಲ್ಲ, ರಾವ್ ಈ ಪ್ರಕರಣದ ನಿಜ ಆರೋಪಿ ಅಲ್ಲ, ಸಂಬಂಧವೂ ಇಲ್ಲ ಎಂದು.

ಈಗ ಉಳಿದೇ ಇರುವ ದೊಡ್ಡ ಪ್ರಶ್ನೆಗೆ ಉತ್ತರ ಹುಡುಕಲೇ ಬೇಕು. ಹಾಗಾದರೆ ನಿಜವಾದ ಕೊಲೆಗಾರರು, ಅಪರಾಧಿಗಳು ಯಾರು? ಈ ಪ್ರಕರಣದ ತನಿಖೆ ನಿಲ್ಲಬಾರದು. ಸೌಜನ್ಯ ಕುಟುಂಬ, ಬೆಂಬಲಿಸಿದವರು, ನ್ಯಾಯಕ್ಕಾಗಿ ಹೋರಾಡಿದವರು ಹೋರಾಟ ಮುಂದೆ ಕೊಂಡೊಯ್ಯಲು ಬಯಸಿದ್ದಾರೆ. ಈ ಹೋರಾಟ ನಿಲ್ಲಬಾರದು, ನಿಲ್ಲಲೇ ಬಾರದು. ಯಾಕೆಂದರೆ ಸೌಜನ್ಯಳ ಮೇಲೆಗಸಲಾದ ಅತ್ಯಾಚಾರ, ಕಗ್ಗೊಲೆ ಕೇಳಿ ಬರುತ್ತಿರುವ ಪ್ರಕರಣಗಳ ಸರಣಿಯಲ್ಲಿ ಒಂದು ಕೊಂಡಿ, ಗಟ್ಟಿ ಧ್ವನಿ ಪಡೆದ ಒಂದು ಪ್ರಕರಣ ಮಾತ್ರ.

ಈಗ ರಾಜ್ಯದಲ್ಲಿ ಸಿದ್ಧರಾಮಯ್ಯ ಮುಖ್ಯಮಂತ್ರಿ, ಕೇಂದ್ರದಲ್ಲಿ ನರೇಂದ್ರ ಮೋದಿ. ಬೀದಿಯಲ್ಲಿ ಸೌಜನ್ಯಾಳ ಕುಟುಂಬ, ನ್ಯಾಯಕ್ಕಾಗಿ ಆಗ್ರಹಿಸುತ್ತಿರುವ ಜನ, ಜನ ಸಂಘಟನೆಗಳು. 'ಪ್ರಭಾವಿ' ಕೊಲೆಗಡುಕರು!

ಸರಕಾರ ನೊಂದ ಜನರ ಆಗ್ರಹದ ಮಾತಿಗೆ ಕಿವಿ ಕೊಡುವುದೇ? ಮರು ತನಿಖೆಗೆ ಆದೇಶಿಸುವುದೇ? ಸತ್ಯದ ಹುಡುಕಾಟಕ್ಕೆ, ಕೊಲೆಗಡುಕರನ್ನು ಪತ್ತೆ ಮಾಡಲು ದೃಢ ಹೆಜ್ಜೆ ಇಡುವುದೇ? ಅಥವಾ ಪ್ರವಚನದ ಪುಣ್ಯ ಹಂಚುವುದೇ?

ಸಾವಿನ ನೆರಳಲ್ಲಿ ಪುಟ್ಟ ಹಕ್ಕಿಯ ಹಾಡು...... ಪುಟ 2 ರಿಂದ

ಚೆನ್ನಾಗಿರುತ್ತಿತ್ತು!'

ಆನ್ ಫ್ರಾಂಕ ಅಜ್ಞಾತವಾಸದ ಕೊನೆಯ ದಿನಗಳವು. ಆ ಕೊನೆಯ ದಿನಗಳ ಬದುಕಲ್ಲಿ ಪೀಟರ್ ಬೆಳ್ಳಿಯ ಬೆಳಕಾಗಿ ಬಂದ.

1944ರ ಆಗಸ್ಟ್ 4ರಂದು ಕೊನೆಗೂ ಸಾವು ನಾತ್ಸಿ ಪೊಲೀಸರ ರೂಪದಲ್ಲಿ ದಾಳಿ ಮಾಡಿತು. ಆನ್ ಫ್ರಾಂಕ್ ಮತ್ತು ಅವಳ ಅಕ್ಕ ಮಾರ್ಗಟ್‌ಗಳನ್ನು ಜರ್ಮನಿಯ ಬರ್ಗೆನ್–ಬೆಲ್ಸೆನ್ ಕಾನ್ಸಂಟ್ರೇಶನ್ ಕ್ಯಾಂಪಿಗೆ ಸಾಗಿಸಿದರು. ಅವರನ್ನು ರಕ್ಷಿಸಿದ್ದ ಡಚ್ ಗೆಳೆಯರನ್ನು ಅರೆಸ್ಟು ಮಾಡಿದರು. ವಾನ್ ಡಾಲ್‌ರನ್ನು ಗ್ಯಾಸ್ ಛೇಂಬರಿಗೆ ಹಾಕಿ ಕೊಂದರು. ಆನ್ ಫ್ರಾಂಕಳ ಅಪ್ಪನನ್ನು ಸಹ ಗ್ಯಾಸ್ ಛೇಂಬರಿಗೆ ಹಾಕಬೇಕೆಂದಿದ್ದರು. ಆದರೆ ಆತ ಅದೃಷ್ಟವಶಾತ್ ಪಾರಾದ. ಆತ ಕ್ಯಾಂಪಿನ ಆಸ್ಪತ್ರೆಯಲ್ಲಿರುವಾಗ 27ನೇ ಜನವರಿ 1945ರಂದು ರಷಿಯನ್ನರು ಆಕ್ರಮಣ ನಡೆಸಿ ಅವರನ್ನೆಲ್ಲ ಬಿಡುಗಡೆ ಮಾಡಿದರು. ಆತ ವಾಪಸ್ಸು ಬರುವಾಗ ಆತನ ಹೆಂಡತಿ 5ನೇ ಜನರಿಯಂದೇ ಸತ್ತುಹೋದ ವಿಷಯ ತಿಳೀಯಿತು. ರಷಿಯನ್ನರು ಆಕ್ರಮಣ ಮಾಡಬಹುದೆಂದು ಸುಮಾರು ಹನ್ನೊಂದು ಸಾವಿರ ಜನ ಸೆರೆಯಾಳುಗಳನ್ನು ಜರ್ಮನ್ನರು ಜರ್ಮನಿಗೆ ಎಳೆದುಕೊಂಡು ಹೋದರು. ಆ ಗುಂಪಿನಲ್ಲಿದ್ದ ಪೀಟರನ ಸುದ್ದಿ ಮತ್ತೆ ಯಾರೂ ಕೇಳಲೇ ಇಲ್ಲ.

ಇತ್ತ ಬರ್ಗೆನ್–ಬೆಲ್ಸೆನ್ ಕಾನ್ಸಂಟ್ರೇಶನ್ ಕ್ಯಾಂಪಿನಲ್ಲಿದ್ದ ಆನ್ ಫ್ರಾಂಕ್ ಮತ್ತು ಮಾರ್ಗಟ್ ಇಬ್ಬರಿಗೂ ಟೈಫಾಯ್ಡ್ ಬಂತು. ಒಂದು ದಿನ ಮೇಲಿನ ಬಂಕರ್‌ನಲ್ಲಿ ಮಲಗಿದ್ದ ಮಾರ್ಗಟ್ ಏಳಲು ಹೋಗಿ ಆಯತಪ್ಪಿ ಕೆಳಗೆ ಬಿದ್ದುಬಿಟ್ಟಳು. ಮೊದಲೇ ಶಿಥಿಲಗೊಂಡಿದ್ದ ಅವಳ ದೇಹ ಆ ಹೊಡೆತ ತಡೆಯಲಿಲ್ಲ. 'ಎಂತೆಂಥ ನೋವು, ಹಿಂಸೆ, ಹೆದರಿಕೆ ಸಹ ಕೊಲ್ಲದ ಆನ್‌ಳ ಧೈರ್ಯ, ಆತ್ಮವಿಶ್ವಾಸವನ್ನು ಮಾರ್ಗಟ್‌ಳ ಸಾವು ಕೊಂದುಬಿಟ್ಟಿತು. ಕೆಲವೇ ದಿನಗಳ ನಂತರ, ಹಾಲೆಂಡಿನ ಬಿಡುಗಡೆಗೆ ಎರಡು ತಿಂಗಳ ಮೊದಲು, ತನ್ನ ಹದಿನಾರನೇ ಹುಟ್ಟುಹಬ್ಬಕ್ಕೆ ಇನ್ನೂ ಮೂರು ತಿಂಗಳಿರುವಾಗ, ಮಾರ್ಚ್ 1945ರ ಮೊದಲ ವಾರದಲ್ಲಿ ಆನ್ ಫ್ರಾಂಕ್ ಸತ್ತುಹೋದಳು. ನಾತ್ಸಿಗಳ ಕೈಗೆ ಸಿಕ್ಕಿಬೀಳುವ ಇಪ್ಪತ್ತು ದಿನಗಳ ಮೊದಲಷ್ಟೇ 'ಜನರ ಹೃದಯದಲ್ಲಿ ಇನ್ನೂ ಒಳ್ಳೆಯತನವಿದೆ ಎಂಬ ನಂಬಿಕೆ ನನಗಿದೆ. ನನ್ನ ಭರವಸೆಗಳನ್ನು ಸಾವಿನ ಹೆದರಿಕೆ, ನೋವಿನ ಆಧಾರದ ಮೇಲೆ ಕಟ್ಟಲು ಸಾಧ್ಯವಿಲ್ಲ. ಇಡೀ ಪ್ರಪಂಚ ಕ್ರಮೇಣ ನಾಶವಾಗುತ್ತದೆ. ಸಾವಿನ ಆರ್ಭಟ ಹತ್ತಿರ ಹತ್ತಿರವಾಗುತ್ತಿರುವುದು ನನಗೂ ಕೇಳಿಸುತ್ತಿದೆ. ಸಾವಿರಾರು ಜನರ ನೋವು ನನಗೂ ತಿಳಿಯುತ್ತಿದೆ. ಆದರೂ ನಾನು ಮೇಲೆ, ಸ್ವರ್ಗದ ಕಡೆ ನೋಡುವಾಗಲೆಲ್ಲಾ, ಈ ಕ್ರೌರ್ಯ ಕೊನೆಗಾಣುತ್ತದೆ, ಜಗತ್ತಿನಲ್ಲಿ ಮತ್ತೆ ಸುಖ–ಶಾಂತಿ ನೆಲೆಸುತ್ತದೆಂಬ ನಂಬಿಕೆ ಬರುತ್ತದೆ' ಎಂದು ಬರೆದಿದ್ದಳೂ.

ತಾನು ಯೆಹೂದಿಯಾಗಿ ಆಗಿ ಹುಟ್ಟಿದ್ದಕ್ಕೆ ಯಾವ ಕ್ರೌರ್ಯ, ಹಿಂಸೆಗೆ ಹೆದರಿದ್ದಳೋ, ಅದೇ ಕ್ರೌರ್ಯ, ದ್ವೇಷದ ಮುಷ್ಠಿಯಲ್ಲಿ ನಲುಗಿಹೋದಳು. ಹಿಟ್ಲರನ ಕಾನ್ಸಂಟ್ರೇಶನ್ ಕ್ಯಾಂಪ್‌ನಲ್ಲಿ ಏಳು ತಿಂಗಳುಗಳು ಕಾಲ ತಾನು ಅನುಭವಿಸಿದ ಯಾತನೆ, ನೋವುಗಳನ್ನು ಹಂಚಿಕೊಳ್ಳಲು ಆನ್ ಫ್ರಾಂಕಳ ಜೊತೆ ಅವಳ ಆತ್ಮೀಯ 'ಕಿಟ್ಟಿ' ಇರಲಿಲ್ಲ. ಯಾವ ಕ್ಯಾಂಪಿನ ಬದುಕು ಅತ್ಯಂತ ಕಠೋರ, ಅಮಾನವೀಯ ಎಂದುಕೊಂಡಿದ್ದಳೋ, ಅದೇ ಕ್ಯಾಂಪಿನಲ್ಲಿ ಕಳೆದ ದಿನಗಳ ಹಿಂಸೆಯ ಅನುಭವವನ್ನು ದಾಖಲಿಸಲು ಹಾಗೂ ಬರಹದ ಮೂಲಕ ಬದುಕಲು ಧೈರ್ಯವನ್ನು ಪುನಃಶ್ಚೇತನಗೊಳಿಸಿಕೊಳ್ಳಲು ಆನ್ ಫ್ರಾಂಕ್‌ಳಿಗೆ ಅವಕಾಶವೇ ಸಿಗಲಿಲ್ಲ.

ಫ್ರಾಂಕ್ ಕುಟುಂಬ ಅವಿತುಕೊಂಡಿದ್ದ ಮನೆಗೆ ದಾಳಿ ಮಾಡಿ ಸಿಕ್ಕ ವಸ್ತುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿದ್ದ ನಾತ್ಸಿಗಳ ಕೈಗೆ ಆನ್ ಫ್ರಾಂಕಳ ದಿನಚರಿ ಸಿಕ್ಕಿರಲಿಲ್ಲ. ಹಳೆಯ ಪುಸ್ತಕ–ಪತ್ರಿಕೆಗಳ ರಾಶಿಯಲ್ಲಿ ಬಿದ್ದಿದ್ದ ದಿನಚರಿ ಹಾಗೂ ಅವಳು ಬರೆದಿದ್ದ ಇನ್ನಿತರ ಕತೆ, ಲೇಖನಗಳನ್ನು ಡಚ್ ಗೆಳತಿಯಾದ ಮೀಪ್ ತೆಗೆದಿಟ್ಟಿದ್ದು ಅವಳ ತಂದೆ ವಾಪಸ್ಸಾದಾಗ ಆತನಿಗೆ ಕೊಟ್ಟರು. ಅವಳ ದಿನಚರಿ 'ದ ಡೈರಿ ಆಫ್ ಎ ಯಂಗ್ ಗರ್ಲ್' ಹೆಸರಿನಲ್ಲಿ ಪ್ರಕಟವಾಗಿ ಜಗತ್ಪ್ರಸಿದ್ಧವಾಯಿತು.

'ನನ್ನ ಸಾವಿನ ನಂತರವೂ ಜೀವಿಸಿರಬೇಕು' ಎಂದ ಆನ್ ಫ್ರಾಂಕ್ ಇಂದು ತನ್ನ ಮನದಾಳದ ಮಾತುಗಳನ್ನು ಹಂಚಿಕೊಂಡ 'ಕಿಟ್ಟಿ'ಯಿಂದಾಗಿ ಇಂದಿಗೂ ನೆನಪುಗಳಲ್ಲಿ ಜೀವಂತವಿದ್ದಾಳೆ.

ಆನ್ ಫ್ರಾಂಕ್‌ಳ ಕುಟುಂಬಕ್ಕೆ ನೆರವಾದ ಮೀಪ್ 2010ರಲ್ಲಿ ತನ್ನ ನೂರನೇ ವರ್ಷದಲ್ಲಿ ತೀರಿಕೊಂಡಳು. ಆಕೆ ಅವರು ಅವಿತುಕೊಂಡಿರುವಾಗ ಅವರಿಗೆ ಬ್ರೆಡ್, ತರಕಾರಿ ಮುಂತಾದುವನ್ನು ಪೂರೈಸುತ್ತಿದ್ದವಳು. ಅಷ್ಟಾದರೂ ಆಕೆ ಕೊನೆಯ ದಿನಗಳಲ್ಲಿ ತನ್ನ ಸಹಾಯ ಅಷ್ಟು ಮಹತ್ವದ್ದೇನಲ್ಲ, ಯೆಹೂದಿಗಳ ರಕ್ಷಣೆಗೆ ಹಾಲೆಂಡಿನಲ್ಲಿ ಇನ್ನೂ ಹೆಚ್ಚಿನ ಸಹಾಯ ಮಾಡಿದವರಿದ್ದಾರೆ ಎಂದಿದ್ದಳು. ಅಷ್ಟಲ್ಲದೆ ಆಕೆ ಆನ್ ಫ್ರಾಂಕಳ ದಿನಚರಿಯ 'ರಾಯಭಾರಿ'ಯೂ ಆದಳು. ಆ ದಿನಚರಿಯ ಬಗೆಗೆ ವಿವರಣೆ ನೀಡುತ್ತಾ, ನಾತ್ಸಿಗಳ 'ನರಮೇಧ'ವನ್ನು ವಿರೋಧಿಸಿ ಮಾತನಾಡುತ್ತಿದ್ದಳು. 1998ರಲ್ಲಿ ಸಂದರ್ಶನವೊಂದರಲ್ಲಿ ಆಕೆ ಆನ್ ಮತ್ತು ಇತರ ಏಳು ಜನರಿಗೆ ರಕ್ಷಣೆ ನೀಡಿದ್ದು ಒಂದು 'ಸಹಜ ಕ್ರಿಯೆ'ಯಾಗಿತ್ತಷ್ಟೆ ಎಂದಿದ್ದಳು. 'ಅವರು ನಿಸ್ಸಹಾಯಕರಾಗಿದ್ದರು, ಎಲ್ಲಿಗೂ ಹೋಗಲು ಅವರಿಗೆ ಸಾಧ್ಯವಿರಲಿಲ್ಲ, ಯಾರಿಂದಲೂ ಸಹಾಯ ಪಡೆಯುವ ಸ್ಥಿತಿಯಲ್ಲಿರಲಿಲ್ಲ... ನಾವು ಮನುಷ್ಯರಂತೆ ನಮ್ಮ ಕರ್ತವ್ಯ ನಿರ್ವಹಿಸಿದೆವು: ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದೆವು' ಎಂದು ಹೇಳಿದ್ದಳು. ಆ ಸಮಯದಲ್ಲಿ ಆಕೆ ನಾತ್ಸಿಗಳ ಕೈಗೆ ಸಿಕ್ಕಿಹಾಕಿಕೊಂಡಿದ್ದರೆ ಆಕೆಗೂ ಸಾವು ಕಾದಿರುತ್ತಿತ್ತು ಎಂಬುದು ಬೇರೆ ಮಾತು.

ಮಹಿಳೆಯರ ಉಚಿತ ಬಸ್ ಪ್ರಯಾಣದ ಸೌಲಭ್ಯದ ಬಗ್ಗೆ ಕೊಂಕು ಮಾತನಾಡುವವರಿಗೇನೂ ಕಡಿಮೆ ಇಲ್ಲ, ಅದು ನಿಲ್ಲುತ್ತಿಲ್ಲ. ಮಹಿಳೆಯರು ಇಷ್ಟೊಂದು ಪ್ರಮಾಣದಲ್ಲಿ ಪಯಣಿಸುತ್ತಿದ್ದಾರೆ ಎಂದರೆ ಏನರ್ಥ?

ಜನರ ಬದುಕಿನ ಆರ್ಥಿಕ ದುಸ್ಥಿತಿಯ ಮೇಲೆ ಬೆಳಕು ಚೆಲ್ಲಿದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ





ಸಿ. ಸಿದ್ದಯ್ಯ

ಬಾಣಂತಿ ತಾಯಿ ತನ್ನ ರವಿಕೆಯ ಗುಂಡಿಯ ಮೇಲೆ ಬೆರಳಿಟ್ಟು ರವಿಕೆ ಸಡಿಲಗೊಳಿಸುವುದನ್ನು ಕಂಡ ಎಳೆಯ ಕಂದ ಹಾಲು ಕುಡಿಯಲು ತವಕಿಸುತ್ತದೆ ಎಂದರೆ, ಆ ಮಗುವಿಗೆ ಹಸಿವಾಗಿದೆ, ಅದಕ್ಕೆ ತಕ್ಷಣಕ್ಕೆ ಹಾಲಿನ ಅಗತ್ಯವಿದೆ ಎಂದರ್ಥ.

ಯಾರೋ ದಾನಿಗಳು ಅನ್ನದಾನ ಮಾಡುತ್ತಾರೆ ಎಂದರೆ ಸಾಲುಗಟ್ಟಿ ನಿಂತು ಕೈಚಾಚಿ ಅನ್ನ ಪಡೆದು ತಿನ್ನಲು ಯಾವುದೇ ಹಿಂಜರಿಕೆ ಇಲ್ಲ ಎಂದಾದರೆ ಆ ಬಡವರಿಗೆ ಹಸಿವಿದೆ ಎಂದರ್ಥ.

ಇಂದಿರಾ ಕ್ಯಾಂಟೀನುಗಳಲ್ಲಿ ಸಾಲುಗಟ್ಟಿ ನಿಂತು 5, 10 ರೂಪಾಯಿ ಕೊಟ್ಟು ತಿಂಡಿ, ಊಟ ಪಡೆದು ತಿನ್ನುತ್ತಾರೆ ಎಂದರೆ, ಹೊಟೆಲುಗಳಲ್ಲಿ ದುಬಾರಿ ಹಣ ಕೊಟ್ಟು ತಿಂಡಿ ತಿನ್ನುವ, ಊಟ ಮಾಡುವ ಅಥವಾ ಮನೆಯಲ್ಲಿ ಅಡುಗೆ ಮಾಡಿ ತಿನ್ನುವ ಆದಾಯ ಅವರಿಗಿಲ್ಲ ಎಂದರ್ಥ. ಇಂದಿರಾ ಕ್ಯಾಂಟೀನ್ ಇಲ್ಲದಿದ್ದಲ್ಲಿ ಅರೆಹೊಟ್ಟೆಯಲ್ಲೋ ಅಥವಾ ಒಪ್ಪತ್ತಿನ ಊಟ ತಿಂದೋ ಇರುತ್ತಾರೆ ಎಂದರ್ಥ.

ಚುನಾವಣೆಯ ಲಾಭಕ್ಕೆ ಯಾವುದೋ ರಾಜಕೀಯ ಪಕ್ಷದ ಸಂಭಾವ್ಯ ಅಭ್ಯರ್ಥಿಯೊಬ್ಬರು ಮಹಿಳೆಯರನ್ನು ಉಚಿತವಾಗಿ ದೂರದ ಪ್ರಸಿದ್ಧ ದೇವಸ್ಥಾನಗಳಿಗೆ ಕೊರೆದೊಯ್ಯುವ ವ್ಯವಸ್ಥೆ ಮಾಡಿದರೆ, ಮಹಿಳೆಯರು ಈ ಉಚಿತದ ಅವಕಾಶವನ್ನು ಬಳಕೆ ಮಾಡಿಕೊಳ್ಳುತ್ತಾರೆ ಎಂದರೆ, ಆ ಮಹಿಳೆಯರಿಗೆ ದೂರದ ದೇವಸ್ಥಾನಗಳನ್ನು ನೋಡುವ ಬಯಕೆ ಇದೆ, ತಮ್ಮ ಆ ಬಯಕೆ ಪೂರೈಸಿಕೊಳ್ಳಲು ಅವರ ಬಳಿ ಅಗತ್ಯವಾದಷ್ಟು ಹಣವಿಲ್ಲ ಎಂದರ್ಥ.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಎಂದಾಗ ಬಸ್ಸುಗಳು ಮಹಿಳೆಯರಿಂದ ತುಂಬಿ ತುಳುಕುತ್ತಿವೆ ಎಂದರೆ, ಹಣ ಕೊಟ್ಟು ಪ್ರಯಾಣಿಸುವ ಆರ್ಥಿಕ ಸಾಮರ್ಥ್ಯ ಆ ಮಹಿಳೆಯರಿಗೆ ಮತ್ತು ಅವರ ಕುಟುಂಬಗಳಿಗೆ ಇಲ್ಲ ಎಂದರ್ಥ.

ಈ ಎಲ್ಲಾ ಘಟನೆಗಳು ದೇಶದ ಮತ್ತು ಜನಸಾಮಾನ್ಯರ ಆರ್ಥಿಕ ದುಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತವೆ. ಜನರು ತೀರ್ಥ ಕ್ಷೇತ್ರಗಳ ದರ್ಶನ ಮಾಡಬೇಕು, ಪುರಾತನ ದೇವಾಲಯಗಳ ದರ್ಶನ ಮಾಡಬೇಕು, ಐತಿಹಾಸಿಕ ಸ್ಥಳಗಳನ್ನು ನೋಡಬೇಕು, ರಾಜರ ಅರಮನೆಗಳು, ನದಿಗಳು, ಅಣೆಕಟ್ಟುಗಳು, ಜಲಪಾತಗಳು, ದೂರದ ಬೆಟ್ಟ ಗುಡ್ಡಗಳು, ಇವೆಲ್ಲವನ್ನೂ ಒಮ್ಮೆಯಾದರೂ ನೋಡಿ ಕಣ್ತುಂಬಿಕೊಳ್ಳಬೇಕೆಂಬ ತಮ್ಮ ಆಸೆ, ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲಾದ ಕೆಟ್ಟ ಆರ್ಥಿಕ ಪರಿಸ್ಥಿತಿ ಅವರದು ಎಂಬುದನ್ನು ಈ ಎಲ್ಲಾ ಘಟನೆಗಳು ಸೂಚಿಸುತ್ತವೆ.

ಮಾರುಕಟ್ಟೆಯಲ್ಲಿ ಹಣದ ಹರಿವು ಕಡಿಮೆಯಾಗಿರುವುದು, ಸರಕು ಮತ್ತು ಸೇವೆಗಳ ವ್ಯಾಪಾರ ವಹಿವಾಟು ಕುಂಟಿತಗೊಂಡಿರುವುದು, ಉತ್ಪಾದನಾ ವಲಯ ಅಭಿವೃದ್ಧಿ ಹೊಂದದೇ ಇರುವುದು, ಸಣ್ಣ, ಮಧ್ಯಮ ಕೈಗಾರಿಕೆಗಳು ಮುಚ್ಚುತ್ತಿರುವುದು, ನಿರುದ್ಯೋಗ ಸಮಸ್ಯೆ ಹೆಚ್ಚಾಗಿರುವುದು, ದೇಶದ ಬೆಳವಣಿಗೆಗೆ ಅಡ್ಡಿಯಾಗಿರುವುದು ಇವೆಲ್ಲವಕ್ಕೂ ಕಾರಣ ಅಗತ್ಯವಾದ ಆದಾಯ ಇಲ್ಲದಿರುವುದೇ ಆಗಿದೆ ಎಂಬುದರ ಮೇಲೆ ಈ ಘಟನೆಗಳು ಬೆಳಕು ಚೆಲ್ಲುತ್ತವೆ. ಇದಕ್ಕೆ ಕಾರಣ ಭಾರತ ಸರ್ಕಾರದ ಉಳ್ಳವರ ಪರವಾದ ಮತ್ತು ಜನವಿರೋಧಿ ನವ ಉದಾರವಾದಿ ನೀತಿಗಳು ಹಾಗೂ ಅದು ಅನುಸರಿಸುತ್ತಿರುವ ಮುಕ್ತ ಆರ್ಥಿಕ ನೀತಿಗಳು ಎಂಬುದನ್ನು ಹೇಳದೇ ಇರಲಾಗದು.

ಬಯಕೆಗಳನ್ನು ಅದುಮಿಟ್ಟು ಬದುಕುತ್ತಿರುವ ಮಹಿಳೆಯರು

"ಮಾನವನಾಗಿ ಹುಟ್ಟಿದ್ಮೇಲೆ ಏನೇನ್ ಕಂಡಿ" ಈ ಹಾಡಿನಲ್ಲಿ "ಸಾಯೋತನಕ ಸಂಸಾರದೊಳಗೆ ಗಂಡಾಗುಂಡಿ. ಹೇರಿಕೊಂಡು ಹೋಗೋದಿಲ್ಲ ಸತ್ತಾಗ್ ಬಂಡಿ . ಇರೋದ್ರೊಳಗೆ ಒಮ್ಮೆ ನೋಡು ಜೋಗಾದ್ ಗುಂಡಿ" ಡಾ. ರಾಜ್‌ಕುಮಾರ್ ಅವರ ಈ ಹಾಡು ನೆನಪಿಗೆ ಬರುತ್ತದೆ. ಈ ಹಾಡು ಕೇಳಿದ ಯಾರಿಗಾದರೂ ಒಮ್ಮೆಯಾದರೂ ಜೋಗದ ಜಲಪಾತ ನೋಡಬೇಕೆಂಬ ಬಯಕೆ ಹುಟ್ಟೇ ಹುಟ್ಟುತ್ತದೆ. ಆದರೆ, ತಮ್ಮ ಈ ಬಯಕೆಯನ್ನು ತೀರಿಸಿಕೊಳ್ಳಲಾಗದ ಆರ್ಥಿಕ ಸಂಕಷ್ಟ ಅವರದು. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಯೋಜನೆ ಈ ಮಹಿಳೆಯರಿಗೆ ಮಾತ್ರವಲ್ಲ, ಆಕೆಯ ಕುಟುಂಬದ ಪುರುಷರಿಗೂ ಅವರ ಈ ಎಲ್ಲಾ ಆಕಾಂಕ್ಷೆಗಳನ್ನು ಸ್ವಲ್ಪಮಟ್ಟಿಗಾದರೂ ಪೂರೈಸಿಕೊಳ್ಳಲು ಸಾಧ್ಯವಾಗಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಅದು ನೀಡಿದ ಚುನಾವಣಾ ಭರವಸೆಯಂತೆ ಐದು ಗ್ಯಾರಂಟಿಗಳಲ್ಲಿ ಒಂದಾದ ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ವ್ಯವಸ್ಥೆಯನ್ನು ಜೂನ್ 11ರಿಂದ ರಾಜ್ಯಾದ್ಯಂತ ಜಾರಿಗೆ ತಂದಿದೆ. ಈ ಯೋಜನೆ ಜಾರಿಗೆ ಬಂದ ನಂತರ ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರ ಪ್ರಯಾಣ ಹೆಚ್ಚಾಗಿದೆ. ಜೊತೆಗೆ ಪುರುಷ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಿದೆ. ಧಾರ್ಮಿಕ ಕ್ಷೇತ್ರಗಳಿಗೆ ಪ್ರಯಾಣ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಧಾರ್ಮಿಕ ಕ್ಷೇತ್ರಗಳು ಭಕ್ತರಿಂದ ತುಂಬಿ ತುಳುಕುತ್ತಿವೆ. ಅಲ್ಲಿನ ವ್ಯಾಪಾರ ವಹಿವಾಟುಗಳಲ್ಲಿ ಹೆಚ್ಚಳ ಕಂಡಿದೆ. ಹೋಟೆಲ್‌ಗಳು, ವಸತಿ ಗೃಹಗಳು ತುಂಬಿ ತುಳುಕುತ್ತಿವೆ. ಈ ಕ್ಷೇತ್ರಗಳಿಗೆ ಹಾದು ಹೋಗುವ ರಸ್ತೆಗಳ ಬದಿಯ ಮತ್ತು ಹಾದಿಯಲ್ಲಿ ಸಿಗುವ ಊರುಗಳಲ್ಲಿನ ವ್ಯಾಪಾರಿಗಳ ವ್ಯಾಪಾರದಲ್ಲಿ ಹೆಚ್ಚಳ ಕಂಡಿದೆ.

ಉಚಿತ ಬಸ್ ಪ್ರಯಾಣದಿಂದ ತೀರ್ಥ ಕ್ಷೇತ್ರಗಳಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿದೆ ಎಂಬುದನ್ನು ಬದಿಗಿಟ್ಟು ಮತ್ತೊಂದು ದಿಕ್ಕಿನಂತ ಯೋಚಿಸಬೇಕಿದೆ. ಉಚಿತ ಎಂದರೆ ಮಹಿಳೆಯರು ಹೀಗೇಕೆ ಮುಗಿಬಿದ್ದು ತೀರ್ಥ ಕ್ಷೇತ್ರಗಳಿಗೆ ಹೋಗತೊಡಗಿದ್ದಾರೆ? ಹಣ ಕೊಟ್ಟು ಪ್ರಯಾಣ ಮಾಡಿ ತೀರ್ಥ ಕ್ಷೇತ್ರಗಳಿಗೆ, ದೂರದ ದೇವಸ್ಥಾನಗಳಿಗೆ ಹೋಗಬಹುದಿತ್ತಲ್ಲ? ಎಂದು ಕೇಳುವವರೂ ಇದ್ದಾರೆ. ಇಂತಹವರು ಜನರ ಇಂದಿನ ಆರ್ಥಿಕ ಸಂಕಷ್ಟಗಳ ಕಡೆಗೂ ಗಮನ ಹರಿಸಬೇಕಿದೆ. ಪ್ರಯಾಣದ ವೆಚ್ಚ ಭರಿಸಲಾಗದಷ್ಟು ಆರ್ಥಿಕ ಸಂಕಷ್ಟ, ಬಡತನ ಆ ಕುಟುಂಬಗಳಿಗಿದೆ ಎಂದರ್ಥ.

ಹುಂಡಿಯಲ್ಲಿ ದಿನವೂ ಒಂದಷ್ಟು ಹಣ ಹಾಕಿ, ಆ ಹಣದಿಂದ ತೀರ್ಥಯಾತ್ರೆ ಮಾಡಿ ಎಂದು ಕೆಲವರು ಸಲಹೆ ಕೊಡುತ್ತಾರೆ. ಬಡವರು ದೇವರಿಗೆಂದೇ ಹುಂಡಿಗೆ ಹಣ ಹಾಕುವುದೆಂದರೆ, ತಾವು ತಿನ್ನುವ ಆಹಾರಕ್ಕೆ ಮಾಡುವ ವೆಚ್ಚವನ್ನು ಇನ್ನಷ್ಟು ಕಡಿಮೆ ಮಾಡಿ ಎಂದಂತಾಗುತ್ತದೆ. ಅರೆಹೊಟ್ಟೆ ತಿನ್ನುವವರು ಕಾಲು ಹೊಟ್ಟೆ ತಿನ್ನಿ ಎಂದಂತಾಗುತ್ತದೆ.

ನಡೆದೇ ಹೋಗುತ್ತಿದ್ದ ಕಾರ್ಮಿಕರು ಈಗ ಬಸ್ಸುಗಳಲ್ಲಿ

ಇದು ತೀರ್ಥಯಾತ್ರೆಗಳಿಗೆ, ದೂರದ ಊರುಗಳಲ್ಲಿರುವ ನೆಂಟರಿಷ್ಟರ ಮನೆಗಳಿಗೆ ಹೋಗುವವರ ಕತೆಯಾದರೆ, ಬಸ್ಸಿಗೆ ಹಣ ಕೊಡಲಾಗದೆ, ದಿನನಿತ್ಯ ಎರಡು ಮೂರು ಕಿ.ಮೀ ದೂರವಿರುವ ಕೆಲಸದ ಸ್ಥಳಗಳಿಗೆ ಒಂದೆರಡು ಗಂಟೆ ನಡೆದೇ ಹೋಗಿಬರುವ ಗಾರ್ಮೆಂಟ್ಸ್‌ಗಳಲ್ಲಿ, ಸಣ್ಣ ಪುಟ್ಟ ಕಾರ್ಖಾನೆಗಳಲ್ಲಿ, ಮಾಲ್ ಗಳಲ್ಲಿ, ಅಂಗಡಿಗಳಲ್ಲಿ ದುಡಿಯುತ್ತಿರುವವರಿಗೆ, ಮನೆಗೆಲಸ ಮಾಡುವವರಿಗೆ, ನಗರ ಪಾಲಿಕೆಯ ಸ್ವಚ್ಛತಾ ಕಾರ್ಯದಲ್ಲಿನ ಸಿಬ್ಬಂದಿಗಳಿಗೆ ಹೀಗೆ ಬಹಳಷ್ಟು ಮಹಿಳಾ ಕಾರ್ಮಿಕರಿಗೆ ಉಚಿತ ಬಸ್ ಪ್ರಯಾಣ ಯೋಜನೆ ತುಂಬಾ ಅನುಕೂಲಕರವಾಗಿದೆ. ಈ ದುಡಿಯುವ ಮಹಿಳೆಯರು ನಡೆದೇ ಕೆಲಸದ ಸ್ಥಳಕ್ಕೆ ಹೋಗಿ ಬರಲು ವ್ಯರ್ಥವಾಗುತ್ತಿದ್ದ ತಮ್ಮ ಅಮೂಲ್ಯ ಸಮಯ ಉಳಿಯುತ್ತದೆ. ಈ ಸಮಯವನ್ನು ಹೆಚ್ಚಿನ ವಿಶ್ರಾಂತಿ ಪಡೆಯಲು, ಮಕ್ಕಳು ಮತ್ತು ಗಂಡನ ಜೊತೆ ಹೆಚ್ಚು ಸಮಯ ಕಳೆಯಲು ಅವಕಾಶ ಮಾಡಿಕೊಟ್ಟಿದೆ. ಕಿ.ಮೀ ದೂರ ನಡೆಯಲು ಬಳಕೆ ಮಾಡುವ ದೈಹಿಕ ಶ್ರಮ ಕಡಿಮೆಯಾಗುತ್ತದೆ. ಮೊದಲಿಗಿಂತ ಸ್ವಲ್ಪ ಹೆಚ್ಚು ಲವಲವಿಕೆಯಿಂದ ಕೆಲಸ ಮಾಡಲು ಅನುಕೂಲವಾಗುತ್ತದೆ.

ಬೆಂಗಳೂರು ನಗರದಲ್ಲಿ ಬಿಎಂಟಿಸಿ ಬಸ್ಸುಗಳಲ್ಲಿ ದೂರದ ಸ್ಥಳಗಳಿಗೆ ಕೆಲಸಕ್ಕೆ ಹೋಗಿ ಬರುವ ಮಹಿಳೆಯರು 1050 ರೂ ಕೊಟ್ಟು ಮಾಸಿಕ ಬಸ್ ಪಾಸ್ ಖರೀದಿಸುತ್ತಿದ್ದರು. ಉಚಿತ ಪ್ರಯಾಣದಿಂದ ಪ್ರತಿ ತಿಂಗಳಿನ ಈ ವೆಚ್ಚ ಉಳಿತಾಯವಾಗುತ್ತದೆ. ಕೆಎಸ್ ಆರ್ ಟಿಸಿ ಬಸ್ಸುಗಳಲ್ಲಿ ಪಾಸ್ ಪಡೆದು ಪ್ರತಿನಿತ್ಯ ದೂರದ ಊರುಗಳಿಗೆ ಕೆಲಸಕ್ಕೆ ಹೋಗಿ ಬರುವ ಮಹಿಳೆಯರಿಗೆ ಪ್ರಯಾಣದ ವೆಚ್ಚ ಉಳಿಯುತ್ತದೆ. ಇದರ ಜೊತೆಗೆ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳಾದ ಮನೆಯೊಡತಿಗೆ ಗೃಹಲಕ್ಷ್ಮಿ, ನಿರುದ್ಯೋಗಿ ಪದವೀದರರಿಗೆ ಯುವನಿಧಿ, ಬಿಪಿಎಲ್ ಕುಟುಂಬಗಳ ಸದಸ್ಯರಿಗೆ ತಲಾ 10 ಕೆಜಿ ಅಕ್ಕಿ, 200 ಯೂನಿಟ್ ವರೆಗಿನ ಉಚಿತ ವಿದ್ಯುತ್ ಇವೆಲ್ಲವೂ ಜನರ ಸಂಕಷ್ಟಗಳಿಗೆ ಒಂದಷ್ಟು ಪರಿಹಾರ ನೀಡುತ್ತವೆ. ಉಳಿತಾಯದ ಈ ಹಣದಲ್ಲಿ ತಮಗೆ ಅಗತ್ಯವಾದ ಸರಕುಗಳನ್ನು ಕೊಳ್ಳುತ್ತಾರೆ. ಇದು ಮಾರುಕಟ್ಟೆಯಲ್ಲಿ ಹಣದ ಹರಿವು ಹೆಚ್ಚಲು ಕಾರಣವಾಗುತ್ತದೆ. ಸರಕುಗಳ ಬೇಡಿಕೆ ಹೆಚ್ಚುತ್ತದೆ. ಸರಕುಗಳ ಉತ್ಪಾದನೆಗೆ ಒಂದಷ್ಟು ಉದ್ಯಮಗಳು ಹುಟ್ಟಿಕೊಳ್ಳುತ್ತವೆ. ಇದರಿಂದ ಉದ್ಯೋಗ ಸೃಷ್ಟಿಯಾಗುತ್ತದೆ. ಸ್ವಲ್ಪಮಟ್ಟಿಗೆ ನಿರುದ್ಯೋಗ ಸಮಸ್ಯೆ ಕಡಿಮೆಯಾಗುತ್ತದೆ.

ಇದನ್ನು ಹೇಳುವಾಗಲೂ, ಇವಿಷ್ಟೇ ಜನರ ಇಂದಿನ ಸಮಸ್ಯೆಗಳಿಗೆ ಸಂಪೂರ್ಣ ಪರಿಹಾರವಲ್ಲ ಎಂಬುದನ್ನು ಅರಿಯಬೇಕಿದೆ. ಕಾಂಗ್ರೆಸ್, ಬಿಜೆಪಿ ಯಂತಹ ಆಳುವ ಬಂಡವಾಳಶಾಹಿ ಪಕ್ಷಗಳು ಹೊಂದಿರುವ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ನೀತಿಗಳು ಇಂತಹ ಜನಪರ ಯೋಜನೆಗಳನ್ನು ಕೊಚ್ಚಿಕೊಂಡು ಹೋಗುತ್ತವೆ ಎಂಬುದನ್ನು ಮರೆಯಬಾರದು. ಈ ಜನವಿರೋಧಿ LPG ನೀತಿಗಳ ವಿರುದ್ಧ ಬಲಿಷ್ಠ ಹೋರಾಟವೊಂದೇ ಇಂತಹ 'ಗ್ಯಾರಂಟಿ'ಗಳನ್ನು ಉಳಿಸಿಕೊಳ್ಳಲು ಮತ್ತು ಮತ್ತಷ್ಟು ಗಳಿಸಿಕೊಳ್ಳಲು ಸಾಧ್ಯ.

ಕೇರಳದ ವಿರುದ್ಧ ಕೇಂದ್ರ ಸರ್ಕಾರದ ಆರ್ಥಿಕ ದಿಗ್ಬಂಧನ

ರಾಜ್ಯದ ಜನತೆಗೆ ನೀಡಿದ ವಾಗ್ದಾನಗಳನ್ನು ಅನುಷ್ಠಾನಕ್ಕೆ ತರುವ ರಾಜ್ಯ ಸರಕಾರಗಳ ಪ್ರಯತ್ನಗಳಿಗೆ ಕೇಂದ್ರ ಸರಕಾರ ಅಡ್ಡಿ–ಆತಂಕಗಳನ್ನು ಒಡ್ಡುವುದನ್ನು ಈ ದಿನಗಳಲ್ಲಿ ದೇಶ ಕಾಣುತ್ತಿದೆ. ಇದಕ್ಕೆ ಇತ್ತೀಚಿನ ಉದಾಹರಣೆಯನ್ನು ನಾವು ಕರ್ನಾಟಕದಲ್ಲಿ ಕಾಣುತ್ತಿದ್ದೇವೆ. ಇದಕ್ಕೆ ಮೊದಲು, ಕೇಂದ್ರ ಸರಕಾರದ ಇಂತಹ ಮನೋಭಾವದಿಂದಾಗಿ ತನ್ನ ಯೋಜನೆಗಳಿಗೆ ತಾನೇ ಹಣಕಾಸು ಎತ್ತುವ ಕೇರಳದ ಎಲ್‌ಡಿಎಫ್ ಸರಕಾರದ ಪ್ರಯತ್ನಗಳಿಗೂ ಹೆಚ್ಚೆಚ್ಚು ಮಿತಿ ಹೇರುತ್ತ ಕೇಂದ್ರ ಸರಕಾರ ಆರ್ಥಿಕ ದಿಗ್ಬಂಧನ ಹೇರಲು ಹೊರಟಿದ್ದು ಬಹಳಷ್ಟು ಮಂದಿಯ ಗಮನಕ್ಕೆ ಬಂದಂತಿಲ್ಲ. ಸಾರ್ವಜನಿಕ ಸಾಲ ಎತ್ತುವಳಿಯ ವ್ಯಾಖ್ಯಾನವನ್ನೇ ಬದಲಿಸಿ ಕಳೆದ ವರ್ಷದಲ್ಲಿ ಸಾಲ ಎತ್ತಲು ಇರುವ 3.5%ಮಿತಿಯನ್ನು 2.2%ಕ್ಕೆ ಇಳಿಸಿತ್ತು. ಈ ಬಾರಿ ಅದನ್ನು 2%ಕ್ಕೆ ಇಳಿಸಿದೆ. ಸಾಲ ಎತ್ತುವಳಿ, ವಿತ್ತೀಯ ಕೊರತೆ ಇತ್ಯಾದಿ ಹಣಕಾಸು ನಿರ್ವಹಣೆಗಳ ನಿಯಮಾವಳಿಗಳು ಕೇಂದ್ರ ಸರಕಾರಕ್ಕೂ ಮತ್ತು ರಾಜ್ಯ ಸರಕಾರಕ್ಕೂ ಸಮಾನವಾಗಿ ಅನ್ವಯವಾಗುತ್ತವೆ. ಆದರೆ ಈ ನಿಯಮಾವಳಿಗಳನ್ನು ಸ್ವತಃ ಎಂದೂ ಪಾಲಿಸದ ಕೇಂದ್ರ ಸರಕಾರ, ಅವನ್ನು ಪಾಲಿಸುವ ರಾಜ್ಯ ಸರಕಾರಗಳ ವಿರುದ್ಧ ಮನಬಂದಂತೆ ನಿಯಮಗಳನ್ನು ಬದಲಿಸುತ್ತ, ಅವನ್ನು ಹಿಂದಿನಿಂದಲೇ ಜಾರಿಯಾಗುವಂತೆ ಅನ್ವಯಿಸುತ್ತ ಬಾರುಕೋಲು ಎತ್ತುತ್ತದೆ ಎನ್ನುತ್ತಾರೆ ಈ ವಿದ್ಯಮಾನವನ್ನು ವಿಶ್ಲೇಷಿಸಿರುವ ಈ ಲೇಖನದಲ್ಲಿ ಕೇರಳದ ಮಾಜಿ ಹಣಕಾಸು ಮಂತ್ರಿಗಳು.

ಟಿ.ಎಂ. ಥಾಮಸ್ ಐಸಾಕ್ — **ಅನು: ಜಿ.ಎಸ್.ಮಣಿ**

ಕೇರಳ ರಾಜ್ಯದ ಸಾರ್ವಜನಿಕ ಸಾಲ ಎತ್ತುವಳಿಯ ಮೇಲೆ ಕಡಿತ ಹೇರಿದ ಕೇಂದ್ರ ಸರ್ಕಾರದ ಕ್ರಮ ಕೇರಳದ ಸಾರ್ವಜನಿಕ ಹಣಕಾಸಿನ ಮೇಲೆ ಮಾಡಿದ ಒಂದು ದುರಾಕ್ರಮಣ. 'ಹಣಕಾಸು ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ ಕಾನೂನಿ'ನ ಪ್ರಕಾರ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ(ಜಿ.ಎಸ್.ಡಿ.ಪಿ.)ಯ ಶೇ. 3 ರಷ್ಟನ್ನು ಸಾಲ ಎತ್ತುವ ಹಕ್ಕು ರಾಜ್ಯ ಸರ್ಕಾರಗಳಿಗಿವೆ. ವಿದ್ಯುತ್ ವಲಯದ ಕೆಲವು ಶರತ್ತುಗಳನ್ನು ಪಾಲಿಸಿದರೆ ಜಿ.ಎಸ್.ಡಿ.ಪಿ.ಯ ಶೇ 0.5 ರಷ್ಟನ್ನು ಅಧಿಕವಾಗಿ ಎರವಲು ಪಡೆವ ಹಕ್ಕಿದೆ. ಆದರೆ ಕೇಂದ್ರದ ಇತ್ತೀಚಿನ ಪತ್ರವೊಂದು ಕೇರಳ ರಾಜ್ಯದ ಎರವಲು ಪಡೆವ ಹಕ್ಕು ರಾಜ್ಯದ ಜಿ.ಎಸ್.ಡಿ.ಪಿ.ಯ ಶೇ 2 ರಷ್ಟು ಮಾತ್ರ ಎನ್ನುತ್ತದೆ. ಇದು ಕಳೆದ ವರ್ಷ ರಾಜ್ಯದ ಸಾಲ ಎತ್ತುವ ಮಿತಿಯನ್ನು ಶೇ 3.5 ರಿಂದ ಶೇ 2.2 ಕ್ಕೆ ಇಳಿಸಿದ್ದರ ಮುಂದುವರಿಕೆಯಂತೆ ಕಾಣುತ್ತದೆ. ಈ ವರ್ಷಕ್ಕೆ ಇದನ್ನು ಶೇ 2 ಕ್ಕೆ ಇಳಿಸಲಾಗಿದೆ.

ಕೇರಳದ ಒಟ್ಟು ಉತ್ಪಾದನೆ (ಜಿ.ಎಸ್.ಡಿ.ಪಿ.) ಸುಮಾರು 11 ಲಕ್ಷ ಕೋಟಿ ರೂಪಾಯಿಗಳಷ್ಟಾಗಬಹುದು ಎಂದು ನಿರೀಕ್ಷಿಸಲಾಗಿದೆ. ಶೇ 3.5 ರಷ್ಟು ಎರವಲು ಪಡೆಯಬಹುದು ಎಂದರೆ ಅದು 38000 ಕೋಟಿ ರೂಪಾಯಿಗಳಷ್ಟಾಗುತ್ತದೆ. ಶೇ 3 ರಷ್ಟು ಎಂದರೂ 33000 ಕೋಟಿ ರೂಪಾಯಿಗಳಷ್ಟಾಗುತ್ತದೆ. ಕೇಂದ್ರ ಸರ್ಕಾರ ಮೊದಲ ಒಂಬತ್ತು ತಿಂಗಳುಗಳ ಅವಧಿಗೆ 15390 ಕೋಟಿ ರೂಪಾಯಿಗಳ ಸಾರ್ವಜನಿಕ ಸಾಲ ಎತ್ತಬಹುದೆಂಬ ಮತ್ತು ನಂತರದ ಮೂರು ತಿಂಗಳುಗಳಲ್ಲಿ 5131 ಕೋಟಿ ರೂಪಾಯಿಗಳ ಸಾರ್ವಜನಿಕ ಸಾಲ ಎತ್ತಬಹುದೆಂಬ ಆಜ್ಞೆ ಹೊರಡಿಸಿದೆ. ಇದರ ಪರಿಣಾಮವಾಗಿ 2023–24 ರ ಹಣಕಾಸು ವರ್ಷದಲ್ಲಿ 20690 ಕೋಟಿ ರೂಪಾಯಿಗಳ ಸಾಲ ಎತ್ತುವಳಿ ಮಾಡಬಹುದೆಂದಾಗುತ್ತದೆ. ಕೇರಳ ವಿಧಾನಸಭೆ ಅನುಮೋದಿಸಿದ ಆಯ– ವ್ಯಯದಲ್ಲಿ 17310 ಕೋಟಿ ರೂಪಾಯಿಗಳ ಬೃಹತ್ ಕೊರತೆಯನ್ನು ಇದು ಉಂಟುಮಾಡುತ್ತದೆ!

ವ್ಯಾಖ್ಯಾನವನ್ನೇ ಬದಲಿಸುವ ತಂತ್ರ

ಕೇಂದ್ರ ಸರ್ಕಾರ ಮಾಡಿರುವುದು ಸರಳವಾದದ್ದು. ಸಾರ್ವಜನಿಕ ಸಾಲ ಎತ್ತುವಳಿಯ ವ್ಯಾಖ್ಯಾನವನ್ನೇ ಅದು ಬದಲಿಸಿದೆ. ಈ ಕುಟಿಲ ತಂತ್ರವನ್ನು ಅರ್ಥ ಮಾಡಿಕೊಳ್ಳಲು ನಾವು ಸರ್ಕಾರಿ ಸಾಲ ಎತ್ತುವಳಿಯ ಪ್ರವರ್ಗಗಳನ್ನು ಸ್ವಲ್ಪ ಆಳಕ್ಕಿಳಿದು ನೋಡಬೇಕು. ಇದರಲ್ಲಿ ಸ್ಥೂಲವಾಗಿ ಐದು ಪ್ರವರ್ಗಗಳಿವೆ.

1. ಕ್ರೋಢೀಕೃತ ನಿಧಿ(Consolidated Fund)ಗೆ ಸಾಲ ಎತ್ತುವಳಿ ಮಾಡಿ ಸೇರಿಸುವುದು:

ಇದರಲ್ಲಿ ರಾಜ್ಯ ಸರ್ಕಾರಗಳು ಮಾರುಕಟ್ಟೆಯಲ್ಲಿ ಬಾಂಡುಗಳನ್ನು ನೀಡಿ ಎತ್ತುವಳಿ ಮಾಡುತ್ತವೆ. ಅವು ದೇಶದ ಆಂತರಿಕ ಹಣಕಾಸು ಸಂಸ್ಥೆಗಳಿಂದ ನೇರ ಸಾಲ ಪಡೆಯಬಹುದು ಅಥವಾ ಕೇಂದ್ರ ಸರ್ಕಾರದ ಸಹಾಯದಿಂದ ಹೊರದೇಶಗಳಿಂದ ಸಾಲ ಪಡೆಯಬಹುದು. ಇದಲ್ಲದೆ ಕೇಂದ್ರ ಸರ್ಕಾರವೂ ರಾಜ್ಯಗಳಿಗೆ ಸಾಲ ನೀಡಬಹುದು. ಈ ಎಲ್ಲ ಸಾಲಗಳು ಕ್ರೋಢೀಕೃತ ನಿಧಿಗೆ ಬರುತ್ತವೆ ಮತ್ತು ಅವನ್ನು ಬಂಡವಾಳ ಸ್ವೀಕೃತಿ ಎಂದು ಪರಿಗಣಿಸಲಾಗುತ್ತದೆ.

2. ಸಾರ್ವಜನಿಕ ಖಾತೆಯಲ್ಲಿ ಸಾಲ ಎತ್ತುವಳಿ:

ಕ್ರೋಢೀಕೃತ ನಿಧಿಯಲ್ಲದೆ ರಾಜ್ಯ ಸರ್ಕಾರಗಳು ಒಂದು ಸಾರ್ವಜನಿಕ ಖಾತೆಯನ್ನು ಹೊಂದಿರುತ್ತವೆ. ಭದ್ರತಾ ಠೇವಣಿ, ಪ್ರಾವಿಡೆಂಟ್ ಫಂಡ್, ಇತರೆ ಖಜಾನೆ ಠೇವಣಿಗಳನ್ನು ಸರ್ಕಾರಿ ಸ್ವೀಕೃತಿಗಳೆಂದು ಪರಿಗಣಿಸಲಾಗುವುದಿಲ್ಲ. ಈ ಠೇವಣಿಗಳನ್ನು ತಾತ್ಕಾಲಿಕವಾಗಿ ಭದ್ರತೆಗೆಂದು ಸರ್ಕಾರದ ವಶಕ್ಕೆ ನೀಡಲಾಗಿರುತ್ತದೆ. ಈ ಸಾರ್ವಜನಿಕ ಖಾತೆಯಲ್ಲಿ



ನಿವ್ವಳ ಹೆಚ್ಚಳವನ್ನು ಮಾತ್ರ ಸರ್ಕಾರಿ ಬಂಡವಾಳ ಸ್ವೀಕೃತಿ ಎಂದು ಪರಿಗಣಿಸಲಾಗುತ್ತದೆ.

3. ಬಜೆಟ್ಟಿನ ಹೊರಗೆ ಸಾಲ ಎತ್ತುವಳಿ:

ಕೆಲವು ಸಂದರ್ಭಗಳಲ್ಲಿ ಬಜೆಟ್ಟಿನಲ್ಲಿ ಅನುಮೋದಿಸಲಾದ ಯೋಜನೆಗಳಿಗೆ ಸಾಕಷ್ಟು ಹಣಕಾಸಿನ ಒದಗಿಸದೆ ಇಲ್ಲದಿರಬಹುದು. ಖಜಾನೆಯಲ್ಲಿ ತಾತ್ಕಾಲಿಕವಾಗಿ ಸಂಪನ್ಮೂಲ ಇಲ್ಲದೇ ಇರಬಹುದು. ಇಂತಹ ಸಂದರ್ಭಗಳಲ್ಲಿ ಸರ್ಕಾರ ಯೋಜನೆ ಅನುಷ್ಠಾನಗೊಳಿಸುವ ಸಂಸ್ಥೆಯ ಮೂಲಕ ಸಾಲ ಎತ್ತುವಳಿ ಮಾಡಬಹುದು. ಉದಾಹರಣೆಗೆ ಭಾರತೀಯ ಆಹಾರ ನಿಗಮ ಧಾನ್ಯಗಳ ಖರೀದಿಗೆ ಸಾಲ ಪಡೆಯುತ್ತದೆ. ಸರ್ಕಾರ ತದನಂತರದಲ್ಲಿ ಈ ಹಣವನ್ನು ಅದಕ್ಕೆ ಪಾವತಿ ಮಾಡುತ್ತದೆ. ಇದು ಬಜೆಟ್ಟಿನ ಹೊರಗಡೆ ಮಾಡುವ ಎತ್ತುವಳಿ.

ಕೇರಳ ರಾಜ್ಯ ಸರ್ಕಾರದ ಉದಾಹರಣೆ ತೆಗೆದುಕೊಳ್ಳುವುದಾದರೆ ಅದು ತನ್ನ ಪಿಂಚಣಿ ಪಾವತಿ ಕಂಪನಿಗಾಗಿ ಪಡೆವ ಸಾಲ. ಕೇರಳದಲ್ಲಿ 50 ಲಕ್ಷಕ್ಕೂ ಹೆಚ್ಚು ಜನ ಹಿರಿಯ ವಯಸ್ಕರು, ವಿಕಲಚೇತನರು, ವಿಧವೆಯರು ತಿಂಗಳಿಗೆ 1600 ರೂಪಾಯಿಗಳ ಪಿಂಚಣಿ ಪಡೆಯುತ್ತಾರೆ. ಖಜಾನೆಯ ಪರಿಸ್ಥಿತಿ ಸರಿ ಇಲ್ಲದಿದ್ದರೂ ಇವರ ಪಿಂಚಣಿ ತಪ್ಪಿಸುವಂತಿಲ್ಲ. ರಾಜ್ಯ ಸರ್ಕಾರ ಈ ಕಂಪನಿ ಪಡೆದ ಸಾಲ ಮತ್ತು ಅದರ ಬಡ್ಡಿ ಎರಡನ್ನೂ ಮರು ಪಾವತಿಸುತ್ತದೆ. ಹೀಗೆ ಈ ಕಲ್ಯಾಣ ಪಿಂಚಣಿ ಯಾವುದೇ ಅಡೆ– ತಡೆ ಇಲ್ಲದೇ ತಿಂಗಳು ತಿಂಗಳು ಪಾವತಿಯಾಗುತ್ತಿರುತ್ತದೆ. ಈ ಪಿಂಚಣಿಗಳಲ್ಲಿನ ಅರ್ಧಕ್ಕು ಹೆಚ್ಚನ್ನು ಸಹಕಾರಿ ಬ್ಯಾಂಕುಗಳ ಮೂಲಕ ಪಿಂಚಣಿದಾರರ ಮನೆಬಾಗಿಲಿಗೆ ತಲುಪಿಸಲಾಗುತ್ತದೆ.

4. ಬಜೆಟ್ಟಿನಲ್ಲಿ ಸೇರಿರದ ಹೆಚ್ಚುವರಿ ಸಾಲ ಎತ್ತುವಳಿ:

ಈ ಸಾಲಗಳು ಸಾರ್ವಜನಿಕ ವಲಯದ ಸಂಸ್ಥೆಗಳು ಬಜೆಟ್ಟಿನಲ್ಲಿ ಸೇರಿಲ್ಲದಿರುವ ತಮ್ಮ ಯೋಜನೆಗಳ ಅನುಷ್ಠಾನಕ್ಕಾಗಿ ಸಾಲ ಎತ್ತುವಳಿ ಮಾಡುವುದು. ಇದಕ್ಕೆ ರಾಜ್ಯ ಸರ್ಕಾರ ಜಾಮೀನು ನೀಡುತ್ತದೆ. ಇದಲ್ಲದೆ ಭಾಗಶಃ ಅಥವಾ ಪೂರ್ತಿ ಹಣಕಾಸಿನ ಬೆಂಬಲವನ್ನು ಒಂದು ಒಪ್ಪಿತ ಕರಾರಿನ ಪ್ರಕಾರ ನೀಡುತ್ತದೆ. ಉದಾಹರಣೆಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ನಿಗಮ ತನ್ನ ಯೋಜನೆಗಳ ಅನುಷ್ಠಾನಕ್ಕಾಗಿ ಪಡೆವ ಸಾಲಗಳು.

ಕೇರಳ ರಾಜ್ಯ ಸರ್ಕಾರ "ಕೇರಳ ಮೂಲ ಸೌಕರ್ಯ ಹೂಡಿಕೆ ನಿಧಿ ಮಂಡಳಿ' (KIIFB) ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ. ಈ ಮಂಡಳಿ ಬಹು ಮುಖ್ಯ ದೊಡ್ಡ ದೊಡ್ಡ ಮೂಲ ಸೌಕರ್ಯ ಯೋಜನೆಗಳಿಗೆ ಸಾಲ ಎತ್ತುವಳಿ ಮಾಡಿ ಅನುಸ್ಥಾನಕ್ಕೆ ಅನುವು ಮಾಡಿಕೊಡುತ್ತದೆ. ಈ ಯೋಜನೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಇತರೆ ಖರ್ಚುಗಳು ಬಜೆಟ್ಟಿನಲ್ಲಿ ಸೇರಿರುವುದಿಲ್ಲ. ಸರ್ಕಾರ ಈ KIIFB ಗೆ ಕೆಲವು ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬುದಾರಿ ಕೊಟ್ಟಿರುತ್ತದೆ. ಅದಕ್ಕೆ ಬೆಂಬಲವಾಗಿ ಮೋಟಾರು ವಾಹಗಳ ತೆರಿಗೆಯ ಅರ್ಧ ಭಾಗದಷ್ಟು ಪ್ರಮಾಣದಲ್ಲಿ ವರ್ಷಾಶನವನ್ನು ಅದು ಈ ಮಂಡಳಿಗೆ ನೀಡುತ್ತದೆ.

5. ಸಾರ್ವಜನಿಕ ವಲಯದ ನೇರ ಸಾಲ ಎತ್ತುವಳಿ:

ಸಾರ್ವಜನಿಕ ವಲಯದ ಘಟಕಗಳು ಮತ್ತು ಏಜೆನ್ಸಿಗಳು ತಮ್ಮ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ಹಣಕಾಸನ್ನು ನೇರವಾಗಿ ಯಾವುದೇ ಸರಕಾರದ ಗ್ಯಾರಂಟಿ ಅಥವಾ ಹಣಕಾಸಿನ ನೆರವು ಇಲ್ಲದೇ ಸಾಲವಾಗಿ ಎತ್ತಬಹುದು. ಹೀಗೆ ಎತ್ತಿದ ಸಾಲವನ್ನು ಈ ಸಂಸ್ಥೆಗಳು ಮರುಪಾವತಿಸಲು ವಿಫಲವಾದಲ್ಲಿ ಅದು ಸರ್ಕಾರದ ತಲೆಯ ಮೇಲೆ ಬೀಳುವುದಿಲ್ಲ. ಬಜೆಟ್ಟಿನ ಹೊರಗಿನ ಸಾಲ ಮತ್ತು ಬಜೆಟ್ಟಿನ ಹೆಚ್ಚುವರಿ ಸಾಲಗಳು ಈ ನೇರ ಸಾಲಗಳಿಂಗಿಂತ ಭಿನ್ನವಾಗಿವೆ.

ಒಪ್ಪಿತ ಲೆಕ್ಕ ಪತ್ರ ವಿಧಾನಗಳ ಪ್ರಕಾರ ಸರ್ಕಾರದ ಸಾಲ ಸೋಲಗಳನ್ನು ಎರಡು ವಿಧವಾಗಿ ವಿಂಗಡಿಸಲಾಗುತ್ತದೆ: ಮೊದಲನೆಯದು ಸಾರ್ವಜನಿಕ ಸಾಲ ಎತ್ತುವಳಿ ಮತ್ತು ಎರಡನೆಯದು ಸಾರ್ವಜನಿಕ ಖಾತೆ ಸಾಲ ಎತ್ತುವಳಿ. ಕೇಂದ್ರ ಸರ್ಕಾರದ ವಿಷಯಕ್ಕೆ ಬಂದಾಗ ಇಂದಿಗೂ ಈ ಎರಡು ವಿಧಗಳನ್ನು ಮಾತ್ರ ಸರ್ಕಾರಿ ಬಾಧ್ಯತೆಗಳೆಂದು ಪರಿಗಣಿಸಲಾಗುತ್ತದೆ ಅಲ್ಲದೆ ಇದನ್ನು ಹಣಕಾಸು ಕೊರತೆಯನ್ನು ಲೆಕ್ಕ ಹಾಕಲು ಪರಿಗಣಿಸಲಾಗುತ್ತದೆ.

ರಾಜ್ಯ ಸರ್ಕಾರಗಳ ವಿಷಯದಲ್ಲಿ ಕೇಂದ್ರ ಸರ್ಕಾರ ಈಗ ಮೂರನೇ (ಬಜೆಟ್ಟಿನ ಹೊರಗಿನ ಸಾಲಎತ್ತುವಳಿ) ಮತ್ತು ನಾಲ್ಕನೇ (ಬಜೆಟ್ ಹೆಚ್ಚುವರಿ ಸಾಲ ಎತ್ತುವಳಿ) ಗಳನ್ನು ರಾಜ್ಯ ಸರ್ಕಾರಗಳ ಸಾರ್ವಜನಿಕ ಸಾಲ ಎತ್ತುವಳಿ ಎಂದು ಪರಿಗಣಿಸಿ ಜಾರಿಗೆ ತರಲು ಉದ್ದೇಶಿಸಿದೆ. ಹೀಗೆ ವ್ಯಾಖ್ಯಾನಗಳನ್ನು ಬದಲಿಸಿ ಅದೇ ಅನುಪಾತದಲ್ಲಿ ರಾಜ್ಯ ಸರ್ಕಾರಗಳ ಸಾಲದ ಮಿತಿಯನ್ನು ಶೇ 3ಕ್ಕೆ ಇಳಿಸಲು ಅದು ಹುನ್ನಾರ ನಡೆಸಿದೆ.

ಕೇಂದ್ರ ಸರ್ಕಾರ ಮತ್ತು ಬಜೆಟ್ ಹೊರಗಿನ ಸಾಲ ಎತ್ತುವಳಿ

ಕೇಂದ್ರ ಸರ್ಕಾರದ ವಿತ್ತೀಯ ಕೊರತೆ FRBM ನ ಮಿತಿಯನ್ನು ಮೀರಿ ಹೋಗಿದೆ. ಅಷ್ಟೇ ಅಲ್ಲ ಅದು ಬಜೆಟ್ಟಿನ ಹೊರಗೂ ಬಹಳ ದೊಡ್ಡ ಪ್ರಮಾಣದಲ್ಲಿ ಸಾಲ ಎತ್ತುವಳಿ ಮಾಡಿದೆ. ಶ್ರೀಮತಿ ನಿರ್ಮಲ ಸೀತಾರಾಮನ್ ಅವರು ಹಣಕಾಸು ಮಂತ್ರಿಯಾದ ಮೇಲೆ ಹೀಗೆ ಬಜೆಟ್ಟಿನ ಹೊರಗೆ ಮಾಡಿದ ಸಾಲ ಎತ್ತುವಳಿಯ ಒಂದು ಅನುಬಂಧವನ್ನೇ ಬಜೆಟ್ ಭಾಷಣದ ಜೊತೆಗೆ ಕೊಡುವ ಪದ್ಧತಿಯನ್ನು ಅನುಸರಿಸಿದ್ದಾರೆ. ಹಣಕಾಸು ಸಾಲು 2019–20ರಲ್ಲಿ ಈ ಸಾಲ ಎತ್ತುವಳಿ ಮೊತ್ತ 1.48 ಲಕ್ಷ ಕೋಟಿಗಳಷ್ಟಾಗಿತ್ತು. ಈ ಅನುಬಂಧದಲ್ಲಿ ಸೇರಿಸದೆಯೇ 1.69 ಲಕ್ಷ ಕೋಟಿ ರೂಪಾಯಿಗಳ ಸಾಲವನ್ನು ಎತ್ತಲಾಗಿದೆ ಎಂದು ಸಿ.ಎ.ಜಿ. ವರದಿಯಲ್ಲಿ ಹೇಳಲಾಗಿದೆ!! ಪರಿಣಾಮವಾಗಿ ನಾವು ಲೆಕ್ಕ ಹಾಕಿದರೆ 2019–20ರ ಸಾಲಿನಲ್ಲಿ ಬಜೆಟ್ ಹೊರಿಗಿನ ಸಾಲ 3.17 ಲಕ್ಷ ಕೋಟಿಗಳಷ್ಟಾಗುತ್ತದೆ!!

ಕೇರಳವನ್ನು ಟೀಕಿಸುತ್ತ ಅದು ಎತ್ತಿದ ಬಜೆಟ್ಟಿನ ಹೊರಗಿನ ಸಾಲಗಳನ್ನು ಅದು ಎತ್ತಬಹುದಾದ ಸಾಲದ ಒಟ್ಟು ಮಿತಿಯೊಳಗೆ ಸೇರಿಸಬೇಕು ಎಂಬ ಸಲಹೆ ನೀಡುವ ಈ ಸಿ.ಎ.ಜಿ. ಇದೇ ಮಾನದಂಡವನ್ನು ಕೇಂದ್ರ ಸರ್ಕಾರಕ್ಕೆ ಅನ್ವಯಿಸುವುದಿಲ್ಲ. ಇದಲ್ಲದೆ ಕೇಂದ್ರ ಸರ್ಕಾರದ ಈ ಬಜೆಟ್ಟಿನ ಹೊರಗಿನ ಸಾಲ ಎತ್ತುವಳಿಯನ್ನು ವಿತ್ತೀಯ ಕೊರತೆಯ ಲೆಕ್ಕಾಚಾರದಲ್ಲೂ ಸೇರಿಸುವುದಿಲ್ಲ! ಎಂಥ ಗೋಸುಂಬೆತನ!! ಇದಲ್ಲದೆ ಕೇರಳ ಪಿಂಚಣಿ ಕಂಪನಿಯ ನಿವ್ವಳ ಸಾಲವನ್ನು ಪರಿಗಣಿಸುವ ಬದಲು ಒಟ್ಟು ಸಾಲವನ್ನು ಪರಿಗಣಿಸಲಾಗಿದೆ.

KIIFB ಯ ಯಾವುದೇ ಯೋಜನೆಯೂ ಬಜೆಟ್ಟಿನ ಭಾಗವಾಗಿಲ್ಲದಿರುವಾಗ, ಮತ್ತು KIIFB

ಪುಟ 12 ಕ್ಕೆ

ತುರ್ತುಪರಿಸ್ಥಿತಿ ಮತ್ತು ತೀವ್ರವಾದ ಆತಂಕದ ಸ್ಥಿತಿ

ಎಂ.ಎ. ಬೇಬಿ
ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು





ಜೂನ್ 25 ರ ಮಧ್ಯರಾತ್ರಿ ಕಾಂಗ್ರೆಸ್ ನಾಯಕಿ ಮತ್ತು ಪ್ರಧಾನಿ ಇಂದಿರಾ ಗಾಂಧಿಯವರು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ 48 ನೇ ವಾರ್ಷಿಕ ಇದು. ಈ ಸಂದರ್ಭದಲ್ಲಿ, ಅಂದು ಏನಾಯಿತು ಮತ್ತು ಏಕೆ ಎಂದು ಪರಿಶೀಲಿಸುವುದರ ಅಗತ್ಯವಿದೆ. ಇದು ಇಂದಿನ ಭಾರತದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಲು ಮತ್ತು ನಮ್ಮ ಜವಾಬ್ದಾರಿಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.

1969 ರಲ್ಲಿ ಕಾಂಗ್ರೆಸ್ ವಿಭಜನೆಯಾದ ನಂತರ, ಇಂದಿರಾ ಗಾಂಧಿಯವರು ಬ್ಯಾಂಕ್ ರಾಷ್ಟ್ರೀಕರಣ ಮತ್ತು ಖಾಸಗಿ ಪರ್ಸ್ (ರಾಜರ ಸ್ವಂತ ವೆಚ್ಚಕ್ಕೆ ಸರಕಾರದ ಬೊಕ್ಕಸದಿಂದ ಕೊಡುವ ಹಣ) ರದ್ದತಿಯಂತಹ ನೀತಿಗಳೊಂದಿಗೆ ಜನಪ್ರಿಯತೆಯನ್ನು ಗಳಿಸಲು ಪ್ರಯತ್ನಿಸಿದರು. 1971 ರ ಚುನಾವಣೆಯಲ್ಲಿ, ಬಡತನ ನಿರ್ಮೂಲನೆ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಂವಿಧಾನವನ್ನು ತಿದ್ದುಪಡಿ ಮಾಡಿ ಲೋಕಸಭೆಯಲ್ಲಿ ಬಹುಮತಕ್ಕಾಗಿ (ಮೂರನೇ ಎರಡರಷ್ಟು ಸ್ಥಾನಗಳು) ಜನತೆಯ ಬೆಂಬಲ ಗಳಿಸುವ ಪ್ರಯತ್ನ ಮಾಡಿದರು. 'ಗರೀಬಿ ಹಟಾವೋ' ಎಂಬ ಘೋಷಣೆಯೂ ಈ ಪ್ರಯತ್ನದ ಒಂದು ಭಾಗವಾಗಿತ್ತು. ಆಗಿನ 521 ಸದಸ್ಯ ಬಲದ ಲೋಕಸಭೆಯಲ್ಲಿ ಇಂದಿರಾ ಕಾಂಗ್ರೆಸ್ 352 ಸ್ಥಾನಗಳೊಂದಿಗೆ ಮೂರನೇ ಎರಡರಷ್ಟು ಬಹುಮತ ಗಳಿಸಿತು. ಕಾಂಗ್ರೆಸ್ ಪಕ್ಷಕ್ಕೆ ಶೇ. 43.68 ರಷ್ಟು ಮತಗಳು ಬಂದವು.

ಸ್ವತಂತ್ರ ಬಾಂಗ್ಲಾದೇಶದ ರಚನೆಗೆ ಭಾರತೀಯ ಸೇನೆಯ ಬೆಂಬಲ ಮತ್ತು ಕೊಡುಗೆಯ ಹಿನ್ನೆಲೆಯಲ್ಲಿ ಇಂದಿರಾ ಗಾಂಧಿಯವರ ಖ್ಯಾತಿ ಮತ್ತಷ್ಟು ಹೆಚ್ಚಾಯಿತು. ಇದು ವ್ಯಕ್ತಿ ಪ್ರಭಾವದ ಬೆಳವಣಿಗೆಗೆ ಏಕಾಧಿಪತ್ಯ ಪ್ರವೃತ್ತಿಗಳ ವ್ಯಾಪಿಸುವಿಕೆಗೆ ಕಾರಣವಾಯಿತು. 1974ರಲ್ಲಿ ದೇವಕಾಂತ ಬರುವಾ ಅವರು 'ಭಾರತವೇ ಇಂದಿರಾ, ಇಂದಿರಾ ಭಾರತ' ಎಂದು ದಿಟ್ಟತನದಿಂದ ಘೋಷಿಸಿದರು.

ಸಂವಿಧಾನವನ್ನು ತಿದ್ದುಪಡಿ ಮಾಡಲು ಅಗತ್ಯವಿರುವ ಬಹುಮತವನ್ನು ನೀಡಿದ ಜನರು, ಇಂದಿರಾಗಾಂಧಿ ಆಡಳಿತವು ತನ್ನ ಭರವಸೆಗಳನ್ನು ಈಡೇರಿಸುವತ್ತ ಗಮನ ಹರಿಸುತ್ತಿಲ್ಲ ಎಂಬುದನ್ನು ಅರಿತುಕೊಂಡಾಗ, ಅವರು ಸ್ವಾಭಾವಿಕವಾಗಿ ತೀವ್ರವಾಗಿ ಪ್ರತಿಭಟಿಸಲು ಪ್ರಾರಂಭಿಸಿತು. ಕೇಂದ್ರ ಮತ್ತು ರಾಜ್ಯ ಕಾಂಗ್ರೆಸ್ ಸರಕಾರಗಳು ಸರ್ವಾಧಿಕಾರಿ ಧೋರಣೆ ಅನುಸರಿಸುವ ಮೂಲಕ ಜನತೆಯ ಸಾಮೂಹಿಕ ಪ್ರತಿಭಟನೆಗಳನ್ನು ಕ್ರೂರವಾಗಿ ಹತ್ತಿಕ್ಕಿದವು. ಇದನ್ನು CPI-M ನಿಖರವಾಗಿ ಗಮನಿಸಿದೆ ಗಮನಸೆಳೆದಿದೆ. 1972 ರಲ್ಲಿ ಮಧುರೈನಲ್ಲಿ ನಡೆದ ಪಕ್ಷದ ಒಂಬತ್ತನೇ ಕಾಂಗ್ರೆಸ್ ಅಂಗೀಕರಿಸಿದ ರಾಜಕೀಯ ನಿರ್ಣಯ, ಇಂದಿರಾಗಾಂಧಿ ಆಳ್ವಿಕೆಯು ಸರ್ವಾಧಿಕಾರದ ಆಡಳಿತವಾಗಿ ವೇಗವಾಗಿ ಬೆಳೆಯುತ್ತಿದೆ ಮತ್ತು ಅದರ ವಿರುದ್ಧ ವಿಶಾಲ ತಳಹದಿಯ ಪ್ರತಿರೋಧ ಚಳವಳಿಯನ್ನು ಬೆಳೆಸಬೇಕಾಗಿದೆ ಎಂದು ಸ್ಪಷ್ಟಪಡಿಸಿತು. 1972ರಲ್ಲೇ ಕಾಂಗ್ರೆಸ್ ಪಶ್ಚಿಮ ಬಂಗಾಳದಲ್ಲಿ ಸಿಪಿಐ–ಎಂ ವಿರುದ್ಧ ಅರೆ-ಫ್ಯಾಸಿಸ್ಟ್ ದಾಳಿಗಳು ಮತ್ತು ಹತ್ಯಾಕಾಂಡಗಳನ್ನು ಆರಂಭಿಸಿತ್ತು.

ಕಾಂಗ್ರೆಸ್ ಆಡಳಿತದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭ್ರಷ್ಟ ಆಡಳಿತದ ವಿರುದ್ಧ ವಿದ್ಯಾರ್ಥಿ–ಯುವಜನರು ಪ್ರತಿಭಟನೆಗೆ ಕರೆ ನೀಡಿದರು. ಸ್ವಾತಂತ್ರ್ಯ ಹೋರಾಟದ ವೀರ ಹಾಗೂ ಗಾಂಧಿವಾದಿ ಸಮಾಜವಾದಿಯಾಗಿದ್ದ ಜಯಪ್ರಕಾಶ್ ನಾರಾಯಣನ್ ಅವರು 'ಜೆಪಿ' ಎಂದು ಗೌರವಯುತವಾಗಿ ಕರೆಯಲ್ಪಡುತ್ತಿದ್ದರು. 1974ರ ರೈಲ್ವೆ ನೌಕರರ ಮುಷ್ಕರವೂ ಇಲ್ಲಿ ಉಲ್ಲೇಖಾರ್ಹವಾಗಿದೆ. ಕೇಂದ್ರ ಮತ್ತು ರಾಜ್ಯ ಆಡಳಿತಗಳು ಕಾರ್ಮಿಕರು–ವಿದ್ಯಾರ್ಥಿಗಳು–ಯುವಜನ ಹೋರಾಟಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುವ ಪ್ರಯತ್ನ ಮಾಡಿದವು.

ಇಂದಿರಾ ಗಾಂಧಿಯವರ ಮಧ್ಯಸ್ಥಿಕೆಯಿಂದಾಗಿ ಮೂವರು ಹಿರಿಯ ನ್ಯಾಯಾಧೀಶರ ಮೇಲೆ ನ್ಯಾಯಮೂರ್ತಿ ಎಎನ್ ರೇ ಅವರನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರನ್ನಾಗಿ ನೇಮಿಸುವ ಮೂಲಕ, ಅವರು ಸ್ವತಂತ್ರ ನ್ಯಾಯಾಂಗದ ಸಾಂವಿಧಾನಿಕ ಪರಿಕಲ್ಪನೆಯನ್ನು ಕಳಂಕಗೊಳಿಸಲು ಜೋರಾಗಿ ಮತ್ತು ಪ್ರಬಲವಾದ ಪ್ರತಿಭಟನೆಯನ್ನು ಎತ್ತಿದರು

ಇಂದಿರಾಗಾಂಧಿ ಅವರು 1971 ರ ಲೋಕಸಭೆ ಚುನಾವಣೆಯಲ್ಲಿ ಉಲ್ಲಂಘನೆ ಮಾಡಿದ್ದಾರೆ ಎಂದು ಜೂನ್ 12, 1975 ರಂದು ಅಲಹಾಬಾದ್ ಹೈಕೋರ್ಟ್ ತೀರ್ಪು ಹೊರಬಿದ್ದಾಗ, ರಾಜಕೀಯ ರಂಗವು ನಡುಗಿತು. ಇಂದಿರಾಗಾಂಧಿಯವರ ಲೋಕಸಭಾ ಸದಸ್ಯತ್ವವನ್ನು ರದ್ದುಮಾಡಿ, ಮುಂದಿನ ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ನಿಷೇಧ ಹೇರಲಾಯಿತು. ಈ ತೀರ್ಪಿಗೆ ಬೇಷರತ್ ತಡೆಯಾಜ್ಞೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿತು. ನ್ಯಾಯಮೂರ್ತಿ ವಿ.ಆರ್. ಕೃಷ್ಣಯ್ಯರ್ ಅವರ ಆ ಮಹತ್ವದ ತೀರ್ಪು ಜೂನ್ 24 ರಂದು ಬಂದಿತ್ತು. ಅಹಿಂಸಾತ್ಮಕ ಮಾರ್ಗದಲ್ಲಿ ಇಂದಿರಾ ಆಡಳಿತದ ವಿರುದ್ಧ ಅಸಹಕಾರ ಹೋರಾಟ ಆರಂಭಿಸಲು ಸರ್ಕಾರಿ ಅಧಿಕಾರಿಗಳು, ಪೊಲೀಸರು ಸೇರಿದಂತೆ ಜನರು ಮುಂದಾಗಬೇಕು ಎಂದು ಜಯಪ್ರಕಾಶ ನಾರಾಯಣ ಕರೆ ನೀಡಿದರು.

ಕೋಮುವಾದಿ–ಕಾರ್ಪೊರೇಟ್ ಮೈತ್ರಿಕೂಟದ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ 2014 ಮತ್ತು 2019ರ ಚುನಾವಣೆಗಳಲ್ಲಿ ಜನರಿಗೆ ನೀಡಿದ ಭರವಸೆಗಳನ್ನು ಕಡೆಗಣಿಸಿದೆ; ಅಥವಾ ಮರೆತಿದ್ದಾರೆ. ಜನರಲ್ಲಿ ಬಹಳಷ್ಟು ಹತಾಶೆ ಮತ್ತು ಸಿಟ್ಟು ಹರಡುತ್ತಿದೆ.

ಇಂದಿರಾಗಾಂಧಿ ಕ್ಯಾಬಿನೆಟ್‌ನಲ್ಲಿ ಚರ್ಚಿಸಲು ಸಹ ಮುಂದಾಗದೆ, ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಅವರಿಂದ ಆಂತರಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಿದರು. ಅಂದೇ ಮಧ್ಯರಾತ್ರಿಯಲ್ಲಿ ಪತ್ರಿಕಾ ಕಚೇರಿಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದರು. ಹೀಗೆ "ಮಧ್ಯರಾತ್ರಿ ಸ್ವಾತಂತ್ರ್ಯ" ಜಾರಿಗೆ ಬಂತು. ವಿರೋಧ ಪಕ್ಷದ ನಾಯಕರು ಮತ್ತು ಕಾಂಗ್ರೆಸ್ ನ 'ಅವಿಧೇಯ' ಚಂದ್ರಶೇಖರ್, ಕೃಷ್ಣಕಾಂತ್, ಮೋಹನ್ ಧರಿಯಾ ಮುಂತಾದವರನ್ನು ಬಂಧಿಸಲಾಯಿತು. ಅವರನ್ನು ಜೈಲಿಗೆ ಹಾಕಿತು. ಬಲವಂತದ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಟರ್ಕಮನ್ ಗೇಟ್‌ನಲ್ಲಿ ಬುಲ್ಡೋಜರ್ ಭಯೋತ್ಪಾದನೆಯಂತಹ ಅನೇಕ ರಕ್ತಸಿಕ್ತ ಹಿಂಸೆಯ ವಿಧಾನಗಳು, ಇಂಜಿನಿಯರಿಂಗ್ ವಿದ್ಯಾರ್ಥಿ ರಾಜನ್‌ನ ತಂದೆ ಈಚರವರ್ರಿಯರ್ ಕಣ್ಣೀರಿಟ್ಟರು.

ದೇಶವೇ ಒಂದು ದೊಡ್ಡ ಕಾರಾಗೃಹವಾಗಿ ಮಾರ್ಪಟ್ಟ 21 ತಿಂಗಳ ಕರಾಳ ವಾತಾವರಣ ಇಂತಹ ಔಪಚಾರಿಕ ಘೋಷಣೆಯಿಲ್ಲದೆ ಭಾರತದಲ್ಲಿ ಮತ್ತೆ ಅಸ್ತಿತ್ವಕ್ಕೆ ಬಂದು ಬಹಳ ದಿನಗಳಾಗಿವೆ. ಕೋಮುವಾದಿ–ಕಾರ್ಪೊರೇಟ್ ಮೈತ್ರಿಕೂಟದ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ 2014 ಮತ್ತು 2019ರ ಚುನಾವಣೆಗಳಲ್ಲಿ ಜನರಿಗೆ ನೀಡಿದ ಭರವಸೆಗಳನ್ನು ಕಡೆಗಣಿಸಿದೆ; ಅಥವಾ ಮರೆತಿದ್ದಾರೆ. ಜನರಲ್ಲಿ ಬಹಳಷ್ಟು ಹತಾಶೆ ಮತ್ತು ಸಿಟ್ಟು ಹರಡುತ್ತಿದೆ. ಜನರ ಈ ಸಿಟ್ಟಿನಿಂದ ಮೋದಿ ಸರಕಾರವನ್ನು ಪಾರು ಮಾಡಲು ಯೋಜಿತ ಪ್ರಯತ್ನ ಮಾಡಲಾಗುತ್ತಿದೆ. 'ಮೋದಿ ಈಸ್ ಇಂಡಿಯಾ' ಎಂಬ ಕೀರ್ತನೆಗಳು ಎಂದಿಗಿಂತಲೂ ಜೋರಾಗಿ ಮೊಳಗುತ್ತಿವೆ. ಅಲ್ಪಸಂಖ್ಯಾತರನ್ನು ಮತ್ತು ಭಿನ್ನಾಭಿಪ್ರಾಯದ ಧ್ವನಿಗಳನ್ನು ಹತ್ತಿಕ್ಕಲಾಗುತ್ತದೆ.


ಸಾಮೂಹಿಕ ಹತ್ಯೆಗಳು – ಇದು ಗುಜರಾತ್‌ನಲ್ಲಿ 2002 ರ ಜನಾಂಗೀಯ ಹತ್ಯಾಕಾಂಡದ ರೂಪದಲ್ಲಿ – ಮತ್ತು ವೈಯಕ್ತಿಕ ಹತ್ಯೆಗಳ ರೂಪದಲ್ಲಿ ನಡೆಯುತ್ತಿವೆ. ಸಂತ್ರಸ್ತರ ಪರವಾಗಿ ಅರ್ಜಿಗಳನ್ನು ನ್ಯಾಯಾಲಯದಲ್ಲಿ ಮಂಡಿಸಲು ಮುಂದಾಗುವ ಹಿರಿಯರಾದ ತೀಸ್ತಾ ಸೆಟಲ್ವಾಡ್ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ನ್ಯಾಯಾಲಯಗಳು ಆದೇಶ ನೀಡುತ್ತಿರುವ ರೀತಿಯನ್ನು ನರೇಂದ್ರ ಮೋದಿ ಆಡಳಿತದಲ್ಲಿ ಕಾಣಬಹುದಾಗಿದೆ. ಕೋಮುವಾದದ ರಕ್ತಸಿಕ್ತ ತಳಹದಿಯ ಮೇಲೆ ಹಿಂದೂರಾಷ್ಟ್ರದ ಸಂಸ್ಥೆಗೆ ರಾಜದಂಡ ಮತ್ತು ಮಾಂತ್ರಿಕತೆಯನ್ನು ಪ್ರಯೋಗಿಸುವ ಫ್ಯಾಸಿಸ್ಟ್ ಆರ್‌ಎಸ್‌ಎಸ್ ಒಡ್ಡುತ್ತಿರುವ ಬೆದರಿಕೆ ಇಂದು ಭಾರತದಲ್ಲಿ ಭಯೋತ್ಪಾದನೆಯ ಸ್ಥಿತಿಯನ್ನು ಸೃಷ್ಟಿಸುತ್ತಿದೆ.

"ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತದಲ್ಲಿ ಉಗ್ರವಾದದ ವಿರುದ್ಧದ ಹೋರಾಟದಲ್ಲಿ ಸಹಜವಾಗಿಯೇ ಪಾತ್ರ ವಹಿಸುವ ಹೊಣೆಗಾರಿಕೆಯನ್ನು ಕಾಂಗ್ರೆಸ್ ಹೊಂದಿದೆ. ವಿರೋಧ ಪಕ್ಷವಾಗಿ ಮಾತ್ರವಲ್ಲ – ಅವರು ಮೊದಲು ಮಾಡಿದ ಪ್ರಜಾಪ್ರಭುತ್ವ ವಿರೋಧಿ ಅಪರಾಧಕ್ಕೆ ಪ್ರಾಯಶ್ಚಿತ್ತವಾಗಿ"

ಇಂದಿರಾ ಗಾಂಧಿಯವರು ಹೇರಿದ ತುರ್ತುಪರಿಸ್ಥಿತಿಯ ವಿರುದ್ಧ ಯಾವುದೇ ಪರಿಣಾಮಕಾರಿ ಹೋರಾಟ ನಡೆಯದಿದ್ದರೂ; ಆರ್‌ಎಸ್‌ಎಸ್‌ನ ಸೃಷ್ಟಿಯಾದ ಜನಸಂಘವು 1977 ರ ಚುನಾವಣೆಯಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧದ ಚುನಾವಣಾ ಕಣದಲ್ಲಿ ಲಾಭ ಗಳಿಸಿದವರಲ್ಲಿ ಒಳಗೊಂಡಿದೆ. ಇಂದಿರಾಗಾಂಧಿಯವರ ತುರ್ತು ಪರಿಸ್ಥಿತಿಯಲ್ಲಿನ ಹಿಂಸಾಚಾರ, ಪ್ರಜಾಪ್ರಭುತ್ವದ ವಿನಾಶ ಮಾತ್ರವಲ್ಲ ಇಂದು ನಾವು ಹಿಂತಿರುಗಿ ನೋಡಿದಾಗ ಕಾಣುವ ಒಂದು ದುಷ್ಟತನ. 'ತುರ್ತು ಪರಿಸ್ಥಿತಿ' ಆರ್‌ಎಸ್‌ಎಸ್ ಮತ್ತು ಜನಸಂಘಕ್ಕೆ ತಾವು ಪ್ರಜಾಸತ್ತಾತ್ಮಕ ಪಕ್ಷ ಎಂದು ಬಿಂಬಿಸಿಕೊಳ್ಳುವ ಅವಕಾಶವನ್ನು ನೀಡಿತು ಎಂಬುದನ್ನು ಸಹ ಗುರುತಿಸಬೇಕು. ಸಂಘಟನೆಯೊಳಗೆ ಯಾವುದೇ ರೀತಿಯ ಪ್ರಜಾಪ್ರಭುತ್ವವನ್ನು ಹೊಂದಿರದ ಆರ್‌ಎಸ್‌ಎಸ್, ತಾನು ಕಟುವಾದ ಫ್ಯಾಸಿಸ್ಟ್ ಆಗಿದ್ದರೂ, ತುರ್ತು ಪರಿಸ್ಥಿತಿಯನ್ನು ಯಾವಾಗಲೂ ವಿರೋಧಿಸಿದೆ ಎಂಬ ಹೇಳಿಕೆಯೊಂದಿಗೆ ಚರ್ಚೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಘೋಷಿತ ತುರ್ತುಪರಿಸ್ಥಿತಿಯ ಮೂಲಕ ಅವರು ತಮ್ಮದೇ ಆದ ಗುರುತನ್ನು ಬಹಿರಂಗಪಡಿಸುವುದರಿಂದ ಅವರ ಬೂಟಾಟಿಕೆ ಈಗ ಸ್ಪಷ್ಟವಾಗಿದೆ. ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತದಲ್ಲಿ ಉಗ್ರವಾದದ ವಿರುದ್ಧದ ಹೋರಾಟದಲ್ಲಿ ಸಹಜವಾಗಿಯೇ ಪಾತ್ರ ವಹಿಸುವ ಹೊಣೆಗಾರಿಕೆಯನ್ನು ಕಾಂಗ್ರೆಸ್ ಹೊಂದಿದೆ. ಕಾಂಗ್ರೆಸ್ ಕೇವಲ ವಿರೋಧ ಪಕ್ಷವಾಗಿ ಅಲ್ಲ, ತಾನು ಮಾಡಿದ ಪ್ರಜಾಪ್ರಭುತ್ವ ವಿರೋಧಿ ಅಪರಾಧಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಮತ್ತು ಅಂತಹ ಸರ್ವಾಧಿಕಾರವನ್ನು ಎಂದಿಗೂ ನಡೆಸುವುದಿಲ್ಲ ಎಂದು ಸಾರ್ವಜನಿಕವಾಗಿ ಒಪ್ಪಿಕೊಳ್ಳುವ ಮೂಲಕ ಭಾರತದ ಜನರಲ್ಲಿ ಕ್ಷಮೆಯಾಚಿಸಲು ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಒಂದು ಅವಕಾಶವಾಗಿ ತೆಗೆದುಕೊಳ್ಳುತ್ತದೆಯೇ?

ಭವಿಷ್ಯದಲ್ಲಿ ಮಾರ್ಗ? 1975–77ರಲ್ಲಿ ಇದ್ದಂತೆ, ಭಯೋತ್ಪಾದನೆಯ ನಿರಂಕುಶ ಆಡಳಿತದ ವಿರುದ್ಧ ಸಿಪಿಐ–ಎಂ ಈಗಲೂ ಪ್ರತಿರೋಧದ ಹಾದಿಯಲ್ಲಿದೆ. ಅದೇ ಸಮಯದಲ್ಲಿ, ಇತರ ಪಕ್ಷಗಳ ಹಿಂದಿನ ತಪ್ಪುಗಳನ್ನು ಲೆಕ್ಕಿಸದೆ, ಜಾತ್ಯತೀತತೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಸಾಂವಿಧಾನಿಕ ಮೌಲ್ಯಗಳನ್ನು ಸ್ಥಾಪಿಸುವ ವಿಶಾಲ ಹೋರಾಟದಲ್ಲಿ ಸಾಧ್ಯವಿರುವ ಎಲ್ಲ ಸಾಧ್ಯತೆಗಳೊಂದಿಗೆ ಕೈಜೋಡಿಸಲು ಸಿಪಿಐ(ಎಂ) ಸಿದ್ಧವಾಗಿದೆ.

ಕೃಪೆ–ದೇಶಾಭಿಮಾನಿ: ಅನು–ಸಿಚಿ





ಮಣಿಪುರಕ್ಕೆ ಕೈ ಕೊಟ್ಟ ಮೋದಿ

ಬಿಜೆಪಿ ಸಂಕುಚಿತ ನೀತಿಯಿಂದ ಈಶಾನ್ಯ ರಾಜ್ಯಕ್ಕೆ ಬೆಂಕಿ





ಪ್ರಕಾಶ್ ಕಾರತ್

ಮಣಿಪುರ ಹೊತ್ತಿ ಉರಿಯುತ್ತಿರುವುದು ಈಶಾನ್ಯ ಭಾರತದಲ್ಲಿ ಬಿಜೆಪಿಯ ವಿಭಜನಕಾರಿ ರಾಜಕೀಯದ ಸಂಕೇತವಾಗಿ ಪರಿಣಮಿಸಿದೆ. ಕೇವಲ ನಾಲ್ಕು ತಿಂಗಳ ಹಿಂದೆ, ಅಂದರೆ ಫೆಬ್ರವರಿಯಲ್ಲಿ ನರೇಂದ್ರ ಮೋದಿ ಈಶಾನ್ಯದಲ್ಲಿ ತ್ರಿಪುರಾ, ಮೇಘಾಲಯ ಮತ್ತು ನಾಗಾಲ್ಯಾಂಡ್ ವಿಧಾನ ಸಭೆ ಚುನಾವಣೆಗಳಲ್ಲಿ ಬಿಜೆಪಿ ಗಳಿಸಿದ ಯಶಸ್ಸಿನ ಬಗ್ಗೆ ದೊಡ್ಡದಾಗಿ ಕೊಚ್ಚಿಕೊಂಡಿದ್ದರು. ಈಶಾನ್ಯ ಭಾರತದ ಕ್ರೈಸ್ತರು ಬಿಜೆಪಿಯನ್ನು ಒಪ್ಪಿಕೊಳ್ಳುತ್ತಿದ್ದಾರೆ ಎಂದು ಹೇಳಿಕೊಂಡಿದ್ದರು.

ಮಣಿಪುರದಲ್ಲಿ ಮೇ 3ರಂದು ಹಿಂಸಾಚಾರ ಸ್ಫೋಟಗೊಂಡು ಇದೀಗ ಏಳು ವಾರವಾಗಿದೆ. ಸಶಸ್ತ್ರ ಘರ್ಷಣೆಗಳು, ಕೊಲೆಗಳು ಮತ್ತು ದೊಂಬಿಗಳು ರಾಜ್ಯವನ್ನು ಉಧ್ವಸ್ತಗೊಳಿಸಿವೆ. ನೂರಾರು ಮನೆಗಳು, ಸುಮಾರು 200 ಚರ್ಚ್‌ಗಳು ಮತ್ತು 17 ದೇವಾಲಯಗಳು ಬೆಂಕಿಗಾಹುತಿಯಾಗಿವೆ. ಇಂಫಾಲ್‌ನಲ್ಲಿರುವ ಕೇಂದ್ರದ ಒಬ್ಬ ಸಚಿವರ ಮನೆಯನ್ನು ಕೂಡ ಬಿಟ್ಟಿಲ್ಲ. ಸೇನೆಯೊಂದಿಗೆ 35,000 ಕೇಂದ್ರೀಯ ಸಶಸ್ತ್ರ ಪೊಲೀಸರನ್ನು ರಾಜ್ಯದಲ್ಲಿ ನಿಯೋಜಿಸಿದರೂ ಸಶಸ್ತ್ರ ಕುಕಿ ಮತ್ತು ಮೀತಿ ಗುಂಪುಗಳು ದಾಳಿ ಮಾಡುವ ಘಟನೆಗಳು ಇನ್ನೂ ನಿಲ್ಲದೆ ಮುಂದುವರಿದಿವೆ. ಮೃತರ ಸಂಖ್ಯೆ 100 ದಾಟಿದೆ ಮತ್ತು ಪರಿಹಾರ ಶಿಬಿರಗಳಲ್ಲಿ ಕನಿಷ್ಠ 50,000 ಜನರು ಆಶ್ರಯ ಪಡೆದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ, ಹಿಂಸಾಚಾರದ ಕಿಚ್ಚು ರಾಜ್ಯವನ್ನು ಆವರಿಸಿದ ಸರಿಯಾಗಿ 26 ದಿನಗಳ ನಂತರ, ಮೇ 29ರಂದು ಮಣಿಪುರಕ್ಕೆ ಭೇಟಿ ನೀಡಿದ್ದರು. ಅವರ ಭೇಟಿ ಹಾಗೂ ಪ್ರಕಟಿಸಿದ ಕ್ರಮಗಳು ಹಿಂಸಾಚಾರವನ್ನು ತಣಿಸಿಲ್ಲ. ಕಾನೂನು ಕುಸಿದುಬಿದ್ದಿರುವ ಪರಿಸ್ಥಿತಿಯನ್ನು ಎರಡೂ ಕಡೆಗಳ ಉಗ್ರಗಾಮಿಗಳು ಬಳಸಿಕೊಳ್ಳುತ್ತಿರುವುದರಿಂದ ಮೀತಿಗಳು ಮತ್ತು ಕುಕಿಗಳ ನಡುವಿನ ವಿಭಜನೆಯು ಈಗ ಸಂಪೂರ್ಣಗೊಂಡಂತಾಗಿದೆ.

ಸೂಕ್ಷ್ಮ ಗಡಿ ರಾಜ್ಯ

ಮಣಿಪುರ ಒಂದು ಸೂಕ್ಷ್ಮ ಗಡಿ ರಾಜ್ಯವಾಗಿದೆ. 36 ಜನಾಂಗೀಯ (ಎಥ್ನಿಕ್) ಮತ್ತು ಧಾರ್ಮಿಕ ಸಮುದಾಯಗಳೊಂದಿಗಿನ ವೈವಿಧ್ಯದಿಂದಾಗಿ ಅದು ಗಮನಾರ್ಹವಾಗಿದೆ. ಆ ಪೈಕಿ ಮೂರು ಮುಖ್ಯ ಸಮುದಾಯಗಳು ಮೀತಿ ಸಮುದಾಯದವರಾಗಿದ್ದು ಇಂಫಾಲ್ ಕಣಿವೆಯಲ್ಲಿ ವಾಸವಿದ್ದಾರೆ. ಅವರು ಹಿಂದೂ ಧರ್ಮವನ್ನು ಅಥವಾ ದೇಶೀಯ ಸನಮಾಹಿ ಧರ್ಮವನ್ನು ಅನುಸರಿಸುತ್ತಾರೆ. ಕುಕಿಗಳು ಮತ್ತು ನಾಗಾಗಳು ಪ್ರಮುಖವಾಗಿ ಕ್ರೈಸ್ತ ಧರ್ಮೀಯರಾಗಿದ್ದಾರೆ. ಅವರಲ್ಲದೆ, ಸಣ್ಣ ಪುಟ್ಟ ಬುಡಕಟ್ಟು ಸಮುದಾಯಗಳು ಮತ್ತು ಇತರ ರಾಜ್ಯಗಳ ಜನರು ಇದ್ದಾರೆ.

ವಿವಿಧ ಜನಾಂಗೀಯ ಸಮುದಾಯಗಳ ಸಶಸ್ತ್ರ ಗುಂಪುಗಳ ಉಗ್ರಗಾಮಿ ಚಟುವಟಿಕೆಗಳಿಂದಾಗಿ ಮಣಿಪುರ ಹಲವು ದಶಕಗಳಿಂದ ಸಂತ್ರಸ್ತವಾಗಿದೆ. ಹಿಂದೆ ರಾಜ್ಯದಲ್ಲಿ ನಾಗಾಗಳು ಮತ್ತು ಕುಕಿಗಳ ನಡುವೆ ಘರ್ಷಣೆಗಳಾಗಿದ್ದವು. 2017ರಲ್ಲಿ ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬರುವುದರೊಂದಿಗೆ ಕ್ರೈಸ್ತರಾಗಿರುವ ಕುಕಿಗಳ ವಿರುದ್ಧ ಮೀತಿಗಳನ್ನು ಒಂದು ಹಿಂದೂ ಶಕ್ತಿಯನ್ನಾಗಿ ಕ್ರೋಢೀಕರಿಸಲು ಆರ್‌ಎಸ್‌ಎಸ್ ಮತ್ತು ಅದರ ಸಂಘಟನೆಗಳು ಸಕ್ರಿಯವಾಗಿ ಕೆಲಸ ಆರಂಭಿಸಿದವು. ಇದು ಮೀತಿ–ಕುಕಿ ಸಂಘರ್ಷಕ್ಕೆ ಹಿಂದೂ–ಕ್ರೈಸ್ತ ಸಂಘರ್ಷದ ಬಣ್ಣವನ್ನೂ ನೀಡಿತು.

2021ರಲ್ಲಿ ಮಿಲಿಟರಿ ಸರ್ವಾಧಿಕಾರ ಅಧಿಕಾರಕ್ಕೆ ಬಂದ ಮೇಲೆ ಮಿಲಿಟರಿ ದೌರ್ಜನ್ಯದ ಕಾರಣ ಮ್ಯಾನ್ಮಾರ್‌ನಿಂದ ಓಡಿ ಬಂದ ಸಾವಿರಾರು ಚಿನ್ ನಿರಾಶ್ರಿತರಿಂದಾಗಿ ಇತ್ತೀಚಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ. ಚಿನ್ ಕೂಡ ಕುಕಿ ಜನಾಂಗೀಯ ಗುಂಪಿನಂಥದ್ದೇ ಜನಾಂಗೀಯ ಗುಂಪಾಗಿದೆ. ಮಿಜೋರಂ ಮತ್ತು ಮಣಿಪುರ ಎರಡೂ ರಾಜ್ಯಗಳಲ್ಲಿ ತಮ್ಮ ಗುಂಪಿಗೆ ಸೇರಿದ ಚಿನ್‌ಗಳನ್ನು ಜನಾಂಗೀಯ ಬಂಧುಗಳು ಸ್ವಾಗತಿಸಿದ್ದು ಆಶ್ರಯ ನೀಡಲಾಗಿದೆ. ಆದರೆ ಅವರಿಗೆ ನಿರಾಶ್ರಿತರ ಸ್ಥಾನಮಾನ ನೀಡಲು ಭಾರತ ಸರಕಾರ ನಿರಾಕರಿಸಿದೆ ಹಾಗೂ ಅವರು ಕಾನೂನುಬಾಹಿರ ವಲಸಿಗರೆಂದು ಘೋಷಿಸಿದೆ.

ಮೀಸಲು ಅರಣ್ಯಗಳಿಂದ ಒಕ್ಕಲೆಬ್ಬಿಸುವ ಕ್ರಮ

ಮೀಸಲು ಅರಣ್ಯಗಳಿಂದ ಒಕ್ಕಲೆಬ್ಬಿಸುವ ಕ್ರಮ ಆರಂಭಿಸುವ ಮೂಲಕ ಮಣಿಪುರದ ಬೀರೇನ್ ಸಿಂಗ್ ಸರಕಾರ ಪರಿಸ್ಥಿತಿ ಬಿಗಡಾಯಿಸುವಂತೆ ಮಾಡಿದೆ. ಸರಕಾರದ ಕ್ರಮದಿಂದ ದೊಡ್ಡ ಸಂಖ್ಯೆಯಲ್ಲಿ ಕುಕಿ ಕುಟುಂಬಗಳು ತೊಂದರೆಗೆ ಒಳಗಾಗಿವೆ. ಗಸಗಸೆ ಬೆಳೆ ಮೇಲೆ ದಾಳಿ ಮಾಡಿದ್ದು ಕೂಡ ಕುಕಿಗಳ ವಿರುದ್ಧದ ಆಕ್ರಮಣ ಎಂದು ಭಾವಿಸಲಾಯಿತು. ಅರಂಬಾಯ್ ತೆಂಗೋಲ್ ಮತ್ತು ಮೀತಿ ಪೀಲುನ್ ಮುಂತಾದ ಉಗ್ರಗಾಮಿ ಮೀತಿ ಗುಂಪುಗಳಿಗೆ ಆರೆಸ್ಸೆಸ್–ಬಿಜೆಪಿ ಪ್ರೋತ್ಸಾಹ ನೀಡುತ್ತಿವೆ. ಈ ಗುಂಪುಗಳು ಕುಕಿಗಳ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದು ಹೊರಗಡೆಯಿಂದ ಅಕ್ರಮವಾಗಿ ಬಂದವರು ಎಂದು ಪ್ರಚಾರ ಮಾಡುತ್ತಿವೆ.

ಬೆತ್ತಲಾದ ಬಿಜೆಪಿ ದ್ವಂದ್ವ ಆಟ

ಚುನಾವಣೆಯಲ್ಲಿ ತನಗೆ ನೆರವಾಗುವ ಉದ್ದೇಶದಿಂದ ಕೆಲವು ಕುಕಿ ಸಶಸ್ತ್ರ ಉಗ್ರಗಾಮಿ ಗುಂಪುಗಳನ್ನು ಬಿಜೆಪಿ ಪಟ್ಟಿ ಮಾಡಿದಾಗ ಅದರ ದ್ವಂದ್ವ ಆಟ ಬಯಲಾಯಿತು. ಒಂದು ಕುಕಿ ಸಶಸ್ತ್ರ ಗುಂಪಿನ ನಾಯಕ, ಯುನೈಟೆಡ್ ಕುಕಿ ಲಿಬರೇಶನ್ ಫ್ರಂಟ್ (ಯುಕೆಎಲ್‌ಎಫ್) ಅಧ್ಯಕ್ಷ ಎಸ್.ಎಸ್. ಹೊಕಿಪ್, ಕೇಂದ್ರ ಗೃಹ ಸಚಿವ ಅಮಿತ್ ಷಾಗೆ 2019ರ ಜೂನ್‌ನಲ್ಲಿ ಒಂದು ಪತ್ರ ಬರೆದಿದ್ದರು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಪಕ್ಷದ ಈಶಾನ್ಯ ರಾಜ್ಯಗಳ ಇನ್‌ಚಾರ್ಜ್ ರಾಮ್ ಮಾಧವ್ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಶ್ವ ಶರ್ಮಾ ತನ್ನನ್ನು (ಹೊಕಿಪ್) ಸಂಪರ್ಕಿಸಿ 2017ರ ಅಸೆಂಬ್ಲಿ ಚುನಾವಣೆ ಹಾಗೂ 2019ರ ಲೋಕಸಭೆ ಚುನಾವಣೆಗಳಲ್ಲಿ ನೆರವು ಯಾಚಿಸಿದ್ದರು ಎಂದು ಷಾಗೆ ಬರೆದ ಪತ್ರದಲ್ಲಿ ಹೊಕಿಪ್ ಹೇಳಿದ್ದರು. ಇಂಫಾಲ್‌ನ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಕೋರ್ಟ್‌ಗೆ ಸಲ್ಲಿಸಲಾದ ಅಫಿಡವಿಟ್‌ನೊಂದಿಗೆ ಅಡಕಗೊಳಿಸಲಾದ ಈ ಪತ್ರದ ಪ್ರಕಾರ ಹಣವನ್ನು ಕೂಡ ಪಾವತಿ ಮಾಡಿರುವುದು ಸ್ಪಷ್ಟವಾಗಿದೆ. 2008ರ 'ಕಾರ್ಯಾಚರಣೆಗಳನ್ನು ಅಮಾನತುಗೊಳಿಸುವ' ಒಪ್ಪಂದಕ್ಕೆ ಸಹಿ ಹಾಕಿದ ಸಂಘಟನೆಗಳಲ್ಲಿ ಯುಕೆಎಲ್‌ಎಫ್ ಕೂಡ ಒಂದಾಗಿದೆ.

ಬಿಜೆಪಿ ಮತ್ತು ಬೀರೇನ್ ಸಿಂಗ್ ಸರಕಾರದ ಈ ಇಬ್ಬಗೆ ಆಟವು ಅವರು ಮೀತಿ ಸಮುದಾಯದ ನಡುವೆ ಬೆತ್ತಲಾಗಲು ಕಾರಣವಾಯಿತು. ತಮ್ಮ ಎಲ್ಲಾ ಸಮಸ್ಯೆಗಳಿಗೆ ಬೀರೇನ್ ಸರಕಾರವೇ ಕಾರಣವೆಂದು ಭಾವಿಸಿದ್ದ ಕುಕಿಗಳು ಸಂಪೂರ್ಣವಾಗಿ ಬೀರೇನ್ ಸಿಂಗ್ ಸರಕಾರದ ವಿರುದ್ಧವಿದ್ದಾರೆ. ಕುಕಿ ಗುಡ್ಡಗಾಡು ಜಿಲ್ಲೆಗಳಿಂದ ಆಯ್ಕೆಯಾಗಿರುವ 10 ಶಾಸಕರಲ್ಲಿ ಬಹುತೇಕರು ಬಿಜೆಪಿಯವರಾಗಿದ್ದು ಎಲ್ಲಾ ಹತ್ತು ಶಾಸಕರೂ ಕುಕಿ ಪ್ರದೇಶಕ್ಕಾಗಿ ಪ್ರತ್ಯೇಕ ಆಡಳಿತದ ಬೇಡಿಕೆ ಮಂಡಿಸಿದ್ದಾರೆ.

ಮೋದಿ ಬಾಬಾ ದಿವ್ಯ ಮೌನ


ಪ್ರಧಾನಿ ನರೇಂದ್ರ ಮೋದಿ ತುಟಿ ಬಿಚ್ಚದೆ ಮೌನ ತಾಳಿರುವುದು ಇಡೀ ಪ್ರಕರಣದ ಅತ್ಯಂತ ಹೆಚ್ಚು ಜಿಜ್ಞಾಸೆ ಮೂಡಿಸಿರುವ ವಿಚಾರವಾಗಿದೆ. ಮಣಿಪುರ ಪರಿಸ್ಥಿತಿ ಬಗ್ಗೆ ಅವರು ಒಂದು ಮಾತನ್ನೂ ಆಡಿಲ್ಲ ಅಥವಾ ಶಾಂತಿ ಮತ್ತು ಸಹಜತೆ ಮರಳಿ ಸ್ಥಾಪನೆಗೆ ಮನವಿ ಮಾಡಿಯೂ ಇಲ್ಲ. ಬಿಜೆಪಿ ಶಾಸಕರಿದ್ದ ಎರಡು ನಿಯೋಗಗಳು ಮತ್ತು ಮಣಿಪುರದ ಪ್ರತಿಪಕ್ಷಗಳ ನಿಯೋಗ ಸಹಿತ ಮೂರು ರಾಜಕೀಯ ನಿಯೋಗಗಳು ಪ್ರಧಾನಿ ಭೇಟಿಗಾಗಿ ದೆಹಲಿಯಲ್ಲಿ ಕಾದಿದ್ದು ವ್ಯರ್ಥವಾಗಿದೆ. ಮೋದಿ ಅಮೆರಿಕ ಭೇಟಿಗಾಗಿ ಹೊರಟಿದ್ದನ್ನು ಮಾತ್ರ ನೋಡಿ ಅವರು ಮಣಿಪುರಕ್ಕೆ ಮರಳಬೇಕಾಯಿತು. ಹೊಣೆಗಾರಿಕೆ ಕುರಿತ ಪ್ರಧಾನ ಮಂತ್ರಿಯ ಈ ಸಂಪೂರ್ಣ ನಿರ್ಲಕ್ಷ್ಯವು ಮಣಿಪುರದ ಎಲ್ಲಾ ಜನ ವಿಭಾಗಗಳ ಆಕ್ರೋಶಕ್ಕೆ ಕಾರಣವಾಗಿದೆ.

ರಾಜ್ಯ ಸರಕಾರ ಅವ್ಯವಸ್ಥೆಯಿಂದ ಕೂಡಿದೆ ಹಾಗೂ ಅಧಿಕಾರದ ಸ್ಪಷ್ಟ ರೇಖೆಯನ್ನು ಗುರುತಿಸದಿರುವುದರಿಂದ ಮೊದಲು ಆಗಬೇಕಿರುವ ರಾಜಕೀಯ ಕೆಲಸವೆಂದರೆ ಬೀರೇನ್ ಸಿಂಗ್ ಸರಕಾರವನ್ನು ಕಿತ್ತು ಹಾಕುವುದು. ಇಂಥ ಕ್ರಮವನ್ನು ಕೈಗೊಳ್ಳದೇ ಈಶಾನ್ಯದಲ್ಲಿ ಆಡಳಿತ ನಡೆಸುತ್ತಿರುವ ಆಳುವ ಪಕ್ಷದ ಸಂಕುಚಿತ ಹಾಗೂ ಪಕ್ಷಪಾತಿ ಆಡಳಿತ ಸೃಷ್ಟಿಸಿರುವ ಗೊಂದಲದಿಂದ ಹೊರಬರಲು ಸಾಧ್ಯವಿಲ್ಲ.

ಅನು: ವಿಶ್ವ



16 ನೆಯ ಕರ್ನಾಟಕ ವಿಧಾನಸಭಾ ಚುನಾವಣಾ ಫಲಿತಾಂಶ ವಿವಿಧ ಜಿಲ್ಲೆಗಳಲ್ಲಿ ವ್ಯಕ್ತಗೊಂಡ ಬಗೆಯ ವಿಶ್ಲೇಷಣೆಯ ಸರಣಿಯಲ್ಲಿ ಎರಡು ಜಿಲ್ಲೆಗಳ ವರದಿಗಳು ಈ ಸಂಚಿಕೆಯಲ್ಲಿ ಪ್ರಸ್ತುತ ಪಡಿಸಲಾಗಿದೆ. ವಿಶೇಷ ಅವಲೋಕನ ಇಲ್ಲಿ ಮತ್ತು 10 ರಲ್ಲಿ.





ಉಡುಪಿ: ಸಡಿಲಗೊಳ್ಳದ ಬಿಜೆಪಿ ಹಿಡಿತ–ಕಾರಣಗಳೇನು?

ರಾಜ್ಯದಲ್ಲಿನ ವಿರೋಧಿ ಅಲೆಯ ನಡುವೆಯೂ ಉಡುಪಿ ಜಿಲ್ಲೆಯಲ್ಲಿ ಬಿ.ಜೆ.ಪಿ. ಗೆಲುವಿಗೆ ಕಾರಣಗಳೇನು? ಈ ಕುರಿತು ವಿಶ್ಲೇಷಿಸಿದ್ದಾರೆ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಯವರು

ಮೇ 13ನೇ ತಾರೀಖಿನಂದು ಚುನಾವಣಾ ಫಲಿತಾಂಶ ಹೊರ ಬರುತ್ತಲೇ ಸಿಪಿಐ(ಎಂ) ಪಕ್ಷದ ಹಿತೈಷಿಗಳು, ಪ್ರಗತಿಪರ ಚಿಂತಕರು ಕೆಲವರು ಫೋನ್ ಮಾಡಿ "ರಾಜ್ಯದ ಎಲ್ಲಾ ಕಡೆಗಳಲ್ಲಿ ಬಿಜೆಪಿ ಸೋತಿರುವಾಗ ಉಡುಪಿ ಜಿಲ್ಲೆಯ ಎಲ್ಲಾ ಐದು ಸೀಟುಗಳನ್ನು ಬಿಜೆಪಿ ಪಡೆದಿದೆಯಲ್ಲಾ? ಇದಕ್ಕೆ ಕಾರಣವೇನು" ಎಂದು ಕೇಳಿದರು. ತಕ್ಷಣ ನನಗೂ ಉತ್ತರ ಹೊಳೆಯಲಿಲ್ಲ. ವಿವಿಧ ವ್ಯಕ್ತಿಗಳೊಂದಿಗೆ, ವಿವಿಧ ಹಂತಗಳ ಸಮಿತಿಗಳಲ್ಲಿ ಚರ್ಚೆ ಮಾಡಿದಾಗ ಕೆಲವು ಸ್ಪಷ್ಟೀಕರಣ ದೊರೆಯಿತು.

ಜಿಲ್ಲೆಯಲ್ಲಿ 'ಹಿಂದುತ್ವ'ದ ಭಾವನೆ–ಮುಸ್ಲಿಂ ದ್ವೇಷ ತೀರಾ ಆಳಕ್ಕೆ ಇಳಿದಿದೆ. ಕಾಂಗ್ರೆಸ್ ಎಂದರೆ ಅದೊಂದು ಮುಸ್ಲಿಮರ ಪಕ್ಷ ಎಂದು ಬಿ.ಜೆ.ಪಿ. ಬೆಂಬಲಿಗರ ಮಧ್ಯೆ ಬ್ರಾಂಡ್ ಆಗಿದೆ. "ಮುಸ್ಲಿಮರು ಹಿಂದೂ ಯುವತಿಯರನ್ನು ಹಾಳು ಮಾಡುತ್ತಾರೆ, ಗೋವುಗಳನ್ನು ಕದ್ದು, ಮಾಂಸಕ್ಕಾಗಿ ಕೊಲ್ಲುತ್ತಾರೆ" ಇತ್ಯಾದಿ ಅಂಶಗಳು ಬಹುತೇಕ ಜನರ ಮನಸ್ಸಿನಲ್ಲಿ 'ಹೌದು' ಎಂಬಂತೆ ಬಿಂಬಿಸಲು ಕೋಮುವಾದಿಗಳ ಪ್ರಚಾರ ಯಶಸ್ವಿಯಾಗಿದೆ. ಸಿಪಿಐ(ಎಂ) ಪಕ್ಷದ ಕರೆಯ ಮೇರೆಗೆ "ಬಿಜೆಪಿಯನ್ನು ಸೋಲಿಸಿ" ಎಂದು ಕರಪತ್ರ ಹಾಕಿ, ನಾವು ಪ್ರಚಾರ ಮಾಡುತ್ತಿದ್ದಾಗ ಬಿಜೆಪಿ ಬೆಂಬಲಿಗರು ನಮ್ಮೊಂದಿಗೆ ನಡೆಸಿದ ವಾಗ್ವಾದ ಇದಕ್ಕೆ ಪುಷ್ಟಿ ಕೊಡುತ್ತದೆ. ಒಂದು ವರ್ಷದ ಹಿಂದೆ ನಡೆದ ಹಿಜಾಬ್ ಪ್ರಶ್ನೆ ಮುಸ್ಲಿಂ ವಿರೋಧಿ ಭಾವನೆಯನ್ನು ಇನ್ನಷ್ಟು ಗಟ್ಟಿಗೊಳಿಸಿದೆ. ಶಾಲೆಗಳಲ್ಲಿ, ದೇವಸ್ಥಾನಗಳಲ್ಲಿ ಆರ್.ಎಸ್.ಎಸ್.ನ ಗ್ರಾಮ ಮಟ್ಟದ ಶಾಖೆಗಳು ಸಕ್ರಿಯವಾಗಿ ಕೆಲಸ ಮಾಡಿವೆ. ಜತೆಯಲ್ಲಿ 5 ಕ್ಷೇತ್ರಗಳ ಪೈಕಿ 4 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಬದಲು ಮಾಡಿದ್ದು, ಬಿಜೆಪಿಗೆ ಅನುಕೂಲವಾಗಿದೆ. ಪುನರಾಯ್ಕೆ ಬಯಸಿದ್ದ ಏಕೈಕ ಅಭ್ಯರ್ಥಿ, ಮಾಜಿ ಸಚಿವ ಸುನೀಲ್ ಕುಮಾರ್ ಕೇವಲ 4,602 ಮತಗಳಿಂದ ಗೆದ್ದಿದ್ದಾರೆ. ಅವರು 2018ರಲ್ಲಿ 91,245 ಮತಗಳನ್ನು ಪಡೆದಿದ್ದು, ಈ ಬಾರಿ 77,028 ಮತಗಳನ್ನು ಮಾತ್ರ ಪಡೆದರು. ಅಂದರೆ 14,217 ಮತಗಳು (ಶೇ. 18.5) ಕಡಿಮೆಯಾಗಿದೆ. ಅವರ ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿ 2018ಕ್ಕಿಂತ (ಆಗ ಅಭ್ಯರ್ಥಿ ಬೇರೆ) 23,747 ಮತಗಳನ್ನು ಹೆಚ್ಚು ಪಡೆದು, 72,426 ಮತಗಳನ್ನು ಪಡೆದರು.

ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿಯದೇ ಪಾರುಪತ್ಯ

ಬಹುತೇಕ ಗ್ರಾಮ ಪಂಚಾಯತ್‌ಗಳು, ಎಲ್ಲಾ ತಾಲೂಕು ಪಂಚಾಯತ್‌ಗಳು, ಪುರಸಭೆ, ನಗರಸಭೆ, ಪಟ್ಟಣ ಪಂಚಾಯತ್‌ಗಳು ಬಿ.ಜೆ.ಪಿ. ಹಿಡಿತದಲ್ಲಿದೆ. ಅಂದರೆ ಸ್ಥಳೀಯ ಸಂಸ್ಥೆಗಳ ಬಹುತೇಕ ಸದಸ್ಯರು ಬಿಜೆಪಿಯವರು. ಚುನಾವಣೆ ಸಮಯದಲ್ಲಿ ರಸ್ತೆ ಕೆಲಸಗಳನ್ನು ಪೂರ್ಣಗೊಳಿಸುವುದು, ದೇವಸ್ಥಾನಗಳಿಗೆ, ದೈವಸ್ಥಾನಗಳಿಗೆ ಹಣ ನೀಡಿಕೆ ಇತ್ಯಾದಿ ಮೂಲಕ ಜನರನ್ನು ಆಕರ್ಷಿಸಿದೆ. ಒಟ್ಟಾರೆಯಾಗಿ ಜನರ ಧಾರ್ಮಿಕ ಭಾವನೆಯನ್ನು ಮತವಾಗಿ ಪರಿವರ್ತಿಸಿದೆ.

ಆದಿವಾಸಿ ಜನರಲ್ಲಿ ಕೊರಗ ಸಮುದಾಯ ಹೆಚ್ಚಾಗಿ ಬಿಜೆಪಿ ವಿರುದ್ಧ ಮತ ಹಾಕಿದ್ದಾರೆ. ಅವರ ನಡುವೆ ಕೆಲಸ ಮಾಡುತ್ತಿರುವ ಆದಿವಾಸಿ ಸಂಘಟನೆ ಈ ಕುರಿತು ಪ್ರಚಾರ ನಡೆಸಿದೆ. ಇತರೆ ಆದಿವಾಸಿಗಳು ಬಿಜೆಪಿಗೆ ಬೆಂಬಲ ನೀಡಿದ್ದಾರೆ ಎಂಬ ವರದಿ ಇದೆ. ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ 2013 ರಿಂದ 2018ರ ವರೆಗೆ ಮತ್ತು 2023ರ ವರೆಗೂ ಮುಂದುವರಿದು ಆರ್.ಎಸ್.ಎಸ್. ನಡೆಸಿದ ಚಟುವಟಿಕೆಗಳು ಆರ್.ಎಸ್.ಎಸ್. ಪ್ರಮುಖ ಕಾರ್ಯಕರ್ತರಾದ ಗುರುರಾಜ್ ಗಂಟಿಹೊಳೆಯವರ ಗೆಲುವಿಗೆ ಕಾರಣವಾಗಿದೆ. ಬಿಜೆಪಿಯ ಪ್ರಮುಖ ಕೆಲವು ಮುಖಂಡರು ಕಾಂಗ್ರೆಸ್‌ಗೆ ಸೇರಿದ್ದರೂ, ಅಂದಿನ ಶಾಸಕ ತಟಸ್ಥವಾಗಿ ಉಳಿದಿದ್ದರೂ ಶ್ರೀ ಗಂಟಿಹೊಳೆ ಗೆದ್ದಿದ್ದಾರೆ ಮಾತ್ರವಲ್ಲ, 2018ಕ್ಕಿಂತ 2,899 ಮತಗಳನ್ನು ಹೆಚ್ಚು ಪಡೆದಿದ್ದಾರೆ. ಆರ್.ಎಸ್.ಎಸ್. ಇಷ್ಟೊಂದು ಸಕ್ರಿಯವಾಗಿದೆ ಎಂದು ಅಂದಾಜು ಮಾಡುವಲ್ಲಿ ಕಾಂಗ್ರೆಸ್ ಸೋತಿದೆ. ಕಾಪುನಲ್ಲಿ ಹಿಂದೆ ಕಾಂಗ್ರೆಸ್ಸಿಗೆ ಮತ ನೀಡುತ್ತಿದ್ದ ಬಂಟರು ಸಮುದಾಯ ಈ ಬಾರಿ ಬಿಜೆಪಿಯ ಅಭ್ಯರ್ಥಿ ಸುರೇಶ್ ಶೆಟ್ಟಿ ಅವರಿಗೆ ಮತ ನೀಡಿರುತ್ತಾರೆ. ಬಿಲ್ಲವ ಯುವಕರು ಹಿಂದುತ್ವದ ಬಲೆಗೆ ಬಿದ್ದು, ಬಿ.ಜೆ.ಪಿ.ಯ ಬೆಂಬಲಿಗರಾಗಿದ್ದಾರೆ. ಈ ಬಾರಿ ಸ್ವಲ್ಪ ಬದಲಾವಣೆ ನಿರೀಕ್ಷಿಸಿದ್ದರೂ, 'ಬಜರಂಗದಳ ನಿಷೇಧ' ಕಾರಣದಿಂದ ಬಿಜೆಪಿಗೆ ಬೆಂಬಲ ಮುಂದುವರಿಸಿದ್ದಾರೆ ಎಂಬ ಅಭಿಪ್ರಾಯ ಇದೆ.

ರಾಜ್ಯದ ಆಡಳಿತ ನಾಲ್ಕು ವರ್ಷದ ಹಿಂದೆ ಕೈ ತಪ್ಪಿದ್ದರೂ, ಸ್ಥಳೀಯ ಆಡಳಿತ ಕಳೆದ 10–15 ವರ್ಷಗಳಿಂದ ಕಾಂಗ್ರೆಸ್ ಕಳೆದುಕೊಳ್ಳುತ್ತಲೇ ಇತ್ತು. ಸಂಘಟನೆ ಇಲ್ಲದ ಕಾಂಗ್ರೆಸ್‌ಗೆ ಕೆಳ ಹಂತದಲ್ಲಿ ಯುವ ಪ್ರತಿಭೆಗಳೇ ಇಲ್ಲದಂತಾಗಿತ್ತು.

ಅಧಿಕಾರವಿಲ್ಲದ ಕಾಂಗ್ರೆಸ್

ರಾಜ್ಯ ಸರಕಾರದಿಂದ ಹಿಡಿದು, ಕೆಳ ಹಂತದ ವರೆಗೂ ಅಧಿಕಾರ ಕಳೆದುಕೊಂಡ ಕಾಂಗ್ರೆಸ್ ಪಕ್ಷವು ಕಾರ್ಯಕರ್ತರ ಬೆಳವಣಿಗೆಗೆ ಸಾಕಷ್ಟು ಗಮನ ನೀಡಲಿಲ್ಲ. ರಾಜ್ಯದ ಆಡಳಿತ ನಾಲ್ಕು ವರ್ಷದ ಹಿಂದೆ ಕೈ ತಪ್ಪಿದ್ದರೂ, ಸ್ಥಳೀಯ ಆಡಳಿತ ಕಳೆದ 10–15 ವರ್ಷಗಳಿಂದ ಕಾಂಗ್ರೆಸ್ ಕಳೆದುಕೊಳ್ಳುತ್ತಲೇ ಇತ್ತು. ಸಂಘಟನೆ ಇಲ್ಲದ ಕಾಂಗ್ರೆಸ್‌ಗೆ ಕೆಳ ಹಂತದಲ್ಲಿ ಯುವ ಪ್ರತಿಭೆಗಳೇ ಇಲ್ಲದಂತಾಗಿತ್ತು. ಅನೇಕ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷದ ಗ್ಯಾರೆಂಟಿ ಕಾರ್ಡ್ ಸಂದೇಶವನ್ನು ಜನರಿಗೆ ತಲುಪಿಸಲು ವಿಫಲವಾಗಿದೆ. ಉಡುಪಿ ಜಿಲ್ಲೆಯ ಕಾಂಗ್ರೆಸ್ ಪಕ್ಷವು ರಾಜ್ಯಮಟ್ಟದಲ್ಲಿ ಬದಲಾವಣೆ ಆಗುವುದರಿಂದ ಇಲ್ಲಿಯೂ ಕನಿಷ್ಟ 2–3 ಕ್ಷೇತ್ರಗಳಲ್ಲಿ ಬದಲಾವಣೆ ಆಗುತ್ತದೆ ಎಂಬ ಭಾವನೆ ಹೊಂದಿದ್ದರು.

ಕೋಮುವಾದದ ವಿರುದ್ಧ ನಿರ್ಣಾಯಕವಾಗಿ ಪ್ರಚಾರ ನಡೆಸುವ ಬದಲಾಗಿ ಕೆಲವು ಕಾಂಗ್ರೆಸ್ ನಾಯಕರು ಮೃದು ಹಿಂದುತ್ವ ಧೋರಣೆಯನ್ನು ಹೊಂದಿದ್ದರು. ಅವರು ಚುನಾವಣೆ ಸಂದರ್ಭದಲ್ಲಿ ಮತ್ತು ನಂತರ ಹಿಂದೂ ಮತ್ತು ಮುಸ್ಲಿಂ ಧರ್ಮದ ಧ್ವಜ ಹಿಡಿದು ಸಭೆ ನಡೆಸಿದ್ದರು. ಇದರ ಭಾಗವಾಗಿಯೇ ಸಿದ್ದರಾಮಯ್ಯ ಅವರನ್ನು ಪ್ರಚಾರಕ್ಕೆ ಆಮಂತ್ರಿಸಿಲ್ಲ ಎಂದು ಹೇಳಲಾಗುತ್ತಿದೆ. ತೀರಾ ಸಂಘಟಿತರಾಗಿರುವ ಹಿಂದುತ್ವ ಸಿದ್ಧಾಂತವನ್ನು ತಡೆಗಟ್ಟಲು ಅಷ್ಟೇ ಸಂಘಟಿತವಾದ ಮತನಿರಪೇಕ್ಷತೆಯ (ಸೆಕ್ಯುಲರ್) ಸಿದ್ಧಾಂತ ಹೊಂದಿರುವ ಸಂಘಟನೆ/ಪಕ್ಷಗಳಿಂದ ಮಾತ್ರವೇ ಎದುರಿಸಲು ಸಾಧ್ಯವಿದೆ. ಅದು ಸತ್ಯ ಎಂಬುದನ್ನು ಉಡುಪಿ ಜಿಲ್ಲೆಯಲ್ಲಿ ಈ ಚುನಾವಣೆ ತೋರಿಸಿದೆ.

ಜನರ ನಡುವೆ ಪ್ರಚಾರ ನಡೆಸುವಾಗ ಸಿಕ್ಕಿದ ಅನುಭವವೆಂದರೆ ಬಡವರು, ದಲಿತ ಮಹಿಳೆಯರು ಬೆಲೆಯೇರಿಕೆ, ನಿರುದ್ಯೋಗ, ಆದಾಯ ಕುಸಿತ, ಭ್ರಷ್ಟಾಚಾರ ಇತ್ಯಾದಿ ಪ್ರಶ್ನೆಗಳ ಆಧಾರದ ಮೇಲೆ ಬಿ.ಜೆ.ಪಿ.ಯನ್ನು ಸೋಲಿಸಬೇಕೆಂಬ ಬಯಕೆ ಹೊಂದಿದ್ದರು. ಆದರೆ ಮಧ್ಯಮವರ್ಗ, ಯುವಜನ ಮೋದಿ ಮತ್ತು ಹಿಂದುತ್ವದ ಅಲೆಗೆ ಬಲಿಯಾಗಿದ್ದರು.

ಕಾಂಗ್ರೆಸ್ ಮತಗಳು ಏರಿಕೆ

2018 ಮತ್ತು 2023 ರಲ್ಲಿ ಪಡೆದ ಮತಗಳನ್ನು ಗಮನಿಸಿದಾಗ ಉಡುಪಿ ಕ್ಷೇತ್ರ ಹೊರತುಪಡಿಸಿ, ಉಳಿದ 4 ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿನ ಮತ ಹೆಚ್ಚಾಗಿದೆ. ಕಾರ್ಕಳದಲ್ಲಿ 2023ರಲ್ಲಿ 25,397 ಮತಗಳು (32.8%) ಹೆಚ್ಚಾಗಿದೆ ಮತ್ತು ಬಿಜೆಪಿ ಅಭ್ಯರ್ಥಿಗೆ 14,217 (18.5%) ಮತಗಳು ಕಡಿಮೆಯಾಗಿದೆ. ಕುಂದಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ 13,839 ಮತಗಳು ಹೆಚ್ಚಾಗಿದ್ದು (22.74%) ಬಿಜೆಪಿ ಅಭ್ಯರ್ಥಿಗೆ ಸುಮಾರು 1000(1%) ಮತಗಳು ಕಡಿಮೆಯಾಗಿವೆ. ಬೈಂದೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ 10,839 (13.14%) ಮತಗಳು ಹೆಚ್ಚಾಗಿದ್ದು, ಬಿಜೆಪಿ ಅಭ್ಯರ್ಥಿಗೂ 2,599 ಮತಗಳು (2.6%) ಹೆಚ್ಚಾಗಿವೆ. ಗೆಲುವಿನ ಅಂತರ 2018ರಲ್ಲಿ 24,393 ಇದ್ದದ್ದು 2023ರಲ್ಲಿ 16,153ಕ್ಕೆ ಇಳಿದಿದೆ. ಕಾಪುವಿನಲ್ಲಿ ಕಾಂಗ್ರೆಸ್ 3,597 ಮತ (5.3%) ಹೆಚ್ಚಿಸಿಕೊಂಡಿದ್ದು, ಬಿಜೆಪಿ ಕೂಡ 4,666 (5.8%) ಮತ ಹೆಚ್ಚಿಸಿಕೊಂಡಿದೆ.

ಉಡುಪಿ ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್ ಮತಗಳು 2023ರಲ್ಲಿ ಗಣನೀಯವಾಗಿ ಕಡಿಮೆ ಆಗಿವೆ (8,599–13.4%) ಬಿಜೆಪಿ ಮತಗಳು ಗಣನೀಯವಾಗಿ ಹೆಚ್ಚಾಗಿದೆ. 12,133 (12.5%). ಇದಕ್ಕೆ ಕಾರಣಗಳು ಸ್ಪಷ್ಟವಾಗಿ ಕಂಡು ಬರದಿದ್ದರೂ, ಈಗಿನ ಕಾಂಗ್ರೆಸ್ ಅಭ್ಯರ್ಥಿ ಸಾರ್ವಜನಿಕವಾಗಿ ಹೆಚ್ಚು ಪರಿಚಿತರಲ್ಲ. ಹಿಂದಿನ ಕಾಂಗ್ರೆಸ್ ಅಭ್ಯರ್ಥಿ ಪ್ರಮೋದ್ ಮಧ್ವರಾಜ್ ಬಿಜೆಪಿಗೆ ಸೇರಿರುವುದರಿಂದ 'ಮೊಗವೀರ' ಸಮುದಾಯದ ಮತಗಳು ಪೂರ್ತಿಯಾಗಿ ಬಿಜೆಪಿ ಅಭ್ಯರ್ಥಿಗೆ ಹೋಗಿರಬಹುದು ಎನ್ನುವ ಅಭಿಪ್ರಾಯ ಇದೆ.

ಚುನಾವಣಾ ಕೆಲಸದಲ್ಲಿ ಸಿಪಿಐ(ಎಂ)

2008, 2013 ಮತ್ತು 2018ರಲ್ಲಿ ಸತತವಾಗಿ 3 ಬಾರಿ ಬೈಂದೂರು ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷ ಸ್ಪರ್ಧೆ ಮಾಡುತ್ತಾ ಬಂದಿದೆ. ಬಿಜೆಪಿ–ಕಾಂಗ್ರೆಸ್ ನಡುವಿನ ನೇರ ಸ್ಪರ್ಧೆ, ಬಿಜೆಪಿಯನ್ನು ಸೋಲಿಸುವ ತೀವ್ರ ಅಗತ್ಯತೆ ಮೊದಲಾದ ಕಾರಣಗಳಿಂದ ಈ ಬಾರಿ ಸ್ಪರ್ಧೆ ಮಾಡುವುದು ಬೇಡ ಎಂದು ನಿರ್ಧರಿಸಲಾಗಿತ್ತು. ಬಿ.ಜೆ.ಪಿ.ಯನ್ನು ಸೋಲಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಪಕ್ಷ ನಿರ್ಧರಿಸಿತು. ಆದರೆ ಸ್ಪರ್ಧೆ ಇಲ್ಲದೇ ಇರುವುದರಿಂದ ಜನರ ನಡುವಿನ ಪ್ರಚಾರಕ್ಕೂ ಮಿತಿ ಇತ್ತು. ಜತೆಯಲ್ಲಿ ಸ್ಥಳೀಯ ಚುನಾವಣಾ ಅಧಿಕಾರಿಗಳು ಸ್ಪರ್ಧೆ ಇಲ್ಲದ ಪಕ್ಷಗಳಿಂದ ಪ್ರಚಾರ ಸಾಧ್ಯವಿಲ್ಲ ಎಂಬ ನಿಲುವನ್ನು ಹೊಂದಿದ್ದರು. ರಾಜ್ಯ ಮುಖಂಡರ ಮಧ್ಯ ಪ್ರವೇಶದ ನಂತರ ಮಾತ್ರವೇ ಪ್ರಚಾರ ಸಾಧ್ಯವಾಗಿತ್ತು. ಅಷ್ಟರಲ್ಲಿ ಚುನಾವಣೆಗೆ ಕೇವಲ ಮೂರು ದಿನ ಬಾಕಿ ಉಳಿದಿತ್ತು.

ಕಾರ್ಮಿಕ ರಂಗದ ಪ್ರಣಾಳಿಕೆಗಳನ್ನು ಕಾರ್ಮಿಕ ಸಂಘದ ಮುಖಂಡರು ಮತ್ತು ಕಾರ್ಯಕರ್ತರಿಗೆ ಹಂಚಿದೆವು. ಅದಕ್ಕೂ ಮೊದಲು ಪತ್ರಿಕಾಗೋಷ್ಠಿ ನಡೆಸಿ, ಕಾರ್ಮಿಕ ರಂಗದ ಪ್ರಣಾಳಿಕೆ ಬಿಡುಗಡೆ ಮಾಡಲಾಗಿತ್ತು. ಎಲ್ಲಾ ಕಾರ್ಮಿಕ ಸಂಘಗಳ ವಿವಿಧ ಹಂತಗಳ ಸಭೆಗಳಲ್ಲಿ ಕಾರ್ಮಿಕರ ಪ್ರಣಾಳಿಕೆಯನ್ನು ವಿವರಿಸುವುದರ ಜೊತೆಯಲ್ಲಿ ಬಿ.ಜೆ.ಪಿ.ಯನ್ನು ಸೋಲಿಸುವುದರ ಅವಶ್ಯಕತೆ ಬಗ್ಗೆ ವಿವರಣೆ ನೀಡಲಾಗಿದೆ.

ಪುಟ 12 ಕ್ಕೆ

ಧಾರವಾಡ–ಹಾವೇರಿ ಜಿಲ್ಲಾ ಚುನಾವಣಾ ಫಲಿತಾಂಶ

ಎರಡು ಪಕ್ಷಗಳ ನಡುವೆ ಧೃವೀಕರಣಗೊಂಡ ರಾಜಕಾರಣ

ಜಗದೀಶ್ ಶೆಟ್ಟರ್ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಬಳಿಕ ಜಿಲ್ಲೆಯ ಆ ಪ್ರದೇಶದ ರಾಜಕೀಯದಲ್ಲಿ ಬರುವ ಬದಲಾವಣೆಗಳ ಬಗ್ಗೆ ಕುತೂಹಲವಿತ್ತು. ಆದರೂ ಕಾಂಗ್ರೆಸ್ ಮೇಲುಗೈ ಸಾಧಿಸಲಿಲ್ಲ ಯಾಕೆ?. ಚುನಾವಣಾ ಫಲಿತಾಂಶದ ಕುರಿತು ಒಂದು ವಿಶ್ಲೇಷಣೆ – ಸಿಪಿಐ(ಎಂ) ಧಾರವಾಡ, ಹಾವೇರಿ ಜಿಲ್ಲಾ ಸಂಘಟನಾ ಸಮಿತಿಗಳ ಕಾರ್ಯದರ್ಶಿ ಮಹೇಶ್ ಪತ್ತಾರ್ ಅವರಿಂದ.



2023 ರಾಜ್ಯ ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಧಾರವಾಡ ಹಾವೇರಿ ಜಿಲ್ಲೆಗಳಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನಗಳನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಬಿಜೆಪಿಯ ಮತ ಶಕ್ತಿ ಕಡಿಮೆಯಾಗಿಲ್ಲ ಅನ್ನುವುದನ್ನು ಗಮನಿಸಬೇಕು. ಎರಡು ಜಿಲ್ಲೆಗಳ 13 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಮಾತ್ರ ನೇರ ಸ್ಪರ್ಧೆ ಏರ್ಪಟ್ಟಿತ್ತು. ಕಾಂಗ್ರೆಸ್‌ನ ಮಾಜಿ ಸಚಿವರಾದ ಹಾನಗಲ್‌ನ ಮನೋಹರ ತಹಶೀಲ್ದಾರ, ನವಲಗುಂದದ ಕೆ.ಎನ್. ಗಡ್ಡಿ, ಜೆಡಿಎಸ್ ಸೇರಿ ಸ್ಪರ್ಧಿಸಿದ್ದು ಹಾಗೂ ಕುಂದಗೋಳದಲ್ಲಿ ಬಿಜೆಪಿ ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡ್ರ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು ನಿರೀಕ್ಷೆಯಂತೆ ಯಾವುದೇ ಪರಿಣಾಮ ಬೀರಲಿಲ್ಲ. ಉಳಿದಂತೆ ಯಾವ ಕ್ಷೇತ್ರಗಳಲ್ಲೂ ಜೆಡಿಎಸ್, ಬಹುತೇಕ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಆಮ್ ಆದ್ಮಿ ಪಕ್ಷಗಳ ಅಭ್ಯರ್ಥಿಗಳು ಮತದಾರರನ್ನು ಸೆಳೆಯಲು ವಿಫಲವಾದರು. ಹೀಗಾಗಿ ಮೂರನೇ ಪರ್ಯಾಯವೇ ಕಾಣದ ಚುನಾವಣೆ ಇದಾಗಿತ್ತು.

ಧಾರವಾಡ ಜಿಲ್ಲೆಯ ಒಂದು ಎಸ್.ಸಿ. ಮೀಸಲು ಕ್ಷೇತ್ರ ಸೇರಿದಂತೆ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ 4 ಸ್ಥಾನಗಳನ್ನು ಗೆಲ್ಲುವುದರೊಂದಿಗೆ 2 ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ. ಬಿಜೆಪಿ 3 ಸ್ಥಾನಗಳನ್ನು ಗೆದ್ದು 2 ಸ್ಥಾನಗಳನ್ನು ಕಳೆದುಕೊಂಡಿದೆ. ಹಾವೇರಿ ಜಿಲ್ಲೆಯ ಒಂದು ಎಸ್‌ಸಿ ಮೀಸಲು ಕ್ಷೇತ್ರ ಸೇರಿದಂತೆ ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ 5 ಸ್ಥಾನಗಳನ್ನು ಗೆಲ್ಲುವುದರೊಂದಿಗೆ 4 ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ. ಬಿಜೆಪಿ 1 ಸ್ಥಾನವನ್ನು ಗೆದ್ದು 4 ಸ್ಥಾನಗಳನ್ನು ಕಳೆದುಕೊಂಡಿದೆ.

ಧಾರವಾಡ ಜಿಲ್ಲೆಯ ಏಳು ಕ್ಷೇತ್ರಗಳು ಸೇರಿ		
ಮತದಾನವಾದ ಒಟ್ಟು ಮತಗಳು	**ಕಾಂಗ್ರೆಸ್ ಪಡೆದ ಮತಗಳು**	**ಬಿಜೆಪಿ ಪಡೆದ ಮತಗಳು**
11,24,524	4,96,366	5,13,153
ಹಾವೇರಿ ಜಿಲ್ಲೆಯ ಆರು ಕ್ಷೇತ್ರಗಳು ಸೇರಿ		
10,71,062	5,06,715	4,60,231


ದೇಶದ ಗಮನ ಸೆಳೆದ ಕ್ಷೇತ್ರ, ಶೆಟ್ಟರ ಸೋಲು:

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿ ಸ್ಪರ್ಧಿಸಿದ್ದ ಹು–ಧಾ ಕೇಂದ್ರ ವಿಧಾನಸಭಾ ಕ್ಷೇತ್ರ ಈ ಚುನವಣೆಯಲ್ಲಿ ದೇಶದ ಗಮನ ಸೆಳೆದಿತ್ತು. ಬಿಜೆಪಿ ಕೇಂದ್ರ ನಾಯಕತ್ವ ವಿಶೇಷವಾಗಿ ಈ ಕ್ಷೇತ್ರವನ್ನು ಪರಗಣಿಸಿ ಎಲ್ಲಾ ರಾಜಕೀಯ ತಂತ್ರಗಳನ್ನು ಹೆಣದಿತ್ತು. ತೀವ್ರ ಪೈಪೋಟಿ ಏರ್ಪಟ್ಟಿತ್ತು. ಅಂತಿಮವಾಗಿ ಇಲ್ಲಿ 6 ಬಾರಿ ಗೆದ್ದಿದ್ದ ಜಗದೀಶ ಶೆಟ್ಟರ ಅವರ ಶಿಷ್ಯ ಹಾಗೂ ಪ್ರಲ್ಹಾದ ಜೋಶಿ ಆಪ್ತ ಸಂಘಪರಿವಾರದ ಯುವ ಮುಖಂಡ ಮಹೇಶ ಟೆಂಗಿನಕಾಯಿ ವಿರುದ್ಧ ಬಾರಿ ಅಂತರದಿಂದ ಈ ಬಾರಿ ಸೋಲನುಭವಿಸಿದರು. ಶೆಟ್ಟರ ವಯಕ್ತಿಕ ಪ್ರಭಾವದ ಮತಗಳು ಹಾಗೂ ಕಾಂಗ್ರೆಸ್‌ನ ಸಾಂಪ್ರದಾಯಕ ಮತಗಳು ಹಾಗೂ ಆಡಳಿತ ವಿರೋಧಿ ಅಲೆಯಿಂದ ಗೆಲ್ಲಬಹುದೆಂಬ ಅಂದಾಜು ಹುಸಿಯಾಗಿದೆ. ರಾಜ್ಯದ ಮತದಾರರಲ್ಲಿ ಈ ಚುನಾವಣೆಯಲ್ಲಿ ಬದಲಾವಣೆ ತರಬೇಕೆಂಬ ಅಭಿಪ್ರಾಯ ರೂಪಗೊಂಡಂತೆ ಹು–ಧಾ ಪಶ್ಚಿಮ ಮತ್ತು ಹು–ಧಾ ಕೇಂದ್ರ ವಿಧಾನಸಭಾ ಕ್ಷೇತ್ರಗಳಲ್ಲಿರುವ ಪ್ರತಿಷ್ಠಿತ ಕಾಲೋನಿಗಳಲ್ಲಿರುವ ಮಧ್ಯಮ ವರ್ಗದ ನೌಕರರು, ಮಧ್ಯಮ ವರ್ಗ, ಶ್ರೀಮಂತರು ಮತದಾರರಾಗಿದ್ದು ಇವರ ರಾಜಕೀಯ ಅಭಿಪ್ರಾಯ ರೂಪಗೊಳ್ಳದೇ ಬಿಜೆಪಿಯತ್ತ ವಾಲಿದೆ ಎನ್ನಬಹುದು. ಕಾಂಗ್ರೆಸ್‌ನ ಇದ್ದಷ್ಟು ಬೂತ್ ಮಟ್ಟದ ಕಾರ್ಯಕರ್ತರೊಂದಿಗೆ ಸಮನ್ವಯತೆ ಸಾಧಿಸಲು ಸಾಧ್ಯವಾಗದೆ ಇರುವುದು. ಶೆಟ್ಟರ ವಯಕ್ತಿಕ ಪ್ರಭಾವದ ಮತಗಳು ಬರದೇ ಇರುವುದು. ವ್ಯಾಪಕವಾಗಿ ಹಲವು ಅಪಪ್ರಚಾರವನ್ನು ಹರಿಬಿಟ್ಟಿದ್ದು ಸೋಲಿನ ಹಲವು ಕಾರಣಗಳು. ಹೀಗಾಗಿ ಈ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಆಡಳಿತ ವಿರೋಧಿ ಅಲೆಯ ಮಧ್ಯೆಯೇ ಅದು ಜಯ ಗಳಿಸಿದೆ.

ಈದ್ಗಾ ಘಟನೆಯ ನಂತರದಲ್ಲಿ ಸಂಘಪರಿವಾರ ಸಂಘಟನಾ ಶಕ್ತಿ ಬೇರುಬಿಟ್ಟಿರುವ ಈ ಕ್ಷೇತ್ರದಲ್ಲಿ ಈ ವರೆಗೂ ಕಾಂಗ್ರೆಸ್ ಗೆದ್ದಿಲ್ಲ. ಅದನ್ನು ಅಲುಗಾಡಿಸಲು ಈ ಚುನಾವಣೆಯಿಂದಲೂ ಸಾಧ್ಯವಾಗಿಲ್ಲ. ಜಗದೀಶ ಶೆಟ್ಟರ ಕಾಂಗ್ರೆಸ್ ಸೇರಿ ಸುತ್ತಲಿನ ಹಲವು ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದು ಕಾಂಗ್ರೆಸ್ ಗೆಲುವಿಗೆ ಅನುಕೂಲವಾಗಿದೆ. ಕಿತ್ತೂರು ಕರ್ನಾಟಕದಲ್ಲಿ ದೊಡ್ಡ ಸಮುದಾಯವಾದ ಲಿಂಗಾಯತ ಮತಗಳು ಕಾಂಗ್ರೆಸ್‌ಗೆ ಬಂದಿವೆ. ಜಗದೀಶ ಶೆಟ್ಟರ ಗೆಲವು ಸಾಧಿಸಿದ್ದರೆ ಮುಂದಿನ ಲೋಕಸಭಾ ಚುನಾವಣೆಯ ಮೇಲೆ ತೀವ್ರ ಪರಿಣಾಮ ಭೀರುತ್ತಿತ್ತು ಅನ್ನುವ ಅಭಿಪ್ರಾಯವಿದೆ.

ನಡೆಯದ ಎಐಎಂಐಎಂ, ಎಸ್‌ಡಿಪಿಐ ತಂತ್ರ

ಕಳೆದ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮುಖ್ಯವಾಗಿ ಮುಸ್ಲೀಂ ಮತ್ತು ದಲಿತ ಮತದಾರರು ಹೆಚ್ಚಿರುವ ಹು–ಧಾ ಪೂರ್ವ ಎಸ್‌ಸಿ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಸ್ಥಳೀಯ ಕಾಂಗ್ರೆಸ್ ಶಾಸಕರ ವಿರೋಧಿ ಗುಂಪು ಎಐಎಂಐಎಂ ಪಕ್ಷಕ್ಕೆ ಸೇರಿದ್ದರು. ಈ ಕ್ಷೇತ್ರದ ಹಲವು ವಾರ್ಡುಗಳಲ್ಲಿ ಎಐಎಂಐಎಂ ಸ್ಪರ್ಧೆ ಮಾಡುವುದರೊಂದಿಗೆ ಮುಸ್ಲಿಂ ದಲಿತ ಮತಗಳನ್ನು ಒಂದಡೇ ಕ್ರೋಢಿಕರಿಸಲು ಸ್ವಲ್ಪಮಟ್ಟಿನ ಯಶಸ್ಸು ಪಡೆದಿದ್ದರು. ಆ ಮುಖಾಂತರ 3 ವಾರ್ಡಗಳಲ್ಲಿ ಗೆಲುವು ಸಾಧಿಸಿದ್ದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿತ್ತು. ಎಐಎಂಐಎಂ ವರಿಷ್ಠ ಓವೈಸಿ ಇಲ್ಲಿ ಬಂದು ಪ್ರಚಾರ ಮಾಡಿದ್ದರು. ಪ್ರಸ್ತುತ ವಿಧಾನಸಭಾ ಚುನಾವಣೆಯಲ್ಲಿ ಎಐಎಂಐಎಂ ಹಾಗೂ ಎಸ್‌ಡಿಪಿಐ ಸ್ಪರ್ಧೆ ಮಾಡಿದ್ದರೂ ಅವರ ಮುಸ್ಲಿಂ ಕೋಮುವಾದದ ಅಜೆಂಡಾ ಫಲಿಸಲಿಲ್ಲ. ಕ್ಷೇತ್ರದ ಅಭಿವೃದ್ಧಿ ಪರ ಕೆಲಸ ಮಾಡಿದ ಕಾಂಗ್ರೆಸ್ ಅಭ್ಯರ್ಥಿ ಪ್ರಸಾದ ಅಬ್ಬಯ್ಯ ಮೂರನೆ ಬಾರಿ ಗೆಲುವು ಸಾಧಿಸಿದರು.



ಕ್ಷೇತ್ರದಿಂದ ಹೊರಗಿದ್ದು ಗೆಲುವು

ಯೋಗೀಶಗೌಡ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಮಾಜಿ ಸಚಿವ ಕಾಂಗ್ರೆಸ್‌ನ ವಿನಯ ಕುಲಕರ್ಣಿಗೆ ಧಾರವಾಡ ಜಿಲ್ಲೆ ಪ್ರವೇಶ ನಿರ್ಭಂದವಿದ್ದರಿಂದ ಕ್ಷೇತ್ರಕ್ಕೆ ಬರದೇ ಧಾರವಾಡ ಕ್ಷೇತ್ರದಿಂದ ಸ್ಪರ್ಧಿಸಿ ಗೆಲವು ಸಾಧಿಸಿದ್ದಾರೆ. ಈ ಕ್ಷೇತ್ರದಲ್ಲಿ ಮೊದಲಿನಿಂದಲು ಎರಡು ಭೂಮಾಲಿಕ ದಣಿಗಳ ಕುಟುಂಬದ ಮಧ್ಯೆ ಸ್ಪರ್ಧೆ. ವಿನಯ ಕುಲಕರ್ಣಿ ಜನರಿಗೆ ನೀಡುತ್ತಿದ್ದ ಸ್ಪಂದನೆ, ಅವರ ಬಗ್ಗೆ ಇದ್ದ ಅನುಕಂಪ, ಬಿಜೆಪಿಯಿಂದ ಶಾಸಕರಾಗಿದ್ದ ಅಮೃತ ದೇಸಾಯಿಯ ಕ್ಷೇತ್ರಾಭಿವೃದ್ಧಿ ನಿರ್ಲಕ್ಷತನ ಹಾಗೂ ವಿನಯ ಕುಲಕರ್ಣಿ ಕುಟುಂಬದ ಸದಸ್ಯರು ಭಾವನಾತ್ಮಕವಾಗಿ ಪ್ರಚಾರದಲ್ಲಿ ಪಾತ್ರ ವಹಿಸಿದ್ದು ಗೆಲುವಿಗೆ ಕಾರಣ ಆಗಿರಬಹುದು.

ಮತ್ತೆ ಗೆದ್ದ ಮಹದಾಯಿ ಹೋರಾಟಗಾರ

ಈ ಭಾಗದಲ್ಲಿ ಇತ್ತೀಚಿಗೆ ನಡೆದ ರೈತರ ಜನಸಾಮಾನ್ಯರ ಬಹುದೊಡ್ಡ ಹೋರಾಟ ಕಳಸಾ ಬಂಡೂರಿ ಮಹದಾಯಿ ಹೋರಾಟ. ಈ ಹೋರಾಟದ ಮುಂಚೂಣಿಯಲ್ಲಿದ್ದ ಎನ್.ಎಚ್. ಕೊನರೆಡ್ಡಿ ಬಂಡಾಯದ ನೆಲ ನವಲಗುಂದದಿಂದ ಈ ಹಿಂದೆ 2014ರಲ್ಲಿ ಜೆಡಿಎಸ್‌ನಿಂದ ಗೆದ್ದು ಶಾಸಕರಾಗಿದ್ದರು. ಶಾಸನ ಸಭೆಯಲ್ಲಿ ಮಹದಾಯಿ ಕುರಿತು ಹಲವು ಬಾರಿ ಚರ್ಚೆ ಮಾಡಿದ್ದರು. ಕಳೆದ ಎರಡು ವರ್ಷಗಳ ಹಿಂದೆ ಕಾಂಗ್ರೆಸ್ ಸೇರಿದ್ದರು. ಕುರುಬ ಮತ್ತು ಲಿಂಗಾಯತ ಮತಗಳೆ ನಿರ್ಣಾಯಕವಾಗಿರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಲು ಪ್ರಬಲ ಆಕಾಂಕ್ಷಿಯಾಗಿದ್ದ ಕುರುಬ ಸಮುದಾಯದ ಯುವ ಮುಖಂಡ ವಿನೋದ ಅಸೂಟಿ ಬಂಡಾಯ ಏಳದೇ ಅಭ್ಯರ್ಥಿ ಎನ್.ಎಚ್.ಕೊನರೆಡ್ಡಿ ಅವರೊಂದಿಗೆ ಒಗ್ಗಟ್ಟಿನಿಂದ ಕೆಲ ನಿರ್ವಹಿಸಿದ್ದು ಹಾಗೂ ಈ ಹಿಂದೆ ಕ್ಷೇತ್ರದಲ್ಲಿ ಆದ ಜನಪರ ಕೆಲಸಗಳು ಗೆಲವಿಗೆ ಕಾರಣ. ಕಳಸಾ ಬಂಡೂರಿ ಯೋಜನೆ ಜಾರಿಯಾಗುವ ನಿರೀಕ್ಷೆ ಹೆಚ್ಚಾಗಿದೆ. ಲಿಂಗಾಯತ ಸಮುದಾಯದ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಸೋಲು ಅನುಭವಿಸಿದರು.


ಫಲಿಸದ ಪಕ್ಷಾಂತರ

ಕಾಂಗ್ರೆಸ್ ಅಭ್ಯರ್ಥಿಯಾಗಲು ಪ್ರಬಲ ಆಕಾಂಕ್ಷಿಯಾಗಿದ್ದ ಮಾಜಿ ವಿಧಾನ ಪರಿಷತ್ ಸದಸ್ಯ ನಾಗರಾಜ ಛೆಬ್ಬಿ ಕೊನೆಗಳಿಗೆಯಲ್ಲಿ ಕಲಘಟಗಿ ಕ್ಷೇತ್ರದಿಂದ ಮೊದಲ ಬಾರಿ ಸ್ಥಳೀಯರಾಗಿ ಗೆದ್ದಿನ ಹಾಲಿ ಬಿಜೆಪಿ ಶಾಸಕ ಸಿ.ಎಂ.ನಿಂಬಣ್ಣವರ ಬದಲಾಗಿ ಬಿಜೆಪಿ ಟಿಕೇಟ್ ಗಿಟ್ಟಿಸಿ ಸ್ಪರ್ಧೆಮಾಡಿ ಸೋಲು ಅನುಭವಿಸಿದರು. ಮೊದಲಿನಿಂದಲು ಹೊರಗಿನವರೆ ಗೆಲ್ಲುತ್ತ ಬಂದಿರುವ ಈ ಕ್ಷೇತ್ರದಲ್ಲಿ ಮತ್ತೊಂದು ಬಾರಿ ಕಾಂಗ್ರೆಸ್‌ನ ಸಂತೋಷ ಲಾಡ್ ಗೆಲವು ಸಾಧಿಸಿ ಈಗ ಸಚಿವರು ಆಗಿದ್ದಾರೆ.

ಏಕಾಂಗಿಯಾದ ಬಸವರಾಜ ಬೊಮ್ಮಾಯಿ

ಕಳೆದ ಬಾರಿ ಹಾವೇರಿ ಜಿಲ್ಲೆಯಲ್ಲಿ ಆರೂ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಸಿ.ಎಂ. ಉದಾಸಿ ನಿಧನದಿಂದ ತೆರುವಾದ ಹಾನಗಲ್ ಕ್ಷೇತ್ರದಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಜಯಬೇರಿ ಬಾರಿಸಿತ್ತು. ಆ ಸಂದರ್ಭದಲ್ಲಿ ಹಾವೇರಿ ಜಿಲ್ಲೆಯ ಶಾಸಕರಾಗಿದ್ದ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದರಿಂದ ಅವರು ಮುಖಭಂಗ ಅನುಭವಿಸಿದ್ದರು. ಪ್ರಸ್ತುತ ಚುನಾವಣೆಯಲ್ಲಿ ಹಿಂದಿನ ಮುಖ್ಯಮಂತ್ರಿಗಳಿಗೆ ಮತ್ತು ಅಂದಿನ ಕೃಷಿ ಸಚಿವ ಬಿ.ಸಿ.ಪಾಟೀಲ ಅವರಿಗೆ ಹಾವೇರಿ ಜಿಲ್ಲೆಯಲ್ಲಿ ಯಾವುದೇ ಪರಿಣಾಮ ಬೀರಲು ಸಾಧ್ಯವಾಗದಷ್ಟು ಆಡಳಿತ ವಿರೋಧಿ ಅಲೆ ಇತ್ತು. ಬಸವರಾಜ ಬೊಮ್ಮಾಯಿ ಜಿಲ್ಲೆಯಿಂದ ಗೆದ್ದ ಬಿಜೆಪಿಯ ಏಕೈಕ ಶಾಸಕರು. ಅವರು ಪ್ರತಿನಿಧಿಸುವ ಸವಣೂರ ಶಿಗ್ಗಾಂವ ಕ್ಷೇತ್ರ ಮುಸ್ಲಿಂ ಮತದಾರರು ಹೆಚ್ಚಿರುವ ಕ್ಷೇತ್ರ. ಕಾಂಗ್ರೆಸ್ ಅಭ್ಯರ್ಥಿ ಆಯ್ಕೆಯಲ್ಲಿ ಗೊಂದಲ ಮಾಡಿಕೊಂಡಿದ್ದು, ಸರಿಯಾದ ಕಾರ್ಯತಂತ್ರ ರೂಪಿಸದಿರುವುದು, ಹೊಂದಾಣಿಕೆ ರಾಜಕಾರಣ ಕಾಂಗ್ರೆಸ್ ಸೋಲಿಗೆ ಕಾರಣ ಎಂದು ಅಲ್ಲಿಯ ಜನರ ಅಭಿಪ್ರಾಯವಾಗಿದೆ.

ಒಟ್ಟಾರೆ ಎರಡು ಜಿಲ್ಲೆಗಳಲ್ಲಿ ಸೌಹಾರ್ದ ಪರಂಪರೆಯ ಬೀಡಾದ ಈ ಪ್ರದೇಶದಲ್ಲಿ ಶಾಂತಿ ನೆಮ್ಮದಿ ಇರಬೇಕು, ಒಂದು ಸುಭದ್ರ ಸರಕಾರ ಬರಬೇಕು, ಹಿಂದಿನ ಸರಕಾರದ ಮೀಸಲಾತಿ ಸೇರಿದಂತೆ ಜನವಿರೋಧಿ ನೀತಿಗಳ ಬಗ್ಗೆ ಇರುವ ಅತೃಪ್ತಿ, ಅನುಭವಿಸಿದ ಆರ್ಥಿಕ ಸಂಕಷ್ಟಗಳು, ಕಾಂಗ್ರೆಸ್‌ನ ಜನಪರ ಭರವಸೆಗಳು ಮತದಾರರ ಬದಲಾದ ರಾಜಕೀಯ ಅಭಿಪ್ರಾಯ ರೂಪಗೊಳ್ಳಲು ಕಾರಣಗಳಾಗಿದ್ದವು ಎನ್ನಬಹುದು.







ಉಜ್ವಲ ಯೋಜನೆ: PMUY ಮತ್ತೆ ಮರುಕಳಿಸಿದ ಕಣ್ಣೀರು!

ಮೋದಿ ಆಡಳಿತದ 9 ವರ್ಷಗಳ ಸಾಧನೆಗಳೇನು? ಭಾಗ – 4

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಮೇ 30 ಕ್ಕೆ 9 ವರ್ಷಗಳು ಕಳೆದಿವೆ. ಮೋದಿ ಆಡಳಿತದ ಸಾಧನೆಗಳ ಬಗ್ಗೆ ಬಿಜೆಪಿ, ಸಂಘಪರಿವಾರ ಹಾಗೂ ಕಾರ್ಪೊರೇಟ್ ಒಡೆತನದ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರು ಸಾಧನೆಗಳೆಂದು ಹೇಳುತ್ತಿರುವುದೆಲ್ಲಾ ನಿಜವಾಗಿಯೂ ಸಾಧನೆಗಳೇ? ಅವುಗಳು ಜನಪರವಾಗಿವೆಯೇ? ರಾಷ್ಟ್ರದ ಹಿತ ರಕ್ಷಿಸುವಂಥವೇ? ಸರ್ಕಾರದ ಈ ಎಲ್ಲಾ ಯೋಜನೆಗಳ ನಿಜವಾದ ಉದ್ದೇಶಗಳೇನು? ನವ ಉದಾರೀಕರಣ ನೀತಿಗಳ ಜಾರಿಗೆ ಈ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆಯೇ? ಭಾರತದ ಪ್ರತಿಯೊಂದು ವಲಯಗಳನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಒಪ್ಪಿಸಲು ಏನೆಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (FDI)ಗೆ ಮುಕ್ತ ಅವಕಾಶದ ಕಾರಣದಿಂದ ದೇಶದ ಹಲವು ವಲಯಗಳ ಮೇಲೆ ವಿದೇಶಿ ಹಣಕಾಸು ಸಂಸ್ಥೆಗಳು ಹೇಗೆಲ್ಲಾ ಹಿಡಿತ ಸಾಧಿಸಿವೆ. ಖಾಸಗೀಕರಣ ನೀತಿಗೆ ಅನುಗುಣವಾಗಿ ರೂಪಿಸಲಾಗಿರುವ ಯೋಜನೆಗಳನ್ನು 'ಜನಪರ ಯೋಜನೆಗಳು' ಎಂದು ಹೇಗೆಲ್ಲಾ ನಂಬಿಸ ತೊಡಗಿದ್ದಾರೆ.

ಈ ಕುರಿತು, ಬಿಜೆಪಿ ಹೇಳುತ್ತಿರುವ ಒಂದೊಂದೇ "ಸಾಧನೆಗಳ" ವಿಮರ್ಶಾತ್ಮಕ ಪುಟ್ಟ ಲೇಖನಗಳ ಸರಣಿಯ 4ನೆಯ ಲೇಖನ. ಮುಂದಿನ ವರ್ಷ ಲೋಕಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಈ ಲೇಖನಗಳು ಓದುಗರಿಗೆ ಒಂದಷ್ಟು ಮಾಹಿತಿ ನೀಡಬಹುದು ಎಂಬುದು 'ಜನಶಕ್ತಿ'ಯ ಆಶಯ.

"ನೋಡಿ ಇಲ್ಲಿ, ಹಳ್ಳಿಗಳಲ್ಲಿ ಬಡ ಮಹಿಳೆಯರು ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿದ್ದಾರೆ. ಸೌದೆಯ ಹೊಗೆ ಮಹಿಳೆಯರ ಕಣ್ಣುಗಳಲ್ಲಿ ನೀರು ಸುರಿಸುತ್ತಿದೆ. ಈ ಬಡ ಮಹಿಳೆಯರಿಗೆ ಸಬ್ಸಿಡಿ ದರದಲ್ಲಿ ಅಡುಗೆ ಅನಿಲ ಕೊಡಬೇಕಿದೆ. ಉಳ್ಳವರು ತಾವು ಪಡೆಯುತ್ತಿರುವ ಅಡುಗೆ ಅನಿಲದ ಸಬ್ಸಿಡಿಯನ್ನು ಬಿಟ್ಟುಕೊಡಿ" ಇದು ಮೋದಿ ಸರ್ಕಾರದ 'ಗಿವ್ ಇಟ್ ಅಪ್' ಎಂಬ ಕರೆಗೆ ಸ್ಪಂದಿಸುವಂತೆ 'ಉಳ್ಳವರಿಗೆ'(?) ಮಾಡಿದ ಕರೆಯ ಒಂದು ಜಾಹಿರಾತು. ಪ್ರಧಾನ್ ಮಂತ್ರಿ ಉಜ್ವಲ ಯೋಜನೆ(PMUY) ಯ ಜಾಹಿರಾತು ಕೂಡ ಇದೇ ಆಗಿತ್ತು. ಪೆಟ್ರೋಲ್ ಬಂಕ್ ಗಳಲ್ಲಿ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಾಕಲಾಗಿದ್ದ ದೊಡ್ಡ ದೊಡ್ಡ ಜಾಹಿರಾತು ಫಲಕಗಳಲ್ಲಿ, ಹೊಗೆಯಿಂದ ತುಂಬಿದ ಸೌದೆ ಒಲೆಯ ಮುಂದೆ ಕುಳಿತು ಕಣ್ಣಿರು ಸುರಿಸುತ್ತಿರುವ ಹಳ್ಳಿ ಮಹಿಳೆ ಮತ್ತು ಪ್ರಧಾನಿ ಮೋದಿ ಆ ಮಹಿಳೆಯ ಕಡೆ ಬೆರಳು ತೋರಿಸುವ ಚಿತ್ರವೊಂದನ್ನು ಹಾಕಲಾಗಿತ್ತು.

ಮೋದಿ ಸರ್ಕಾರದ ಸಾಧನೆಗಳ ಪಟ್ಟಿಯಲ್ಲಿ ಉಜ್ವಲ ಯೋಜನೆಯೂ ಒಂದು. ಇದು 1ನೇ ಮೇ 2016 ರಂದು ಪ್ರಾರಂಭವಾಯ್ತು. ಸರ್ಕಾರದ ಮಾಹಿತಿಯಂತೆ ಈ ಯೋಜನೆಯ ಮೂಲಕ 2023ರ ಜನವರಿ 30 ವರೆಗೆ 9.58 ಕೋಟಿ ಫಲಾನುಭವಿಗಳು ಇದರ ಲಾಭ ಪಡೆದಿದ್ದಾರೆ. ಈ ಯೋಜನೆಯಲ್ಲಿ ಬಿಪಿಎಲ್ ಕುಟುಂಬಗಳಿಗೆ (ಬಡತನ ರೇಖೆಗಿಂತ ಕೆಳಗಿರುವ ಕುಟುಂಬ) ಉಚಿತ ಅಡುಗೆ ಅನಿಲ (LPG) ಸಂಪರ್ಕ ನೀಡಲಾಗಿದೆ.

ಉಚಿತ ಸಂಪರ್ಕವಷ್ಟೆ, ಉಚಿತ ಅನಿಲವಲ್ಲ!

PMUY ಸಂಪರ್ಕಗಳಿಗೆ 14.2 ಕೆಜಿ ಸಿಲಿಂಡರ್ ಗೆ ರೂ. 1600 ಅಥವಾ 5 ಕೆಜಿ ಸಿಲಿಂಡರ್‌ಗೆ ರೂ. 1150 ನಗದು ಸಹಾಯವನ್ನು ಭಾರತ ಸರ್ಕಾರ ಒದಗಿಸಿದೆ. (ಸಿಲಿಂಡರ್‌ನ ಭದ್ರತಾ ಠೇವಣಿ 14.2 ಕೆಜಿ ಸಿಲಿಂಡರ್‌ಗೆ ರೂ.1250/, 5 ಕೆಜಿ ಸಿಲಿಂಡರ್‌ಗೆ ರೂ.800, ಒತ್ತಡ ನಿಯಂತ್ರಕ – ರೂ. 150, ಎಲ್ಪಿಜಿ ಹೋಸ್ – ರೂ. 100, ದೇಶೀಯ ಅನಿಲ ಗ್ರಾಹಕ ಕಾರ್ಡ್ – ರೂ. 25 ಮತ್ತು ತಪಾಸಣೆ/ ಸ್ಥಾಪನೆ/ ಪ್ರದರ್ಶನ ಶುಲ್ಕಗಳು – ರೂ. 75) ಇದರ ಜೊತೆಗೆ ಕೆಲವು ರಾಜ್ಯ ಸರ್ಕಾರಗಳು ಮತ್ತು ಕೆಲವು ಸಂಘ ಸಂಸ್ಥೆಗಳು ಉಜ್ವಲ ಫಲಾನುಭವಿಗಳಿಗೆ ಒಮ್ಮೆ ಮಾತ್ರ ಮೊದಲ LPG ರೀಫಿಲ್ ಮತ್ತು ಸ್ಟವ್ ನೀಡಿವೆ.

ಉಜ್ವಲ ಯೋಜನೆ ಅಡಿಯಲ್ಲಿ, ಮೋದಿ ಹೊಗೆರಹಿತ ಅಡುಗೆ ಒಲೆಗಳನ್ನು ಅಭಿವೃದ್ಧಿ ಪಡಿಸಿದರು, ಗ್ಯಾಸ್ ಸಿಲಿಂಡರ್‌ಗಳ ಬಳಕೆ ಮಾಡುವಂತೆ ಮಾಡುವ ಮೂಲಕ ದೀರ್ಘಕಾಲದ ಉಸಿರಾಟದ ಸಮಸ್ಯೆಗಳಿಂದ ಕೋಟಿಗಟ್ಟಲೆ ಮಹಿಳೆಯರನ್ನು ರಕ್ಷಿಸಿದರು, ಎಂಬಿತ್ಯಾದಿ ಹೊಗಳಿಕೆಗಳು ಇಂದಿಗೂ ಕೇಳಿಬರುತ್ತವೆ. ಗ್ರಾಮೀಣ ಭಾಗದ ಬಡ ಮಹಿಳೆಯರ ಬಗೆಗಿನ ಮೋದಿಯವರ ಕಾಳಜಿಗೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗುತ್ತದೆ. ನಂತರ ಏನಾಯಿತು ಎಂಬುದು ಎಲ್ಲರಿಗೂ ತಿಳಿದಿದೆ.

ಮೊದಲಿಗೆ ಅವರು ಉಳ್ಳವರಿಗೇಕೆ ಸಬ್ಸಿಡಿ ಎನ್ನುತ್ತ 'ಬಿಟ್ಟು ಕೊಡಿ' (Give it up) ಎಂದರು. ನಂತರ 'ಸರ್ಕಾರಿ ನೌಕರರಿಗೆ ಸಬ್ಸಿಡಿ ಏಕೆ' ಎಂದರು. ಆ ನಂತರ ಆದಾಯ ತೆರಿಗೆ ಕಟ್ಟುವವರಿಗೆ ಸಬ್ಸಿಡಿ ಇಲ್ಲ ಎಂದರು. ಕಡೆಗೊಮ್ಮೆ, ಕೊರೋನಾ ಸಾಂಕ್ರಾಮಿಕ ಬಂದು, ಲಾಕ್ ಡೌನ್ ಘೋಷಣೆ ಮಾಡಿ, ಯಾರೂ ಮನೆಯಿಂದ ಹೊರಬರಲಾಗದ ಸಮಯದಲ್ಲಿ ಎಲ್ಲರಿಗೂ ಅಡುಗೆ ಅನಿಲದ ಸಬ್ಸಿಡಿ ಸ್ಥಗಿತ ಮಾಡಿದರು. ನಂತರ ಅನಿಲದ ಬೆಲೆ ಹೆಚ್ಚಿಸುತ್ತಾ ಹೋದರು. ಅಂದು ಗೃಹಬಳಕೆಯ ಅಡುಗೆ ಅನಿಲದ ಸಿಲಂಡರ್ ಗೆ 450 ರೂ. ಇದ್ದುದು ಇಂದು 1150 ರೂ. ಆಗಿದೆ. ಇಷ್ಟು ದುಬಾರಿ ಬೆಲೆ ಕೊಟ್ಟು ಅನಿಲ ಖರೀದಿಲಾಗದ ಹಳ್ಳಿಗಳ ಬಡ ಮಹಿಳೆಯರು ಮತ್ತೆ ಸೌದೆ ಒಲೆಯತ್ತ ಮುಖ ಮಾಡಿದ್ದಾರೆ. ಮತ್ತೆ ಹೊಗೆಯಿಂದ ಕಣ್ಣೀರು ಸುರಿಸುತ್ತಿದ್ದಾರೆ. ಆದರೂ, ಅಂದು ಮಹಿಳೆಯರ ಕಣ್ಣೀರಿಗೆ ಹೃದಯ ಕರಗಿದವರಂತೆ ನಟಿಸಿದ ಮೋದಿ ಇಂದು ಈ ಮಹಿಳೆಯರತ್ತ ತಿರುಗಿಯೂ ನೋಡುತ್ತಿಲ್ಲ.

> **ಇಷ್ಟು ದುಬಾರಿ ಬೆಲೆ ಕೊಟ್ಟು ಅನಿಲ ಖರೀದಿಲಾಗದ ಹಳ್ಳಿಗಳ ಬಡ ಮಹಿಳೆಯರು ಮತ್ತೆ ಸೌದೆ ಒಲೆಯತ್ತ ಮುಖ ಮಾಡಿದ್ದಾರೆ. ಮತ್ತೆ ಹೊಗೆಯಿಂದ ಕಣ್ಣೀರು ಸುರಿಸುತ್ತಿದ್ದಾರೆ.**

ಎಲ್ಲವೂ ವ್ಯಾಪಾರಿ ಬುದ್ದಿ

ಯಾವುದೇ ಒಂದು ಖಾಸಗಿ ಕಂಪನಿ ಗ್ರಾಹಕರನ್ನು ತನ್ನತ್ತ ಸೆಳೆಯಲು ಹಲವು ಬಗೆಯ ಪ್ರಾರಂಭಿಕ ಕೊಡುಗೆ ನೀಡುತ್ತವೆ. ಉದಾಹರಣೆಗೆ, ಟ್ಯಾಕ್ಸಿ ಸೇವಾ ಕಂಪನಿಯೊಂದು 'ಮೊದಲ ಪ್ರಯಾಣ ಉಚಿತ', 'ರಿಯಾಯಿತಿ ದರದಲ್ಲಿ ಪ್ರಯಾಣ', 'ಮೊದಲ ಬಾರಿಗೆ ನಿಮ್ಮ ಮೊಬೈಲ್ ನಲ್ಲಿ

ಪುಟ 14 ಕ್ಕೆ

ರೀಫಿಲ್ ಮಾಡಲಾಗದ 92 ಲಕ್ಷ ಕುಟುಂಬಗಳು


ಪ್ರಧಾನ ಮಂತ್ರಿ ಉಜ್ವಲ ಯೋಜನೆ (ಪಿಎಂಯುವೈ) ಅಡಿಯಲ್ಲಿ ಮಹಿಳೆಯರಿಗೆ ವಿತರಿಸಲಾದ ಎಲ್.ಪಿ.ಜಿ. ಸಂಪರ್ಕಗಳು ಧೂಳು ಹಿಡಿಯುತ್ತಿವೆ. ಎಲ್.ಪಿ.ಜಿ. ಬೆಲೆ ಹೆಚ್ಚಿರುವುದರಿಂದ ಫಲಾನುಭವಿಗಳಿಗೆ ಸಿಲಿಂಡರ್ ತುಂಬಲು ಸಾಧ್ಯವಾಗುತ್ತಿಲ್ಲ. ಇದನ್ನು ಕೇಂದ್ರವೇ ಒಪ್ಪಿಕೊಂಡಿದೆ.

2021–22ರಲ್ಲಿ 92 ಲಕ್ಷ ಗ್ರಾಹಕರು ಯಾವುದೇ ಮರುಪೂರಣವನ್ನು ತೆಗೆದುಕೊಂಡಿಲ್ಲ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲದ ರಾಜ್ಯ ಸಚಿವ ರಾಮೇಶ್ವರ್ ತೇಲಿ ಅವರು ಆಗಸ್ಟ್ 1, 2022 ರಂದು ರಾಜ್ಯಸಭೆಗೆ ತಿಳಿಸಿದರು.

PMUY ಯ 9.34 ಕೋಟಿ ಫಲಾನುಭವಿಗಳಲ್ಲಿ 1.8 ಕೋಟಿ ಗ್ರಾಹಕರು ಕೇವಲ ವರ್ಷದಲ್ಲಿ ಒಮ್ಮೆ ಮಾತ್ರ ಮರುಪೂರಣವನ್ನು ತೆಗೆದುಕೊಂಡಿದ್ದಾರೆ. ಸಂಸತ್ತಿನಲ್ಲಿ ರಾಜ್ಯಸಭಾ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಮೋದ್ ತಿವಾರಿ ಅವರ ಪ್ರಶ್ನೆಗೆ ಉತ್ತರವಾಗಿ ಸಚಿವ ತೇಲಿ ಅವರು ಈ ಉತ್ತರ ನೀಡಿದ್ದಾರೆ.

ಪಿಎಂಯುವೈ ಯೋಜನೆಯ ಈ ಬಡ ಕುಟುಂಬಗಳನ್ನು ಎಲ್‌ಪಿಜಿ ಬಳಕೆಗೆ ಪ್ರೋತ್ಸಾಯಿಸಲು ಕೇಂದ್ರ ಸರ್ಕಾರ 2022–23ಕ್ಕೆ 12 ಸಿಲಿಂಡರ್‌ಗಳಿಗೆ ಪ್ರತಿ ಸಿಲಿಂಡರ್‌ಗೆ 200 ರೂ.ಗಳ ಸಬ್ಸಿಡಿ ನೀಡುವುದಾಗಿ ಘೋಷಿಸಿದೆಯಾದರೂ, ಈ ಅಲ್ಪ ಪ್ರಮಾಣದ ಸಬ್ಸಿಡಿ ಪಡೆದರೂ ಸಹ, 14.2 ಕೆಜಿ ಗ್ಯಾಸ್ ಸಿಲಿಂಡರ್ ಮುರುತುಂಬಿಸಲು ಅಂದಾಜು 1000 ರೂ ಪಾವತಿ ಮಾಡಬೇಕಾಗುತ್ತದೆ. ಈ ದರ 9 ವರ್ಷಗಳ ಹಿಂದಿನ ದರದ ಎರಡು ಪಟ್ಟಿಗಿಂತ ಹೆಚ್ಚೇ ಇರುತ್ತದೆ.

ಇದು ಉಜ್ವಲ ಯೋಜನೆಯ ಗ್ರಾಹಕರ ಕಥೆಯಾದರೆ, 2021–22ರಲ್ಲಿ ಒಟ್ಟು 30.53 ಕೋಟಿ ಸಕ್ರಿಯ ದೇಶೀಯ ಗ್ರಾಹಕರಲ್ಲಿ 2.11 ಕೋಟಿ ಜನರು ಯಾವುದೇ ಮರುಪೂರಣವನ್ನು ತೆಗೆದುಕೊಳ್ಳಲಿಲ್ಲ ಮತ್ತು 2.91 ಕೋಟಿ ಜನರು ಕೇವಲ ಒಂದು ಮರುಪೂರಣವನ್ನು ತೆಗೆದುಕೊಂಡಿದ್ದಾರೆ ಎಂಬ ಮಾಹಿತಿಯನ್ನು ಸಚಿವರು ನೀಡಿದರು.



ಬಿಜೆಪಿ ನಾಯಕರ ರಾಜ್ಯ ವಿರೋಧಿ ವರ್ತನೆ ಖಂಡನೀಯ

ಕರ್ನಾಟಕ ರಾಜ್ಯದ ಬಡ ಜನತೆಯ ಹಸಿವು ನೀಗಿಸುವ ಸದುದ್ದೇಶದಿಂದ ಕರ್ನಾಟಕ ಸರಕಾರ ಜಾರಿಗೊಳಿಸುತ್ತಿರುವ ಹತ್ತು ಕೆ.ಜಿ. ಆಹಾರಧಾನ್ಯ ಒದಗಿಸುವ ಅನ್ನ ಭಾಗ್ಯ ಯೋಜನೆಗೆ ಒಕ್ಕೂಟ ಸರಕಾರ ಬಡವರ ವಿರೋಧಿಯಾಗಿ ಅಸಹಕಾರ ತೋರುತ್ತಿರುವಾಗ, ರಾಜ್ಯದ ಬಿಜೆಪಿಯ ಎಂಪಿಗಳು ಮತ್ತು ಬಿಜೆಪಿ ಶಾಸಕರು, ಮಾಜಿ ಮುಖ್ಯಮಂತ್ರಿಗಳು ಒಕ್ಕೂಟ ಸರಕಾರದ ಮೇಲೆ ಒತ್ತಡ ಹೇರಿ ರಾಜ್ಯದ ಬಡ ಜನತೆಯ ಪರವಾಗಿ ನಿಲ್ಲುವ ಬದಲು, ಬಾಯಿ ಮುಚ್ಚಿಕೊಂಡು ಅಸಹ್ಯ ಮೌನ ವಹಿಸಿರುವುದು ತೀವ್ರ ಖಂಡನೀಯವಾಗಿದೆ. ಇದೊಂದು ನಾಚಿಕೆ ಗೇಡಿನ ವಿಚಾರವಾಗಿದೆ. ತಕ್ಷಣವೇ ತಮ್ಮ ತಮ್ಮ ಕ್ಷೇತ್ರಗಳ ಬಡ ಜನತೆಯ ಹಾಗೂ ರಾಜ್ಯದ ಪರವಾಗಿ ಒಕ್ಕೂಟ ಸರಕಾರದ ಮೇಲೆ ಒತ್ತಡ ಹೇರುವಂತೆ ಸಿಪಿಐ(ಎಂ) ಬಲವಾಗಿ ಒತ್ತಾಯಿಸಿದೆ.

ರಾಜ್ಯದ ಒಂದು ಪ್ರಬಲ ವಿರೋದ ಪಕ್ಷವಾಗಿ, ರಾಜ್ಯದ ಜನತೆಯ ಜೊತೆ ನಿಂತು ತನ್ನ ಕರ್ತವ್ಯ ನಿರ್ವಹಿಸದೇ ಇರುವುದು ಅಕ್ಷಮ್ಯವಾಗಿದೆ. ಈ ಯೋಜನೆಯು ರಾಜ್ಯದ ಸುಮಾರು 1.5 ಕೋಟಿ ಬಡ ಕುಟುಂಬಗಳಿಗೆ ನೇರವಾಗಿ ಪ್ರಯೋಜನವಾಗುತ್ತದೆ.

ಕೆಲವು ಬೇಜವಾಬ್ದಾರಿಯುತವಾದ ರಾಜ್ಯವನ್ನು ಪ್ರತಿನಿಧಿಸುವ ಒಕ್ಕೂಟ ಸರಕಾರದ ಮಂತ್ರಿಗಳು ಈ ಯೋಜನೆ ಜಾರಿಗೆ ತಂದದ್ದೇ ಅಪರಾಧವೆನ್ನುವಂತೆ ಮಾತನಾಡುವುದಲ್ಲದೇ, ಒಕ್ಕೂಟ ಸರಕಾರದ ಅಸಹಕಾರವನ್ನು ಪ್ರತಿಪಾದಿಸುವ ಜನ ವಿರೋದಿ ನಡೆ ತೋರುತ್ತಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ದೇಶದ ಜನತೆಯ ಒತ್ತಡಕ್ಕೆ ಮಣಿದು ಒಕ್ಕೂಟ ಸರಕಾರ ತಲಾ ಹತ್ತು ಕೆ.ಜಿ. ಅಕ್ಕಿ ದೇಶದಾದ್ಯಂತ ನೀಡಿರಲಿಲ್ಲವೇ? ಈಗಲೂ ಬೆಲೆ ಏರಿಕೆಯ ಬಿಸಿಯಲ್ಲಿ ಉಪವಾಸದಿಂದ ನರಳುವ ಜನತೆಗೆ ಆಹಾರಧಾನ್ಯ ನೀಡುವುದು ಅಪರಾಧವೇ? ಅಥವಾ ಅನ್ನ ಭಾಗ್ಯ ಯೋಜನೆ ಈ ಪ್ರಮಾಣದಲ್ಲಿ ಜಾರಿಗೊಳಿಸಿದರೇ ಕಾಳ ಸಂತೆಯ ಕಾರ್ಪೋರೇಟ್ ಲೂಟಿಗೆ ತೊಂದರೆಯಾಗುತ್ತದೆಂಬ ಭಯವೇ?! ಎಂದು ಸಿಪಿಐ(ಎಂ) ಪ್ರಶ್ನಿಸಿದೆ.

ಅದೇ ರೀತಿ, ಒಕ್ಕೂಟ ಸರಕಾರದ ಖಾಸಗೀಕರಣದ ನೀತಿಯ ಭಾಗವಾಗಿಯೇ ವಿದ್ಯುತ್ ಬೆಲೆ ಏರಿಕೆಯಾಗಿದೆ. ಈ ಕುರಿತು ಕೂಡಾ ಮೌನ ವಹಿಸಿದ್ದೀರಿ! ಒಕ್ಕೂಟ ಸರಕಾರ ಸಾರ್ವಜನಿಕ ರಂಗದ ವಿದ್ಯುತ್ ಉದ್ದಿಮೆಗಳು ಮತ್ತು ಸಂಸ್ಥೆಗಳನ್ನು ಕಾರ್ಪೋರೇಟ್ ಲೂಟಿಗೆ ತೆರೆಯಲು ವಿದ್ಯುತ್ ತಿದ್ದುಪಡಿ ಮಸೂದೆಗೆ ಕ್ರಮವಹಿಸುತ್ತಿದೆ ಈ ಕೂಡಲೇ ರಾಜ್ಯ ಬಿಜೆಪಿ ಸಂಸದರು, ಶಾಸಕರು ಮತ್ತು ಬಿಜೆಪಿ ಪಕ್ಷ ತಾವುಗಳೆಲ್ಲಾ ಮೌನ ಮುರಿದು ಜನತೆಯ ರಕ್ಷಣೆಗೆ ಬಾಯಿತೆರೆಯಲು ಸಿಪಿಐ(ಎಂ) ಒತ್ತಾಯಿಸಿದೆ.

ಉಡುಪಿ: ಸಡಿಲಗೊಳ್ಳದ ಬಿಜೆಪಿ ಹಿಡಿತ–ಕಾರಣಗಳೇನು..... ಪುಟ 9 ರಿಂದ

ಬಹುತೇಕ ಯಾರೂ ವಿರೋಧ ವ್ಯಕ್ತ ಮಾಡಿಲ್ಲ. ಹಂಚು ಕಾರ್ಮಿಕ ಸಂಘಟನೆ ಕಾರ್ಖಾನೆ ಮಟ್ಟದ ಸಭೆಗಳನ್ನು ನಡೆಸಿ ವಿವರಿಸಿದೆ. ಕಲ್ಯಾಣ ಮಂಡಳಿಯ ಹಣವನ್ನು ಬಿಜೆಪಿಯ ಮುಖಂಡರು ಮತ್ತು ಅಧಿಕಾರಿಗಳು ಹೇಗೆ ಲಪಟಾಯಿಸಿದ್ದಾರೆ ಎಂದು ಕಟ್ಟಡ ಕಾರ್ಮಿಕರಿಗೆ, ಜನರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದೆವು. ಕಟ್ಟಡ ಕಾರ್ಮಿಕ ಸಂಘಟನೆಗಳು ಪ್ರಾದೇಶಿಕ ಮಟ್ಟದ ಸಭೆಗಳಲ್ಲಿ ವಿವರಿಸಿದೆ. ಬೀಡಿ ಮತ್ತು ಇತರ ಸಂಘಟನೆಗಳು ಬಿಜೆಪಿಯನ್ನು ಸೋಲಿಸುವ ಅಗತ್ಯದ ಬಗ್ಗೆ ವಿವರಣೆ ನೀಡಿದ್ದಾರೆ.

ಮೇ ದಿನ ಆಚರಣೆಯ ಸಂದರ್ಭದಲ್ಲೂ ಬಿ.ಜೆ.ಪಿ. ನೀತಿಗಳು, ದುರಾಡಳಿತದ ವಿರುದ್ಧ ಸಾಕಷ್ಟು ಪ್ರಚಾರ ನಡೆಸಲಾಗಿದೆ. ಕಾರ್ಕಳ, ಉಡುಪಿ, ಬ್ರಹ್ಮಾವರ, ಸಾಲಿಗ್ರಾಮ, ಕುಂದಾಪುರ ಹಾಗೂ ಬೈಂದೂರು– ಒಟ್ಟು ಆರು ಪ್ರದೇಶಗಳಲ್ಲಿ ಸುಮಾರು 5,000ಕ್ಕೂ ಹೆಚ್ಚು ಜನರಿಗೆ ಸಂದೇಶ ನೀಡಲು ಸಾಧ್ಯವಾಗಿದೆ. ಕುಂದಾಪುರದಲ್ಲಿ ಚುನಾವಣಾ ಅಧಿಕಾರಿಗಳ ಕಿರಿಕಿರಿಯನ್ನು ಕಾರ್ಮಿಕರು ಎದುರಿಸಬೇಕಾಯಿತು.

ಜನರ ನಡುವೆ ಪ್ರಚಾರ ನಡೆಸುವಾಗ ಸಿಕ್ಕಿದ ಅನುಭವವೆಂದರೆ ಬಡವರು, ದಲಿತ ಮಹಿಳೆಯರು ಬೆಲೆಯೇರಿಕೆ, ನಿರುದ್ಯೋಗ, ಆದಾಯ ಕುಸಿತ, ಭ್ರಷ್ಟಾಚಾರ ಇತ್ಯಾದಿ ಪ್ರಶ್ನೆಗಳ ಆಧಾರದ ಮೇಲೆ ಬಿ.ಜೆ.ಪಿ.ಯನ್ನು ಸೋಲಿಸಬೇಕೆಂಬ ಬಯಕೆ ಹೊಂದಿದ್ದರು. ಆದರೆ ಮಧ್ಯಮವರ್ಗ, ಯುವಕರು, ಮೋದಿ ಮತ್ತು ಹಿಂದುತ್ವದ ಅಲೆಗೆ ಬಲಿಯಾಗಿದ್ದರು.

ಜೆ.ಡಿ.ಎಸ್. ಮತ್ತು ಉತ್ತಮ ಪ್ರಜಾಕೀಯ ಪಕ್ಷ 5 ಕ್ಷೇತ್ರಗಳಲ್ಲಿಯೂ, ಆಪ್ ಪಕ್ಷ 4 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೂ ಒಬ್ಬ ಅಭ್ಯರ್ಥಿಯನ್ನು ಹೊರತುಪಡಿಸಿ ಉಳಿದೆಲ್ಲಾ ಅಭ್ಯರ್ಥಿಗಳು 'ನೋಟಾ' ಕ್ಕಿಂತ ಕಡಿಮೆ ಮತಗಳನ್ನು ಪಡೆದಿದ್ದಾರೆ.

ಅಪಾಯದ ಮುನ್ಸೂಚನೆ

ಬಿ.ಜೆ.ಪಿ. ಯಿಂದ ಆಯ್ಕೆಯಾದ 5 ಶಾಸಕರ ಪೈಕಿ 3 ಮಂದಿ ಕಟ್ಟಾ ಆರ್.ಎಸ್.ಎಸ್. ಕಾರ್ಯಕರ್ತರು. ಹಿಂದುತ್ವ ಧೋರಣೆಯನ್ನೇ ಅವರು ಜನರ ಮುಂದಿಡುತ್ತಾರೆ. ಕಾರ್ಕಳದ ಶಾಸಕರಾದ ಸುನೀಲ್ ಕುಮಾರ್‌ರವರು ಗೆದ್ದ ನಂತರ ಅವರ ಬೆಂಬಲಿಗರ ಹೆಸರಲ್ಲಿ ಹಿಂದುತ್ವ ಮತ್ತು ಅಭಿವೃದ್ಧಿಗೆ ನಮ್ಮ ಬೆಂಬಲ ಎಂದು ಎಲ್ಲೆಡೆ ಫ್ಲೆಕ್ಸ್‌ಗಳ ಪ್ರದರ್ಶನ ಮಾಡಿದ್ದಾರೆ. ಉಡುಪಿಯಿಂದ ಆಯ್ಕೆಯಾದ ಶಾಸಕರು ಹಿಂದೆ ಹಾಜಬ್ಬ–ಹಸನಬ್ಬ ಬೆತ್ತಲೆ ಪ್ರಕರಣದ ಆರೋಪಿತ ರೂವಾರಿ. ಕಳೆದ ವರ್ಷದ ಹಿಜಾಬ್ ಪ್ರಕರಣದಲ್ಲಿ ಜಿಲ್ಲೆಯ ಬಹುತೇಕ ಕಾಲೇಜುಗಳಿಗೆ ಕೇಸರಿ ಶಾಲುಗಳನ್ನು ವಿತರಿಸಿ ಕೋಮುಗ್ರಸ್ತಗೊಳಿಸಿದ ವ್ಯಕ್ತಿ. ಅವರು ಗೋವಿನ ಮೇಲೆ ಪ್ರಮಾಣ ಮಾಡಿ ಪ್ರತಿಜ್ಞಾವಿಧಿ ಸ್ವೀಕರಿಸಿದ್ದಾರೆ. ಇದು ಸಂವಿಧಾನ ವಿರೋಧಿಯಾಗಿದೆ. ಸಂವಿಧಾನದ ಪ್ರಕಾರ ಸಂವಿಧಾನ ಅಥವಾ ಭಗವಂತನ ಮೇಲೆ ಮಾತ್ರ ಪ್ರಮಾಣ ಮಾಡಲು ಅವಕಾಶವಿದೆ.

ಅಲ್ಪಸಂಖ್ಯಾತರು ವಿಶೇಷವಾಗಿ, ಮುಸ್ಲಿಂ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ಸಿಗೆ ಮತ ನೀಡಿದ್ದಾರೆ. ಅವರು ತೀವ್ರ ದಾಳಿಗೆ ಒಳಗಾಗಿದ್ದಾರೆ. ಜಾತ್ರೆಗಳಲ್ಲಿ ವ್ಯಾಪಾರ ಮಾಡಬಾರದು ಎಂದು ಸಂಘ ಪರಿವಾರ ತಾಕೀತು ಮಾಡಿತ್ತು. ಕೆಲವು ಕಡೆ ಯಶಸ್ವಿಯೂ ಆಗಿತ್ತು. ಕಾಪು ಕ್ಷೇತ್ರದಲ್ಲಿ ಎಸ್.ಡಿ.ಪಿ.ಐ. ಸ್ಪರ್ಧಿಸಿದ್ದರೂ ಅವರಿಗೆ ಕೇವಲ 1,616 ಮತ ಮಾತ್ರ ಬಂದಿದೆ.

ಕಾಂಗ್ರೆಸ್ ಪಕ್ಷಕ್ಕೆ ಪ್ರಚಾರ ಮತ್ತಿತರ ಕೆಲಸಗಳಿಗೆ ಸೂಕ್ತ ಕಾರ್ಯಕರ್ತರು ಇರಲಿಲ್ಲ ಎಂಬಂತೆ ಕಾಣುತ್ತಿತ್ತು. ಬಿ.ಜೆ.ಪಿ.ಗೆ ದೊಡ್ಡ ಪ್ರಮಾಣದ ಕಾರ್ಯಕರ್ತರ ಪಡೆ ಇತ್ತು. ಚುನಾವಣೆ ಘೋಷಣೆಯಾಗುತ್ತಲೇ ಬೂತ್ ಪ್ರಮುಖರ ಸಭೆ ನಡೆಸಿ, ಕೆಲಸ ನಿರ್ವಹಣೆ ಬಗ್ಗೆ ತಿಳಿಸಲಾಗಿತ್ತು. ಮತದಾರರ ಪಟ್ಟಿಯ ಒಂದೊಂದು ಪುಟಕ್ಕೂ ಒಬ್ಬೊಬ್ಬರಿಗೆ ಜವಾಬ್ದಾರಿ ನೀಡಲಾಗಿತ್ತು. (ಪೇಜ್ ಪ್ರಮುಖ್) ಬಿಜೆಪಿ ಕೇವಲ ಹಿಂದುತ್ವ ಮತ್ತು ಸಂಘಟನೆ ಆಧಾರದಲ್ಲಿ ಗೆಲುವು ಸಾಧಿಸಿದೆ ಎಂದರೆ ತಪ್ಪಾಗುತ್ತದೆ. ಜೊತೆಗೆ ದೊಡ್ಡ ಮಟ್ಟದ ಹಣದ ಹಂಚಿಕೆಯೂ ಆಗಿದೆ.

ಇಡೀ ರಾಜ್ಯದಲ್ಲಿ ಬಿ.ಜೆ.ಪಿ. ನಿರ್ಣಾಯಕವಾಗಿ ಸೋತರೂ ಉಡುಪಿ ಜಿಲ್ಲೆಯಲ್ಲಿ ಅವರ ಶಕ್ತಿಯನ್ನು ನಿರ್ಣಾಯಕವಾಗಿ ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಇದು ಕಾಂಗ್ರೆಸ್ ಪಕ್ಷದ ಸೋಲು ಹಾಗೂ ಎಡ ಚಳುವಳಿಯ ದುರ್ಬಲತೆ ಎಂದೇ ಹೇಳಬೇಕು. ಮುಂದಿನ ದಿನಗಳಲ್ಲಿ ಕೋಮುವಾದಿಗಳನ್ನು ಜನಸಾಮಾನ್ಯರಿಂದ ದೂರವಾಗಿಸಲು ಪ್ರಯತ್ನ ಮುಂದುವರಿಸಬೇಕಾಗಿದೆ.

ಕೇರಳದ ವಿರುದ್ಧ ಕೇಂದ್ರ ಸರ್ಕಾರದ ಆರ್ಥಿಕ ದಿಗ್ಬಂಧನ...... ಪುಟ 6 ರಿಂದ

ಎತ್ತುವ ಒಂದು ಪೈಸೆ ಸಾಲವೂ ಖಜಾನೆಯ ಲೆಕ್ಕದಲ್ಲಿ ಸೇರದಿರುವಾಗ ಕೇಂದ್ರ ಸರ್ಕಾರ ಇದನ್ನು ಬಜೆಟ್ಟಿನ ಹೊರಗಿನ ಸಾಲ ಎತ್ತುವಳಿ ಎಂದು ಪರಿಗಣಿಸುವುದಿಲ್ಲ. ಕೇಂದ್ರದ ಪ್ರತಿವಾದ ಏನೆಂದರೆ KIIFB ಎಲ್ಲ ಸಾಲಗಳನ್ನು ಸರ್ಕಾರಿ ಅನುದಾನಗಳಿಂದ ಮರುಪಾವತಿಸಲಾಗುತ್ತದೆ ಎಂಬುದು. ಇದು ಹಸೀ ಸುಳ್ಳು. KIIFB ಯ ಶೇ 30 ರಷ್ಟು ಯೋಜನೆಗಳು ಸ್ವಯಂ–ಹಣಕಾಸು ಒದಗಿಸಿಕೊಳ್ಳುವ ಕಂದಾಯ–ಮಾದರಿ ಯೋಜನೆಗಳು.

ಈ KIIFB ಯ ಯೋಜನೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಸಾಮಾನ್ಯವಾಗಿ ಆಯ್ದುಕೊಳ್ಳುವಂಥ ವಾರ್ಷಿಕ ಪಾವತಿ(ಅನ್ಯುಟಿ) ಮಾದರಿಯ ಯೋಜನೆಗಳು. ಈ ಯೋಜನೆಗಳಡಿ ಸಾಮಾನ್ಯವಾಗಿ ಗುತ್ತಿಗೆದಾರರು ಮೂಲ ಸೌಕರ್ಯ ಯೋಜನೆ ಅನುಷ್ಠಾನಗೊಳಿಸಲು ಸಾಲ ಪಡೆಯುತ್ತಾರೆ. ರಾಜ್ಯ ಸರ್ಕಾರ ವಾರ್ಷಿಕ ಪಾವತಿ ರೂಪದಲ್ಲಿ 15–20 ವರ್ಷಗಳಲ್ಲಿ ಅವರ ಹಣವನ್ನು ಸಂದಾಯ ಮಾಡುತ್ತದೆ. ಈ ಅವಧಿಯ ಬಡ್ಡಿಯನ್ನೂ ಗುತ್ತಿಗೆದಾರರ ಬಿಡ್ ಬೆಲೆಯಲ್ಲಿ ಸೇರಿಸಲಾಗಿರುತ್ತದೆ. ಈ ರೀತಿ ಸಾಲ ಎತ್ತುವಳಿ ಬಜೆಟ್ಟಿನ ಹೊರಗಿನ ಸಾಲ ಎತ್ತುವಳಿ ಎಂದು ಯಾರೂ ಹೇಳಿಲ್ಲ.

2019 ರ ಕೊನೆಯ ವೇಳೆಗೆ ಕೇಂದ್ರ ಸರ್ಕಾರ 93 ಇಂತಹ ವಾರ್ಷಿಕ ಪಾವತಿಯ ಯೋಜನೆಗಳನ್ನು ಹೊಂದಿತ್ತು. ಈ ಯೋಜನೆಗಳ ವೆಚ್ಚ 1 ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು! ಇಲ್ಲಿಯವರೆಗೆ ಸಿ.ಎ.ಜಿ. ಯ ಯಾವುದೇ ವರದಿ ಈ ಯೋಜನೆಗಳ ವಿಷಯದಲ್ಲಿ ತಕಾರಾರು ಎತ್ತಿಲ್ಲ ಅಥವಾ ಆತಂಕ ವ್ಯಕ್ತಪಡಿಸಿಲ್ಲ.

KIIFB ಮೇಲೆ ಕಣ್ಣು

KIIFB ಸಹ ಇಂತಹುದೇ ವಾರ್ಷಿಕ ಪಾವತಿಯ ಯೋಜನೆ. ಕೇರಳ ರಾಜ್ಯ ಸರ್ಕಾರ 70000 ಕೋಟಿ ರೂಪಾಯಿಗಳ ಯೋಜನೆಗಳನ್ನು KIIFB ಗೆ ಅನುಷ್ಠಾನ ಮಾಡಲು ನೀಡಿದೆ. ಇಲ್ಲಿ ವಾರ್ಷಿಕ ಪಾವತಿ ಮೋಟಾರು ವಾಹನಗಳ ತೆರಿಗೆಯ ಅರ್ಧದಷ್ಟು. ಆದ್ದರಿಂದ KIIFB ಯನ್ನು ಹೆಚ್ಚುತ್ತಿರುವ ವಾರ್ಷಿಕ ಪಾವತಿ ಯೋಜನೆ ಎಂದು ಪರಿಗಣಿಸಬಹುದು. ಈ ವ್ಯವಸ್ಥೆ ಬಜೆಟ್ ಹೊರಗಿನ ಸಾಲ ಎತ್ತುವಳಿಯಾಗಲಿ ಅಥವಾ FRBM ಕಾನೂನಿನ ಉಲ್ಲಂಘನೆಯಾಗಲಿ ಆಗುವುದಿಲ್ಲ ಎಂಬುದನ್ನೂ ಗಮನಿಸಬೇಕು.

ಯಾವುದೇ ವಾರ್ಷಿಕ ಪಾವತಿ ಯೋಜನೆಯಲ್ಲಿ ಭವಿಷ್ಯದ ಮರುಪಾವತಿಯ ಬಾಧ್ಯತೆ ಸರಕಾರದ ಮೇಲೆ ಇದ್ದೇ ಇರುತ್ತದೆ ಎಂಬುದನ್ನು ಇಲ್ಲಿ ಹೇಳಲೇಬೇಕು. ಆದರೆ ಇಂತಹ ಹೊಣೆಗಾರಿಕೆಯನ್ನು ವಿತ್ತೀಯ ಲೆಕ್ಕಾಚಾರದಲ್ಲಿ ಸೇರಿಸಲಾಗುವುದಿಲ್ಲ ಅಥವಾ ಇದನ್ನು ಪ್ರಸಕ್ತ ಸಾರ್ವಜನಿಕ ಸಾಲ ಎತ್ತುವಳಿಯ ಭಾಗ ಎಂದೂ ಪರಿಗಣಿಸುವುದಿಲ್ಲ.

ನಿಜ, ಈ ಸ್ವಯಂ–ಹಣಕಾಸಿನ ಯೋಜನೆಗಳ ಅಸಲು ಮತ್ತು ಬಡ್ಡಿ ಮರು ಪಾವತಿಸಲು ವಾರ್ಷಿಕ ಪಾವತಿಗಳು ಸಾಕಾಗುತ್ತವೆ ಎಂಬುದನ್ನು ಖಚಿತಪಡಿಸುವುದು ಹೇಗೆ ಎಂಬ ಪ್ರಶ್ನೆ ಎದ್ದೇ ಏಳುತ್ತದೆ.

KIIFB ಯ ದತ್ತಾಂಶಗಳು ಸಮಗ್ರವಾಗಿದ್ದು ಅವು ಯೋಜನೆಯ ಎಲ್ಲಾ ವಿವರಗಳನ್ನು, ಅಂದರೆ, ಬಜೆಟ್ಟಿನಲ್ಲಿ ಹಂಚಿಕೆ, ಮಾರುಕಟ್ಟೆಯಿಂದ ಎತ್ತಿದ ಹಣಕಾಸು, ಯೋಜನೆಯಿಂದ ಉತ್ಪನ್ನಗೊಳ್ಳುವ ಆದಾಯ, ಯೋಜನೆಯಿಂದ ಹೊರ ಹರಿವ ಹಣ ಮತ್ತು ಋಣ ಸಂದಾಯಕ್ಕೆ ಹೋಗುವ ಹಣ ಹೀಗೆ ಎಲ್ಲವನ್ನೂ ಈ ದತ್ತಾಂಶಗಳು ಸೆರೆ ಹಿಡಿಯುತ್ತವೆ. KIIFB ತನ್ನದೇ ಆದ 'ಆಸ್ತಿ ಬಾಧ್ಯತೆ ನಿರ್ವಹಣೆ'(ಎಎಲ್‌ಎಂ) ಮಾದರಿಯನ್ನು ರೂಪಿಸಿಕೊಂಡಿದೆ. ಇದರಲ್ಲಿ ಮುನ್ಸೂಚಕ ವಿಶ್ಲೇಷಣಾ ಕ್ರಮಗಳು, ಕೃತ್ರಿಮ ಬುದ್ಧಿಮತ್ತೆ, ಯಂತ್ರ ಕಲಿಕೆ ಇತ್ಯಾದಿಗಳನ್ನು ಬಳಸಿಕೊಳ್ಳಲಾಗಿದೆ. ಇಂತಹ ಮಾದರಿಯಿಂದಾಗಿ KIIFB ಯಾವುದೇ ಸಮಯದಲ್ಲಿ ಆಸ್ತಿ ಮತ್ತು ಬಾಧ್ಯತೆಗಳ ಸಮತೋಲ ಏನಿರುತ್ತದೆ ಎಂಬುದನ್ನು ಖಚಿತವಾಗಿ ಹೇಳಬಲ್ಲುದು. ಯಾವುದೇ ಸಂದರ್ಭದಲ್ಲೂ ಬಾಧ್ಯತೆಗಳು ಆಸ್ತಿಗಳಿಗಿಂತ ಹೆಚ್ಚಿಗೆ ಇರದಂತೆ ಇದು ನೋಡಿಕೊಳ್ಳುತ್ತದೆ. ಈ ಯೋಜನೆಗಳನ್ನು ತಾನೇ ಹಾಕಿಕೊಂಡ ಮಿತಿಗಳ ಒಳಗೇ ಅನುಷ್ಠಾನಗೊಳಿಸಲಾಗುತ್ತದೆ. ಸರ್ಕಾರ ವಾರ್ಷಿಕ ಪಾವತಿಯ ತನ್ನ ಕಾನೂನಾತ್ಮಕ ಬಾಧ್ಯತೆಯನ್ನು ಪಾಲಿಸುವ ವರೆಗೆ KIIFB ಬಾಧ್ಯತೆಗಳು ಸರ್ಕಾರದ ತೆಕ್ಕೆಗೆ ಬಂದು ಬೀಳುವ ಸಾಧ್ಯತೆ ಇಲ್ಲದಂತೆ ನೋಡಿಕೊಳ್ಳಲಾಗುತ್ತದೆ.

ಕೇಂದ್ರ ಸರ್ಕಾರದ ಸಾರ್ವಜನಿಕ ಎತ್ತುವಳಿ ಅಥವಾ ವಿತ್ತೀಯ ಕೊರತೆಯನ್ನು ಲೆಕ್ಕ ಹಾಕುವಾಗ ಬಜೆಟ್ಟಿನ ಒಳಗೆ ಮತ್ತು ಬಜೆಟ್ಟಿನ ಹೊರಗೆ ಮಾಡಿದ ಸಾಲಗಳನ್ನು ಪರಿಗಣಿಸಲಾಗುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಗೆಗಿನ ಈ ಮೂಲಭೂತ ಅಸಮತೆ ವ್ಯಾಪಕವಾಗಿದೆ. ಕಾನೂನಿನ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ತಂತಮ್ಮ ಜಿ.ಡಿ.ಪಿ.ಯ ಶೇ 3 ಕ್ಕಿಂತ ಹೆಚ್ಚಿಗೆ ಸಾಲ ಎತ್ತುವಳಿ ಮಾಡುವಂತಿಲ್ಲ. ವಿತ್ತೀಯ ಕೊರತೆಯನ್ನೂ ಶೇ 3 ಕ್ಕೆ ಸೀಮಿತಗೊಳಿಸಬೇಕು. ಇದರ ಜೊತೆಗೆ ಸಾಲ ಎತ್ತಿದ ಹಣವನ್ನು ಕಂದಾಯ ವ್ಯಯಕ್ಕೆ ಬಳಸುವಂತಿಲ್ಲ. ಕಂದಾಯ ಕೊರತೆ(ರೆವಿನ್ಯೂ ಡೆಫಿಸಿಟ್)ಯನ್ನು ಶೂನ್ಯದ ಮಟ್ಟದಲ್ಲಿರಿಸಬೇಕು.

ಆದರೆ, ಕೇಂದ್ರ ಸರ್ಕಾರ ಇಲ್ಲಿಯವರೆಗೆ ಈ ನಿಯಯಾವಳಿಗಳನ್ನು ಪಾಲಿಸಿಲ್ಲ. ವಿತ್ತೀಯ ಕೊರತೆಯನ್ನು ಸತತವಾಗಿ ಶೇ 4 ರಿಂದ 6 ರ ಮಟ್ಟದಲ್ಲೇ ಇರಿಸಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ರಾಜ್ಯ ಸರ್ಕಾರಗಳು ಬಹುತೇಕ ಈ ನಿಯಮಗಳನ್ನು ಪಾಲಿಸಿವೆ. ಹೀಗೆ ಸ್ವತಃ ನಿಯಮಾವಳಿಯನ್ನು ಪಾಲಿಸದ ಈ ಕೇಂದ್ರ ಸರ್ಕಾರವೇ ಮನಬಂದಂತೆ ನಿಯಮಗಳನ್ನು ಬದಲಿಸುತ್ತ, ಅವನ್ನು ಹಿಂದಿನಿಂದಲೇ ಜಾರಿಯಾಗುವಂತೆ ಅನ್ವಯಿಸುತ್ತ ರಾಜ್ಯ ಸರಕಾರಗಳ ವಿರುದ್ಧ ಬಾರುಕೋಲು ಎತ್ತುತ್ತದೆ!!

ರಫ್ತು–ಪ್ರಧಾನ ಅಭಿವೃದ್ಧಿ ಎಂಬ ಮಾರಕ ಮಾದರಿ

ವಿದೇಶಿ ವಿನಿಮಯದ ಆರಂಭಿಕ ಕೊರತೆಯನ್ನೇ ಒಂದು ಬೃಹತ್ ಕೊರತೆ ಎಂಬಂತೆ ಉತ್ಪ್ರೇಕ್ಷಿಸುವ ಹೂಡಿಕೆದಾರರ ಕ್ಷಣ ಕಾಲದ ನಡವಳಿಕೆಯು ಒಂದು ದೇಶವನ್ನು ಐಎಂಎಫ್‌ನ ಸಾಲಕೂಪಕ್ಕೆ ತಳ್ಳುತ್ತದೆ. ಬಾಂಗ್ಲಾದೇಶದಂತೆ ಕೆಲವೇ ಸಮಯದ ಹಿಂದಿನ ವರೆಗೂ 'ಆರ್ಥಿಕ ಪವಾಡ' ಎಂದು ಹೊಗಳಿಸಿಕೊಂಡ ದೇಶಗಳೂ ಇದ್ದಕ್ಕಿದ್ದಂತೆ ತಿರುಕರಾಗಿ ಬಿಟ್ಟು ಐಎಂಎಫ್– ವಿಶ್ವ ಬ್ಯಾಂಕ್‌ಗಳ ಕಠಿಣ ಶರತ್ತುಗಳ ಸಾಲಗಳಿಗೆ ಕೈಯೊಡ್ಡಬೇಕಾಗುತ್ತದೆ. ಇದೀಗ ರಫ್ತು–ಪ್ರಧಾನ 'ಅಭಿವೃದ್ಧಿ'ಯ ಪರಿಣಾಮ. ಎರಡನೇ ವಿಶ್ವಯುದ್ಧದ ನಂತರ ಬಹಳಷ್ಟು ಹೆಸರುಗೆಡಿಸಿಕೊಂಡು ಮೂಲೆ ಸೇರಿದ್ದ ಇಂತಹ ಅಭಿವೃದ್ಧಿ ಮಾದರಿಗೆ ನವ–ಉದಾರವಾದ ಪುನರ್ಜನ್ಮ ನೀಡಿತು. ಆದರೆ ವಿಶ್ವ ಬಂಡವಾಳಶಾಹಿಯು ಒಂದು ಹೊಸ ಬಿಕ್ಕಟ್ಟನ್ನು ಎದುರಿಸುತ್ತಿರುವ ಸನ್ನಿವೇಶದಲ್ಲಿ, ಈ ರಫ್ತು–ಪ್ರಧಾನ ಬೆಳವಣಿಗೆಯ ಪರಿಕಲ್ಪನೆಯಿಂದ ದೂರ ಸರಿಯುವ ಅವಕಾಶವು ಮತ್ತೊಮ್ಮೆ ದಿಗಂತದಲ್ಲಿ ಗೋಚರಿಸುತ್ತಿದೆ. ಈ ನಡುವೆ ಇದರ ಅಪಾಯಕ್ಕೆ ಶ್ರೀಲಂಕಾ ಮತ್ತು ಬಾಂಗ್ಲಾದೇಶದಂತಹ ನಮ್ಮ ನೆರೆಹೊರೆಯ ದೇಶಗಳೂ ಈಡಾಗಿರುವುದನ್ನು ನಾವು ಕಾಣುತ್ತಿದ್ದೇವೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಶ್ರೀಲಂಕಾ ಮತ್ತು ಪಾಕಿಸ್ತಾನದ ನಂತರ, ನಮ್ಮ ನೆರೆಹೊರೆಯಲ್ಲಿ ಆರ್ಥಿಕ ಬಿಕ್ಕಟ್ಟಿನಿಂದ ನರಳುತ್ತಿರುವ ಮೂರನೇ ದೇಶವೆಂದರೆ, ಬಾಂಗ್ಲಾದೇಶ. ಅದು, ಐಎಂಎಫ್‌ನಿಂದ $4.5 ಬಿಲಿಯನ್, ವಿಶ್ವಬ್ಯಾಂಕ್‌ನಿಂದ $1 ಬಿಲಿಯನ್ ಮತ್ತು ಬಹುಪಕ್ಷೀಯ ಏಜೆನ್ಸಿಗಳು ಮತ್ತು ದಾನಿ ದೇಶಗಳಿಂದ $2.5–3 ಬಿಲಿಯನ್ ಸಾಲವನ್ನು ಕೋರಿದೆ. ಬಾಂಗ್ಲಾದೇಶದ ಸರ್ಕಾರವು ಏನೂ ಆಗಿಲ್ಲವೆಂಬಂತೆ ತೋರಿಸಿಕೊಳ್ಳುತ್ತಿದ್ದರೂ, ಹೆಚ್ಚುತ್ತಿರುವ ವ್ಯಾಪಾರ ಕೊರತೆ, ಕುಗ್ಗುತ್ತಿರುವ ವಿದೇಶಿ ವಿನಿಮಯ ಮೀಸಲು, ವೇಗವಾಗಿ ಅಪಮೌಲ್ಯಗೊಳ್ಳುತ್ತಿರುವ ಕರೆನ್ಸಿ, ದಾಖಲೆಯ ಹಣದುಬ್ಬರ ಮತ್ತು ಇಂಧನ ಬಿಕ್ಕಟ್ಟಿನಿಂದಾಗಿ ಭಾರಿ ವಿದ್ಯುತ್ ಕಡಿತದ ಸಮಸ್ಯೆಗಳನ್ನು ಅದು ಎದುರಿಸುತ್ತಿದೆ.

ವಿಪರ್ಯಾಸವೆಂದರೆ, ಕೆಲವೇ ಕೆಲವು ತಿಂಗಳುಗಳ ಹಿಂದಿನವರೆಗೂ ಇದೇ ಬಾಂಗ್ಲಾದೇಶವನ್ನು "ಅಭಿವೃದ್ಧಿ"ಯ ಯಶೋಗಾಥೆ ಎಂದು ಹಾಡಿ ಹೊಗಳಲಾಗುತ್ತಿತ್ತು. ಅದು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ ಎಂದು ಅನೇಕ ಅಭಿವೃದ್ಧಿ ಸೂಚಕಗಳು ಹೇಳಿವೆ. ಅದು ನಿಜವೂ ಹೌದು. ಪಾಕೀಸ್ತಾನದಿಂದ 1971ರಲ್ಲಿ ಬೇರ್ಪಟ್ಟು ಉದಯವಾದ ಬಾಂಗ್ಲಾದೇಶದ ಮಹಿಳಾ ಸಾಕ್ಷರತೆಯು ಈಗ ಶೇ. 73ರಷ್ಟಿದೆ. ಶಿಶು ಮರಣ ಪ್ರಮಾಣವು ಪಾಕಿಸ್ತಾನದ ಅರ್ಧದಷ್ಟಿದೆ. ಅದರ "ಮಾನವ ಅಭಿವೃದ್ಧಿ ಸೂಚ್ಯಂಕ"ವು ಭಾರತ, ಪಾಕಿಸ್ತಾನ ಮತ್ತು ಈ ಪ್ರದೇಶದ ಹಲವು ದೇಶಗಳಿಗಿಂತಲೂ ಉತ್ತಮವಾಗಿದೆ. ಬಾಂಗ್ಲಾದೇಶದ ಈ ಸಾಧನೆಯನ್ನು "ಆರ್ಥಿಕ ಪವಾಡ" ಎಂದು ಅನೇಕರು ಕರೆಯಲು ಕಾರಣವೂ ಇತ್ತು: ಉದಯಿಸಿದ ಸಮಯದಲ್ಲಿ ಒಂದು "ತುತ್ತಿನ ಚೀಲದ ಪ್ರಕರಣ" ಎಂದು ಪರಿಗಣಿಸಲ್ಪಟ್ಟಿದ್ದ ಆ ದೇಶವು ತನ್ನ ನೆರೆಯ ಎಲ್ಲ ದೇಶಗಳನ್ನು ಮೀರಿಸುವ ಮಟ್ಟಿಗೆ ಎದ್ದು ನಿಂತಿತ್ತು. ಆದ್ದರಿಂದ, ಹಠಾತ್ತಾಗಿ ಆ ದೇಶವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ ಪ್ರಸಂಗವು ಅನೇಕರಿಗೆ ಆಶ್ಚರ್ಯಕರವಾಗಿದೆ.

ಸಮಸ್ಯೆಯ ಮೂಲ

ಬಾಂಗ್ಲಾದೇಶದ ಬಿಕ್ಕಟ್ಟಿಗೆ, ಶ್ರೀಲಂಕಾದಂತೆಯೇ, "ಭ್ರಷ್ಟಾಚಾರ"ವೇ ಕಾರಣವೆಂದು ಹೇಳಲಾಗುತ್ತಿದೆ. ಭ್ರಷ್ಟಾಚಾರವು ಖಂಡನೀಯವೇ ಸರಿ. ಆದರೆ, ಬಾಂಗ್ಲಾದೇಶದ ಬಿಕ್ಕಟ್ಟಿಗೆ ಭ್ರಷ್ಟಾಚಾರವು ಒಂದು ತೀರಾ ಸರಳವಾದ ವಿವರಣೆಯಾಗುತ್ತದೆ. ಬಾಂಗ್ಲಾದೇಶದ ಬಿಕ್ಕಟ್ಟಿಗೆ ಉಕ್ರೇನ್ ಯುದ್ಧದ ಸನ್ನಿವೇಶವೇ ಸಂಭವನೀಯವಾಗಿ ತೋರುತ್ತದೆ. ಹಲವು ಸರಕುಗಳ ಅಂತಾರಾಷ್ಟ್ರೀಯ ಬೆಲೆಗಳ ಏರಿಕೆಯಿಂದಾಗಿಯೇ ಬಾಂಗ್ಲಾದೇಶವು ತನ್ನ ಆಮದುಗಳಿಗೆ ಪಾವತಿಸುವಷ್ಟು ವಿದೇಶಿ ವಿನಿಮಯವನ್ನು ಹೊಂದಿಲ್ಲದ ಪರಿಸ್ಥಿತಿಯನ್ನು ತಲುಪಿತು ಎಂಬುದು ಹೆಚ್ಚು ಸಮರ್ಥನೀಯವಾಗಿ ತೋರುತ್ತದೆ. ಒಂದು ಆಮದು ಅವಲಂಬಿತ ದೇಶದಲ್ಲಿ ವಿದೇಶಿ ವಿನಿಮಯದ ಕೊರತೆ ಉಂಟಾದರೆ, ದೇಶದಲ್ಲಿ ಸರಕು ಸಾಮಗ್ರಿಗಳ ಅಭಾವ ಸೃಷ್ಟಿಯಾಗುತ್ತದೆ. ಅದು ಹಣದುಬ್ಬರವನ್ನು ಹೆಚ್ಚಿಸುತ್ತದೆ. ವಿದೇಶಿ ವಿನಿಮಯದ (ಮುಖ್ಯವಾಗಿ ಡಾಲರ್‌ಗಳ) ಕೊರತೆಯು, ದೇಶದ ಕರೆನ್ಸಿಯ ವಿನಿಮಯ ದರ ಕುಸಿತದ ಕಾರಣವನ್ನು ವಿವರಿಸುತ್ತದೆ. ಈ ದರ ಕುಸಿತವನ್ನು ಸ್ಥಿರಗೊಳಿಸುವಲ್ಲಿ ಬಾಂಗ್ಲಾದೇಶವು ತನ್ನ ಸಂಗ್ರಹದಲ್ಲಿದ್ದ ಎಲ್ಲ ವಿದೇಶಿ ವಿನಿಮಯ ಮೀಸಲುಗಳನ್ನು ಬಳಸಿದರೂ ವಿಫಲವಾಯಿತು.



ಬಾಂಗ್ಲಾದೇಶದ ಒಟ್ಟು ರಫ್ತುಗಳಲ್ಲಿ ಶೇ. 83ರಷ್ಟು ಪಾಲು ಹೊಂದಿರುವ ಗಾರ್ಮೆಂಟ್ ಉದ್ಯಮ

ಬಾಂಗ್ಲಾದೇಶದ ಬಿಕ್ಕಟ್ಟಿನ ಈ ವಿವರಣೆಯಲ್ಲಿರುವ ಸಮಸ್ಯೆ ಎಂದರೆ, ಅದರಲ್ಲಿ ಆಮದುಗಳ ಪರಿಸ್ಥಿತಿಯ ಬಗ್ಗೆ ಮಾತ್ರ ಗಮನಹರಿಸಲಾಗಿದೆ ಮತ್ತು ಬಾಂಗ್ಲಾದೇಶದ ಒಟ್ಟು ರಫ್ತುಗಳಲ್ಲಿ ಶೇ. 83ರಷ್ಟು ಪಾಲು ಹೊಂದಿರುವ ಸಿದ್ಧ ಉಡುಪುಗಳ ರಫ್ತು ಆದಾಯ ಇಳಿಕೆಯಾದ ಬಗ್ಗೆ ಈ ವಿವರಣೆಯಲ್ಲಿ ಯಾವ ಉಲ್ಲೇಖವೂ ಇಲ್ಲ.


ಬಾಂಗ್ಲಾದೇಶದ ಬಿಕ್ಕಟ್ಟಿಗೆ ಅದರ ಹಣಕಾಸು ನೀತಿಯೇ ಕಾರಣವೆಂದು ಆ ದೇಶದ ಕೆಲವು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ: ಬಾಂಗ್ಲಾದೇಶವು ತನ್ನ ಬಡ್ಡಿ ದರವನ್ನು ಅನೇಕ ವರ್ಷಗಳ ಕಾಲ ಬದಲಾಯಿಸದೆ ಉಳಿಸಿಕೊಂಡಿತು. ಬಡ್ಡಿ ದರವನ್ನು ಒಂದು ವೇಳೆ ಏರಿಕೆ ಮಾಡಿದ್ದರೆ, ತನ್ನ ವ್ಯಾಪಾರ ಕೊರತೆಯನ್ನು ನೀಗಿಸಿಕೊಳ್ಳಲು ಸಾಕಾಗುವಷ್ಟು ವಿದೇಶಿ ವಿನಿಮಯವನ್ನು, ವಿದೇಶಿ ಬಂಡವಾಳವನ್ನು ಆಕರ್ಷಿಸುವ ಮೂಲಕ ಒದಗಿಸಿಕೊಳ್ಳುವುದು ಸಾಧ್ಯವಿತ್ತು. ಅದು ಸಂಭವಿಸಿದ್ದರೆ, ವಿನಿಮಯ ದರ ಕುಸಿತ (ಬಾಂಗ್ಲಾದೇಶದ ಕರೆನ್ಸಿಯ ಅಪಮೌಲ್ಯ) ಉಂಟಾಗುತ್ತಿರಲಿಲ್ಲ ಮತ್ತು ಅಂತಹ ಕುಸಿತದ ನಿರೀಕ್ಷೆಯಲ್ಲಿ ಹಣಕಾಸಿನ ಹರಿವು ಸಂಪೂರ್ಣವಾಗಿ ಬತ್ತಿಹೋಗುತ್ತಿರಲಿಲ್ಲ. ಇದೆಲ್ಲವೂ ಬಿಕ್ಕಟ್ಟಿನ ಬಗ್ಗೆ ಮೇಲುಮೇಲಿನ ವಿವರಣೆಯೇ. ನಿಜಕ್ಕೂ ಹೇಳುವುದಾದರೆ, ಸಮಸ್ಯೆಯ ಮೂಲವು ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯತಂತ್ರದಲ್ಲಿದೆ. ಈ ನವ–ಉದಾರವಾದಿ ಯುಗದಲ್ಲಿ, ಬಾಂಗ್ಲಾದೇಶವೂ ಸಹ ಇತರ ದೇಶಗಳಂತೆಯೇ ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯತಂತ್ರವನ್ನು ಅನುಸರಿಸುತ್ತಿದೆ. ಈ ಕಾರ್ಯತಂತ್ರದ ದುಷ್ಪರಿಣಾಮಗಳು ಈಗ ಕಾಣಿಸಿಕೊಳ್ಳುತ್ತಿವೆ.

ವಿಶ್ವಬ್ಯಾಂಕ್ "ಅಂತರ್ಮುಖಿ" ಎಂದು ಕರೆಯುತ್ತಿದ್ದ ಅಭಿವೃದ್ಧಿ ಕಾರ್ಯತಂತ್ರವನ್ನು ಅನುಸರಿಸುತ್ತಿದ್ದ ಭಾರತದಂತಹ ದೇಶಗಳ ನಿಧಾನಗತಿಯ ಬೆಳವಣಿಗೆಯ ಅನುಭವಕ್ಕೆ ವ್ಯತಿರಿಕ್ತವಾಗಿ, ಪೂರ್ವ ಏಷ್ಯಾದ "ಪವಾಡ" ಎಂದು ಹೇಳಲಾದ ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯತಂತ್ರವನ್ನು ಅನುಸರಿಸುವ ಜಾಣತನದ ಬಗೆಗಿನ ಚರ್ಚೆಯು ಅಭಿವೃದ್ಧಿ ಅರ್ಥಶಾಸ್ತ್ರಜ್ಞರ ನಡುವೆ ಸುಮಾರು ಅರ್ಧ ಶತಮಾನದ ಕಾಲಾವಧಿಯಲ್ಲಿ ನಡೆದಿದೆ. ಆದರೆ, ಈ ಇಡೀ ಚರ್ಚೆಯು, ನಿಜ ಜೀವನದಲ್ಲಿ ಪಾತ್ರ ವಹಿಸುವ ಒಂದು ಪ್ರಮುಖ ಅಂಶವನ್ನೇ ಗಮನಿಸದೆ ಹೋಯಿತು.

ನವ–ಉದಾರವಾದಿ ವ್ಯವಸ್ಥೆಯಲ್ಲಿ ಈ ಕಾರ್ಯತಂತ್ರ

ಅರ್ಥವ್ಯವಸ್ಥೆಯ ಒಟ್ಟು ಬೇಡಿಕೆಯೊಂದಿಗೆ ಸಂಬಂಧ ಹೊಂದಿರುವ ಅನೇಕ ವೆಚ್ಚಗಳಲ್ಲಿ, ಕೆಲವು ವೆಚ್ಚಗಳು ಸ್ವನಿರ್ಧಾರಿತವಾಗಿರುತ್ತವೆ, ಇನ್ನೂ ಕೆಲವು ವೆಚ್ಚಗಳು ಒಟ್ಟು ಬೇಡಿಕೆಯ ಬೆಳವಣಿಗೆಯಿಂದಲೇ ಉತ್ತೇಜಿಸಲ್ಪಡುತ್ತವೆ. ರಫ್ತುಗಳು ಮತ್ತು ಸರ್ಕಾರದ ಖರ್ಚು–ವೆಚ್ಚಗಳನ್ನು ಎರಡು ಪ್ರಮುಖ ಸ್ವಾಯತ್ತ ವಿಷಯಗಳೆಂದು ಪರಿಗಣಿಸಲಾಗುತ್ತದೆ: ವರಮಾನ ಹಂಚಿಕೆಯ ವಿಧಾನವು ಯಾವುದೇ ಇರಲಿ, ಬಳಕೆಯು, ಆ ಮಟ್ಟದ ವರಮಾನವನ್ನೇ ಅವಲಂಬಿಸಿರುತ್ತದೆ ಎಂದು ಹೇಳಲಾಗುತ್ತದೆ. ವರಮಾನದೊಂದಿಗೆ ಸಂಬಂದ ಹೊಂದಿಲ್ಲದ ಬಳಕೆಯೂ ಒಂದು ಸ್ವಾಯತ್ತ ಅಂಶವನ್ನು ಹೊಂದಿರುತ್ತದೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಅದು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ, ಇಲ್ಲಿಯವರೆಗೂ ಲಭ್ಯವಿಲ್ಲದ ಸರಕುಗಳು ಗ್ರಾಹಕರಿಗೆ ಇದ್ದಕ್ಕಿದ್ದಂತೆ ಲಭ್ಯವಾದಾಗ.

ಆದ್ದರಿಂದ, ಒಂದು ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಬೆಳವಣಿಗೆ ಮತ್ತು ಅದರಿಂದಾಗಿ ಉತ್ಪಾದನೆಯ ಬೆಳವಣಿಗೆಯು, ಬೇಡಿಕೆಯೊಂದಿಗೆ ಸಂಬಂಧ ಹೊಂದಿದ ಒಂದು ಸ್ವನಿಯಂತ್ರಿತ ಅಂಶದ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ. ಆದರೆ, ಗಡಿಯಾಚೆಯ ಬಂಡವಾಳದ ಹರಿವಿಗೆ ಮುಕ್ತವಾಗಿರುವ ಒಂದು ನವ–ಉದಾರವಾದಿ ಅರ್ಥವ್ಯವಸ್ಥೆಯಲ್ಲಿ, ವಿತ್ತೀಯ ಕೊರತೆಯ ಮೇಲೆ



ಜಿಡಿಪಿಯ ಅನುಪಾತದಲ್ಲಿ ಒಂದು ಮಿತಿಯನ್ನು ವಿಧಿಸಲಾಗುತ್ತದೆ. ಜೊತೆಗೆ ಶ್ರೀಮಂತರ ಮೇಲೆ ತೆರಿಗೆ ವಿಧಿಸದಂತೆ ಒತ್ತಡ ಹೇರಲಾಗುತ್ತದೆ ಮತ್ತು ಈ ಅಂಶಗಳು ಬೇಡಿಕೆಯನ್ನು ಉತ್ತೇಜಿಸುವ ಸರ್ಕಾರದ ಸಾಮರ್ಥ್ಯದ ಮೇಲೆ ಕಾರ್ಯತಃ ನಿರ್ಬಂಧಗಳಾಗುತ್ತವೆ. ಹಾಗಾಗಿ, ಬೆಳವಣಿಗೆಗೆ ರಫ್ತುಗಳೇ ಮುಖ್ಯ ಪ್ರೇರಣೆಯಾಗುತ್ತವೆ. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಒಂದು ನವ–ಉದಾರವಾದಿ ಅರ್ಥವ್ಯವಸ್ಥೆಯು ಬೆಳವಣಿಗೆ ಹೊಂದಲು ಸಂಪೂರ್ಣವಾಗಿ ರಫ್ತುಗಳನ್ನೇ ಅವಲಂಬಿಸುತ್ತದೆ.

ರಫ್ತು ಆಧಾರಿತ ಬೆಳವಣಿಗೆಯ ಈ ಕಾರ್ಯತಂತ್ರವು ನವ–ಉದಾರವಾದಿ ವ್ಯವಸ್ಥೆಗೆ ಮಾತ್ರ ಸೀಮಿತವಾಗಿದೆ ಎಂದೇನಲ್ಲ. ಸರ್ಕಾರವು ತನ್ನ ಸ್ವಂತ ಖರ್ಚುವೆಚ್ಚಗಳನ್ನು ಹೆಚ್ಚಿಸುವ ಮೂಲಕ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸುವ ಮೂಲಕ ಆರ್ಥಿಕ ಬೇಳವಣಿಗೆಯನ್ನು ಸಾಧಿಸಬಹುದು ಅಥವಾ ಅದರ ಬದಲಾಗಿ ಉದ್ದೇಶಪೂರ್ವಕವಾಗಿ ರಫ್ತುಗಳನ್ನೇ ಪ್ರೋತ್ಸಾಹಿಸುವ ಮೂಲಕವೂ ಆರ್ಥಿಕ ಬೆಳವಣಿಗೆಯನ್ನು ಸಾಧಿಸಬಹುದು. ರಫ್ತು–ಪ್ರಧಾನ ಬೆಳವಣಿಗೆಯ ಸಂದರ್ಭದಲ್ಲೂ ಸಹ, ಸರ್ಕಾರವು ಒಂದು ಪ್ರಮುಖ ಪಾತ್ರವನ್ನು ವಹಿಸಲೇಬೇಕಾಗುತ್ತದೆ. ಪೂರ್ವ ಏಷ್ಯಾದ ದೇಶಗಳಲ್ಲಿ ವಾಸ್ತವವಾಗಿ ಆದದ್ದು ಇದೇ ರೀತಿಯ ಬೆಳವಣಿಗೆ ಎಂದು ಅನೇಕರು ಹೇಳುತ್ತಾರೆ.

ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯತಂತ್ರವನ್ನು ಅನುಸರಿಸುವ ದೇಶಗಳಲ್ಲೂ ಎರಡು ರೀತಿಗಳಿವೆ. ಈ ಎರಡರ ನಡುವೆ ಇರುವ ವ್ಯತ್ಯಾಸವನ್ನು ನಾವು ತಿಳಿಯಬೇಕಾಗುತ್ತದೆ: ಮೊದಲನೆಯದರಲ್ಲಿ, ಕೆಲವು ದೇಶಗಳು ವ್ಯವಸ್ಥಿತವಾಗಿ ತಮ್ಮ ಚಾಲ್ತಿ ಖಾತೆಯಲ್ಲಿ ಬೃಹತ್ ಪ್ರಮಾಣದ ಮಿಗುತಾಯ ಗಳಿಕೆಯನ್ನು ಹೊಂದಿರುತ್ತವೆ ಮತ್ತು ಆ ಮೂಲಕ ತಮ್ಮ ವಿದೇಶಿ ವಿನಿಮಯ ಮೀಸಲುಗಳನ್ನು ನಿರ್ಮಿಸಿಕೊಳ್ಳುತ್ತವೆ. ಇದಕ್ಕೆ ಚೀನಾ ಒಂದು ಪ್ರಮುಖ ಉದಾಹರಣೆಯಾಗಿದೆ. ಚೀನಾದಂತಹ ಅರ್ಥವ್ಯವಸ್ಥೆಗಳ ಸಂದರ್ಭದಲ್ಲಿ, ಜಾಗತಿಕ ಆರ್ಥಿಕ ಪರಿಸ್ಥಿತಿಯಲ್ಲಿ ಉದ್ಭವವಾಗುವ ಯಾವುದೇ ಪ್ರತಿಕೂಲ ಬೆಳವಣಿಗೆಯು ಬೀರುವ ಪರಿಣಾಮವು ಆ ದೇಶಗಳ ಚಾಲ್ತಿ ಖಾತೆಯ ಮಿಗುತಾಯದ ಪ್ರಮಾಣದ ಮೇಲೆ ಮಾತ್ರ ಬೀಳುತ್ತದೆ. ಅಂದರೆ, ಆ ದೇಶವು ಸಂಗ್ರಹಿಸಿಕೊಂಡ ವಿದೇಶಿ ವಿನಿಮಯದ ಮೀಸಲಿನ ಗಾತ್ರವು ಸ್ವಲ್ಪಮಟ್ಟಿಗೆ ತಗ್ಗುತ್ತದೆ. ಹಾಗಾಗಿ, ಆ ದೇಶವು ಬಿಕ್ಕಟ್ಟಿಗೆ ಸಿಲುಕದೆ ಯಾವುದೇ ಪ್ರತಿಕೂಲ ಬೆಳವಣಿಗೆಗಳಿಂದಲೂ ಬಚಾವಾಗಬಹುದು.

ತಿರುಪೆ ದೇಶಗಳ ಪಟ್ಟಿ ಬೆಳೆಯಲಿದೆ

ರಫ್ತು–ಪ್ರಧಾನ ಬೆಳವಣಿಗೆಯ ಕಾರ್ಯತಂತ್ರವನ್ನು ಅನುಸರಿಸುವ ಎರಡನೆಯ ಪ್ರಕರಣದಲ್ಲಿ ಅನೇಕ ದೇಶಗಳು ಬರುತ್ತವೆ. ಈ ದೇಶಗಳ ಚಾಲ್ತಿ ಖಾತೆಯು ಕೊರತೆ ಪರಿಸ್ಥಿತಿಯಲ್ಲಿರುವ ಸಂದರ್ಭಗಳೇ ಹೆಚ್ಚು. ಈ ದೇಶಗಳು ತಮ್ಮ ಆಮದು–ರಫ್ತುಗಳ ನಡುವೆ ಉಳಿದ ಬಾಕಿಯನ್ನು ತೀರಿಸಲು ತಮ್ಮ ದೇಶಗಳಿಗೆ ಬರುವ (ಒಳಹರಿಯುವ) ಖಾಸಗಿ ಬಂಡವಾಳದ ಹಣವನ್ನು ಬಳಸಿಕೊಳ್ಳುತ್ತವೆ. ಪುಟ 14 ಕ್ಕೆ

ರಫ್ತು–ಪ್ರಧಾನ ಅಭಿವೃದ್ಧಿ ಎಂಬ........ ಪುಟ 13 ರಿಂದ

ಮತ್ತು, ಈ ದೇಶಗಳು ಹೊಂದಿರುವ ವಿದೇಶಿ ವಿನಿಮಯದ ಮೀಸಲುಗಳೂ ಸಹ, ಅವು ಒದಗಿಸಿಕೊಂಡ ಸಾಲಗಳ ಮೂಲಕವೇ ಸಂಗ್ರಹಿಸಲ್ಪಟ್ಟಿರುತ್ತವೆ. ಸಾಮಾನ್ಯವಾಗಿ ದಕ್ಷಿಣ ಏಷ್ಯಾದ ದೇಶಗಳು ಮತ್ತು ವಾಸ್ತವವಾಗಿ ದಕ್ಷಿಣ ಜಗತ್ತಿನ ಹೆಚ್ಚಿನ ದೇಶಗಳು ಈ ವರ್ಗಕ್ಕೆ ಸೇರಿವೆ. ಈ ಗುಂಪಿನಲ್ಲಿ ಭಾರತವೂ ಸೇರಿದೆ.

ಒಂದು ಸರ್ವವ್ಯಾಪಿ ಸಾಂಕ್ರಾಮಿಕದಿಂದಾಗಿ ಪ್ರವಾಸೋದ್ಯಮದಿಂದ ದೊರಕುವ ಆದಾಯದ ಕಡಿತ (ಶ್ರೀಲಂಕಾದಲ್ಲಿ ಆಗಿದ್ದಂತೆ), ಅಥವಾ ಉಕ್ರೇನ್ ಯುದ್ಧದ ಕಾರಣದಿಂದಾಗಿ ಆಮದು ಬೆಲೆಗಳ ಹೆಚ್ಚಳ (ಬಾಂಗ್ಲಾದೇಶದ ಸಂದರ್ಭದಲ್ಲಿ ಆಮದು ಬೆಲೆಗಳ ಹೆಚ್ಚಳ ಮತ್ತು ರಫ್ತು ಗಳಿಕೆಯ ಕುಸಿತ ಇವೆರಡೂ ಒಟ್ಟಿಗೇ ಸಂಭವಿಸಿವೆ), ಅಥವಾ ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿ ರಫ್ತು ಗಳಿಕೆಯ ಕುಸಿತದಂತಹ ಕೆಲವು ಬಾಹ್ಯ ಕಾರಣಗಳಿಂದಾಗಿ ಈ ಎರಡನೇ ಗುಂಪಿನ ದೇಶಗಳ ಚಾಲ್ತಿ ಖಾತೆಯ ಕೊರತೆಯು ವಿಸ್ತರಿಸಿದರೆ, ಅದು ಅರ್ಥವ್ಯವಸ್ಥೆಯ ಮೇಲೆ ಬೀರುವ ಪರಿಣಾಮವನ್ನು ಹಣ ಹೂಡಿಕೆ ಮಾಡುವವರು ಉತ್ಪ್ರೇಕ್ಷಿಸುತ್ತಾರೆ. ಏಕೆಂದರೆ, ಚಾಲ್ತಿ ಖಾತೆಯ ಕೊರತೆಯು ವಿಸ್ತರಿಸಿದ ಪರಿಸ್ಥಿತಿಯಿಂದಾಗಿ ಹಣಕಾಸು ಬಂಡವಾಳದ ಒಳಹರಿವು ಹೆಚ್ಚಬೇಕಾಗುತ್ತದೆ. ಆದರೆ, ಈ ಕೊರತೆಯ ವಿಸ್ತರಣೆಯೇ ಹಣಕಾಸು ಬಂಡವಾಳದ ಹೆಚ್ಚಿನ ಹೊರಹರಿವಿಗೆ ಕಾರಣವಾಗುತ್ತದೆ.

ತಮ್ಮ ಸ್ವಂತ ಹಿತಾಸಕ್ತಿಯ ಬಗ್ಗೆ ಮಾತ್ರ ಕಾಳಜಿ ಹೊಂದಿದ ಈ ಹೂಡಿಕೆದಾರರು ತಮ್ಮ ಹಣವನ್ನು ದೇಶದಿಂದ ಹೊರಗೊಯ್ಯುತ್ತಾರೆ. ಈ ಮೂಲಕ ವಿದೇಶಿ ವಿನಿಮಯದ ಸಮಸ್ಯೆಯನ್ನು ಉಲ್ಬಣಗೊಳಿಸುತ್ತಾರೆ. ಈ ಎಲ್ಲ ವಿಷಯಗಳನ್ನು ಏಕತ್ರವಾಗಿ "ಮಾರುಕಟ್ಟೆ"ಯ ವಿವೇಚನೆಗೆ ಬಿಟ್ಟರೆ, ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಯಾವುದೇ ದೇಶವು ಎಂದಾದರೂ ಸಮತೋಲನವನ್ನು ತಲುಪುತ್ತದೆಯೇ ಎಂಬುದು ಸ್ಪಷ್ಟವಿಲ್ಲ. ಆದರೆ, ಇಂತಹ ಒಂದು ಸನ್ನಿವೇಶದಲ್ಲಿ, ಅಂದರೆ, ಹಣಕಾಸು ಬಂಡವಾಳವು ಹೊರಹರಿದ ಸನ್ನಿವೇಶದಲ್ಲಿ, ಯಾವುದೇ ಒಂದು ದೇಶವು ಐಎಂಎಫ್‌ಅನ್ನು ಸಂಪರ್ಕಿಸುತ್ತದೆ. ಐಎಂಎಫ್‌ನಿಂದ ಪಡೆದ ಸಾಲವು, ದೇಶದ ಕರೆನ್ಸಿಯ ಮೌಲ್ಯ ಇಳಿಕೆಯನ್ನು ನಿಲ್ಲಿಸುತ್ತದೆ ಮತ್ತು ಅದರಿಂದಾಗಿ ವಿದೇಶಿ ವಿನಿಮಯ ಮಾರುಕಟ್ಟೆಯು ಒಂದು ರೀತಿಯ ಸಮತೋಲನಕ್ಕೆ ಬರಬಹುದು ಎಂಬ ನಿರೀಕ್ಷೆಯನ್ನು ಹೂಡಿಕೆದಾರರಲ್ಲಿ ಸೃಷ್ಟಿಸುತ್ತದೆ. ಆದರೆ ಸಾಲ ನೀಡುವಾಗ ಐಎಂಎಫ್, ಕಲ್ಯಾಣ ವೆಚ್ಚಗಳ ಕಡಿತ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಂತ್ಯ, ರಾಷ್ಟ್ರದ ಸ್ವತ್ತುಗಳನ್ನು ವಿದೇಶಿಯರಿಗೆ ಹಸ್ತಾಂತರಿಸುವ (ಇದನ್ನು ಕೆಲವೊಮ್ಮೆ ಆಸ್ತಿಗಳ "ಅಪರಾಷ್ಟ್ರೀಕರಣ" ಎಂದು ಕರೆಯಲಾಗುತ್ತದೆ) ರೀತಿಯ ಹಲವು ಷರತ್ತುಗಳನ್ನು ಹೇರುತ್ತದೆ.

ವಿದೇಶಿ ವಿನಿಮಯದ ಆರಂಭಿಕ ಕೊರತೆಯನ್ನೇ ಒಂದು ಬೃಹತ್ ಕೊರತೆ ಎಂಬಂತೆ ಉತ್ಪ್ರೇಕ್ಷಿಸುವ ಹೂಡಿಕೆದಾರರ ಕ್ಷಣ ಕಾಲದ ನಡವಳಿಕೆಯು ದೇಶವನ್ನು ಐಎಂಎಫ್‌ನ ಉಕ್ಕಿನ ಆಲಿಂಗನಕ್ಕೆ ತಳ್ಳುವ ವಿದ್ಯಮಾನವು, "ಪವಾಡ" ಎಂಬ ಅಭಿದಾನಕ್ಕೆ ಪಾತ್ರವಾಗಿದ್ದ ದೇಶಗಳು ಇದ್ದಕ್ಕಿದ್ದಂತೆಯೇ ಏಕೆ ತಿರುಕರಾಗಿಬಿಡುತ್ತವೆ ಎಂಬುದನ್ನು ವಿವರಿಸುತ್ತದೆ. ಖಚಿತವಾಗಿ ಹೇಳುವುದಾದರೆ, ರಫ್ತು–ಪ್ರಧಾನ ಬೆಳವಣಿಗೆಯ ಸಮಸ್ಯೆಯು ಹೀಗಿದೆ: ರಫ್ತು–ಪ್ರಧಾನ ಬೆಳವಣಿಗೆಯ ಅನ್ವೇಷಣೆಯು ಒಂದು ದೇಶವನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳದ ತಿಕ್ಕಲುತನವನ್ನು ಮತ್ತು ಖಯಾಲಿಗಳನ್ನು ಅವಲಂಬಿಸುವಂತೆ ಮಾಡುತ್ತದೆ ಮತ್ತು ಅದರ ತೋರಿಕೆಯ ಯಶಸ್ಸು ಕಣ್ಣು ಮಿಟುಕಿಸುವಷ್ಟರಲ್ಲಿ ಅದೃಶ್ಯವಾಗಲೂ ಬಹುದು.

ಈ ವಿದ್ಯಮಾನವು ಪ್ರಭಾವಶಾಲಿ ಮಾನವ ಅಭಿವೃದ್ಧಿ ಸಾಧನೆಗಳನ್ನು ಮಾಡಿದ ಶ್ರೀಲಂಕಾ ಮತ್ತು ಬಾಂಗ್ಲಾದೇಶದಂತಹ ನಮ್ಮ ನೆರೆಹೊರೆಯ ದೇಶಗಳಲ್ಲೂ ಸಂಭವಿಸಿರುವುದನ್ನು ನಾವು ಕಂಡಿದ್ದೇವೆ. ಜಾಗತಿಕ ಅರ್ಥವ್ಯವಸ್ಥೆಯು ಸ್ಥಗಿತಗೊಳ್ಳುತ್ತಿರುವ ಸನ್ನಿವೇಶದಲ್ಲಿ ಮೂರನೇ ಜಗತ್ತಿನ ಹಲವಾರು ದೇಶಗಳ ರಫ್ತುಗಳು ಹೊಡೆತ ತಿನ್ನುವ ಕಾರಣದಿಂದ ಮುಂಬರುವ ದಿನಗಳಲ್ಲಿ ತಿರುಪೆ ದೇಶಗಳ ಪಟ್ಟಿ ಬೆಳೆಯಲಿದೆ. ಭಾರತವು ತನ್ನ ಅರ್ಥವ್ಯವಸ್ಥೆಯ ಗಾತ್ರ ಮತ್ತು ತಾನು ಹೊಂದಿರುವ ಬೃಹತ್ ವಿದೇಶಿ ವಿನಿಮಯ ಮೀಸಲುಗಳ (ಈ ಮೀಸಲುಗಳನ್ನು ಚಾಲ್ತಿ ಖಾತೆಯಲ್ಲಿ ಮಿಗುತಾಯ ಗಳಿಕೆಯ ಮೂಲಕ ಸಂಗ್ರಹಿಸಿಕೊಂಡಿಲ್ಲ. ಈ ಮೀಸಲುಗಳನ್ನು ಹಣಕಾಸು ಬಂಡವಾಳದ ಒಳಹರಿವಿನ ಮೂಲಕ ಸಂಗ್ರಹಿಸಲಾಗಿದೆ) ಹೊರತಾಗಿಯೂ ಭಾರತವು ಈ ಸಮಸ್ಯೆಯಿಂದ ಹೊರತಾಗಿಲ್ಲ. ಭಾರತದ ಮರ್ಯಾದೆಯನ್ನು ಉಳಿಸಿದ (only saving grace) ಒಂದು ವಿನಾಯ್ತಿ ಎಂದರೆ, ಅದರ ಆಹಾರ ಧಾನ್ಯಗಳ ಸ್ವಾವಲಂಬನೆ (ಬಳಕೆಯು ಅತ್ಯಂತ ಕೆಳಮಟ್ಟದಲ್ಲಿರುವ ಕಾರಣದಿಂದ) ಮತ್ತು ಸಾಮ್ರಾಜ್ಯಶಾಹಿಯ "ನಿರ್ಬಂಧ"ಗಳಿಗೆ ಒಳಪಟ್ಟ ದೇಶಗಳಿಂದ ತೈಲ ಆಮದಿಗೆ ಅನುವು ಮಾಡಿಕೊಟ್ಟ ಬಾಹ್ಯ ಸಂಬಂಧಗಳು. ಮೋದಿ ಸರ್ಕಾರದ ಮೂರು ಕೃಷಿ ಕಾನೂನುಗಳನ್ನು ಜಾರಿಗೆ ತಂದಿದ್ದರೆ ಆಹಾರ ಧಾನ್ಯಗಳ ಸ್ವಾವಲಂಬನೆಯೂ ಕಣ್ಮರೆಯಾಗುತ್ತಿತ್ತು. ದೇಶದ ಗೌರವವನ್ನು ರೈತರು ಉಳಿಸಿದ್ದಾರೆ.

ರಫ್ತು–ಪ್ರಧಾನ ಬೆಳವಣಿಗೆಯ ಪರಿಕಲ್ಪನೆಯು ನವ–ಉದಾರವಾದದ ಮೂಲಕ ಪುನರ್ಜನ್ಮ ಪಡೆಯುವ ಮೊದಲು ಬಂಡವಾಳಶಾಹಿಯ ಅಂತರ್ಯುದ್ಧಗಳ ಬಿಕ್ಕಟ್ಟಿನ ಕಾರಣದಿಂದ ಅಪಖ್ಯಾತಿಗೊಳಗಾಗಿತ್ತು. ಆದರೆ, ವಿಶ್ವ ಬಂಡವಾಳಶಾಹಿಯು ಒಂದು ಹೊಸ ಬಿಕ್ಕಟ್ಟನ್ನು ಎದುರಿಸುತ್ತಿರುವ ಸನ್ನಿವೇಶದಲ್ಲಿ, ಈ ರಫ್ತು–ಪ್ರಧಾನ ಬೆಳವಣಿಗೆಯ ಪರಿಕಲ್ಪನೆಯಿಂದ ದೂರ ಸರಿಯುವ ಅವಕಾಶವು ಮತ್ತೊಮ್ಮೆ ದಿಗಂತದಲ್ಲಿ ಗೋಚರಿಸುತ್ತಿದೆ.

ಉಜ್ವಲ ಯೋಜನೆ: PMUY ಮರುಕಳಿಸಿದ ಮತ್ತೇ ಕಣ್ಣೀರು.......... ಪುಟ 11 ರಿಂದ

ಸಂಸ್ಥೆಯ ಆಪ್ ಡೌನ್ ಮಾಡಿಕೊಂಡರೆ 200 ರೂ. ಕೊಡುಗೆ' ಹೀಗೆ ಹಲವು ಆಮಿಷಗಳನ್ನು ತೋರಿ ಗ್ರಾಹಕರನ್ನು ತಮ್ಮೆಡೆ ಸೆಳೆಯುವ ಪ್ರಯತ್ನ ಮಾಡುತ್ತವೆ.

ಉಚಿತ LPG ಸಂಪರ್ಕ ಎಂಬ ಉಜ್ವಲ ಯೋಜನೆಯೂ ಒಂದು ವ್ಯಾಪಾರಿ ತಂತ್ರದಂತಿದೆ. ಮುಕ್ತ ಆರ್ಥಿಕ ನೀತಿಗಳ ಸಂಪೂರ್ಣ ಜಾರಿಗಾಗಿ ಜನಸಾಮಾನ್ಯರು ಬಳಕೆ ಮಾಡುತ್ತಿರುವ ಸರಕುಗಳಿಗೆ ಸರ್ಕಾರ ನೀಡುತ್ತಿರುವ ಎಲ್ಲಾ ಬಗೆಯ ರಿಯಾಯಿತಿಗಳನ್ನು ಹಿಂಪಡೆಯಬೇಕು. ನಂತರ ಆ ಸರಕುಗಳನ್ನು ಮುಕ್ತ ಮಾರುಕಟ್ಟೆಗೆ ತೆರೆದಿಡಬೇಕು. ಆ ಸರಕುಗಳ ಉತ್ಪಾದನೆ, ಸಂಸ್ಕರಣೆ ಮತ್ತು ಸರಬರಾಜು ಮಾಡುತ್ತಿರುವ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯರಿಗೆ ಮಾರಾಟ ಮಾಡಬೇಕು. ಈ ರೀತಿ ಮಾರಾಟ ಮಾಡುವ ಮುನ್ನ ಆ ಸಂಸ್ಥೆಗಳ ಗ್ರಾಹಕರ ಸಂಖ್ಯೆಯನ್ನು ಸಾಧ್ಯವಾದಷ್ಟು ಹೆಚ್ಚಳ ಮಾಡುವ ಕ್ರಮಗಳನ್ನು ಸರ್ಕಾರವೇ ತೆಗೆದುಕೊಳ್ಳಬೇಕು. ಸಾಧ್ಯವಾದಷ್ಟು ಬೆಲೆ ಹೆಚ್ಚಳ ಮಾಡಬೇಕು. ಇದರ ಒಂದು ಪ್ರಯತ್ನವೇ ಅಡುಗೆ ಅನಿಲ ಬಳಕೆ ಮಾಡದ ಕೋಟ್ಯಾಂತರ ಕುಟುಂಬಗಳನ್ನು ಅನಿಲ ಕಂಪನಿಗಳ ಗ್ರಾಹಕರನ್ನಾಗಿ ಮಾಡವುದಾಗಿದೆ. ಗ್ರಾಹಕರನ್ನು ಸೆಳೆಯುವುದಕ್ಕಾಗಿ ಸರ್ಕಾರವೇ ಸಹಸ್ರಾರು ಕೋಟಿ ರೂ. ಸಾರ್ವಜನಿಕರ ಹಣ ವೆಚ್ಚ ಮಾಡಿ, ಗ್ರಾಹಕರಿಗೆ ಒಂದಷ್ಟು ರಿಯಾಯಿತಿ ನೀಡಿ, ಇದರ ಜಾಹಿರಾತಿಗೆ ನೂರಾರು ಕೋಟಿ ರೂಪಾಯಿ ಖರ್ಚು ಮಾಡಿದೆ. ಜೊತೆಗೆ ಅನಿಲದ ಬೆಲೆಯನ್ನು ನಿರಂತವಾಗಿ ಹೆಚ್ಚಿಸಲಾಗುತ್ತಿದೆ. ಪೆಟ್ರೋಲಿಯಂ ಪದಾರ್ಥಗಳ ಮೇಲಿನ ಬೆಲೆ ನಿರ್ಧಾರವನ್ನು ಪೆಟ್ರೋಲಿಯಂ ಕಂಪನಿಗಳಿಗೆ ಬಿಟ್ಟುಕೊಡಲಾಗಿದೆ.

ಮುಕ್ತ ಆರ್ಥಿಕ ನೀತಿ ಜಾರಿಯ ಮುಂದುವರಿದ ಭಾಗವಾಗಿ ಲಾಭದಾಯಕವಾಗಿ ನಡೆಯುತ್ತಿರುವ ಮತ್ತು ಸರ್ಕಾರಕ್ಕೆ ಆದಾಯ ತರುತ್ತಿರುವ ಬಿಪಿಸಿಎಲ್ ಸಂಸ್ಥೆಯನ್ನು ಮೋದಿ ಸರ್ಕಾರ ಮಾರಾಟ ಮಾಡುವುದಾಗಿ ಹೇಳಿದೆ. ಪೆಟ್ರೋಲಿಯಂ ಸಂಸ್ಥೆಗಳ ಷೇರುಗಳನ್ನು ಪ್ರತಿ ವರ್ಷ ಮಾರಾಟ ಮಾಡತೊಡಗಿದೆ. ಆ ಮೂಲಕ ಸರ್ಕಾರದ ಬಂಡವಾಳವನ್ನು ಕ್ರಮೇಣವಾಗಿ ಕಡಿಮೆ ಮಾಡುತ್ತಿದೆ. ಈಗಾಗಲೇ ಬೆಲೆ ನಿಗದಿಯ ಮೇಲಿದ್ದ ಸರ್ಕಾರದ ನಿಯಂತ್ರಣವನ್ನು ಹಿಂಪಡೆದು, ಬೆಲೆ ನಿಗದಿಪಡಿಸುವ ಅಧಿಕಾರವನ್ನು ತೈಲ ಕಂಪನಿಗಳಿಗೆ ಬಿಟ್ಟು ಕೊಡಲಾಗಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆಯಾದರೂ ಈ ಕಂಪನಿಗಳು ಅನಿಲದ ಬೆಲೆ ಕಡಿಮೆ ಮಾಡುತ್ತಿಲ್ಲ. ನಮ್ಮದೇ ದೇಶದಲ್ಲಿ ಉತ್ಪಾದನೆ ಮಾಡುವ ಅನಿಲಕ್ಕೂ ಅಂತರಾಷ್ಟ್ರೀಯ ಮಟ್ಟದ ದರ ನಿಗದಿ ಮಾಡಿ ಮಾರತೊಡಗಿದ್ದಾರೆ. ಆಳುವವರು ಈ ಬಗ್ಗೆ ಸೊಲ್ಲೆತ್ತುವುದಿಲ್ಲ. ಅನಿಲ ಉತ್ಪಾಧನೆ, ಸಂಸ್ಕರಣೆ ಮತ್ತು ಸರಭರಾಜು ಸಂಪೂರ್ಣವಾಗಿ ಖಾಸಗಿ ಬಂಡವಾಳಗಾರರ ಒಡೆತನಕ್ಕೆ ಹೋದರೆ, ಅವರು ಮನಸೋ ಇಚ್ಚೆ ಬೆಲೆ ನಿಗದಿ ಮಾಡಿ ಜನಸಾಮಾನ್ಯರನ್ನು ಸುಲಿಗೆ ಮಾಡುವುದಂತೂ ಖಂಡಿತ.

ಗ್ರಾಹಕರ ಸಂಖ್ಯೆ ಹೆಚ್ಚಳ

2014ರ ಏಪ್ರಿಲ್ 1ರಲ್ಲಿ ಭಾರತದ LPG ಗೃಹ ಬಳಕೆದಾರರ ಸಂಖ್ಯೆ 14.52 ಕೋಟಿ ಇದ್ದುದು, 2022ರ ಏಪ್ರಿಲ್ 1ರ ವೇಳೆಗೆ 30.53 ಕೋಟಿಗೆ ಹೆಚ್ಚಳವಾಗಿದೆ. 2014–15ರ ಆರ್ಥಿಕ ವರ್ಷದಲ್ಲಿ 16,041 TMT ಇದ್ದುದು 2021–22ರ ಆರ್ಥಿಕ ವರ್ಷದಲ್ಲಿ 25.502 TMT ಗೆ ಏರಿಕೆಯಾಗಿ, LPG ಗೃಹ ಬಳಕೆದಾರರ ಸಂಖ್ಯೆ ಶೇ. 59 ರಷ್ಟು ಹೆಚ್ಚಳವಾಗಿದೆ. ಒಟ್ಟು LPG ಮಾರಾಟ 2014–15 ರಲ್ಲಿ 17,639 TMT ಯಿಂದ 2021–22 ರಲ್ಲಿ 28,577 TMT ಗೆ ಹೆಚ್ಚಳವಾಗಿ, ಶೇ 62 ರಷ್ಟು ಬಳಕೆ ಹೆಚ್ಚಳವಾಗಿದೆ.

ಡೇರ್ ಡೆವಿಲ್ ಮುಸ್ತಫಾ. . . . ಚಲನ ಚಿತ್ರದ ಬಗ್ಗೆ ಒಂದಿಷ್ಟು ಅನಿಸಿಕೆಗಳು. . . . ಪುಟ 16 ರಿಂದ

ಸಾಹಿತ್ಯದ ಗೀತೆಗಳನ್ನು ಇಟ್ಟುಕೊಂಡು ಚಿತ್ರ ನಿರ್ದೇಶಿಸಿರುವ ಶಶಾಂಕ್ ಸೋಗಾಲ್ ಅವರು ದೊಡ್ಡ ಸವಾಲನ್ನೇ ಎದುರಿಸಿ ಯಶಸ್ವಿಯಾಗಿದ್ದಾರೆ. ಮರ ಸುತ್ತುವ ಹಾಡುಗಳು, ಡಿಜಿಟಲ್ ನೃತ್ಯಗಳು ಇಲ್ಲದೆ ಸಹ ಚಿತ್ರವನ್ನು ಯಶಸ್ವಿಯಾಗಿ ಮಾಡಬಹುದು ಎಂಬುದಕ್ಕೆ ಉತ್ತಮ ನಿದರ್ಶನವಾಗಿದ್ದಾರೆ. ರಂಗಭೂಮಿಯ ಎಲ್ಲ ರಂಗತಂಡಗಳೂ ಖುಷಿಯ ಗಳಿಗೆಗಳಲ್ಲಿ ಹಾಡಿ ಕುಣಿದಾಡುವ ರಂಗಗೀತೆ, ಸಮುದಾಯ ತಂಡದ ಹುತ್ತವ ಬಡಿದರೆ ನಾಟಕದ ಮೈಸೂರು ರಾಜ್ಯದ ದೊರೆಯೇ ಹಾಡು (ರಚನೆ: ಸಿ. ವೀರಣ್ಣ) ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಈ ಚಿತ್ರದಲ್ಲಿ ನಿರ್ದೇಶಕರಷ್ಟೇ ಪ್ರಮುಖವಾಗಿ ಕೆಲಸ ಮಾಡಿ ಚಿತ್ರದ ಯಶಸ್ಸಿಗೆ ಕಾರಣವಾಗಿರುವವರು ಕಥಾ ವಿಸ್ತರಣೆಯ ವಿಭಾಗದಲ್ಲಿ ಕೆಲಸ ಮಾಡಿರುವ ಎಂ.ಅನಂತ ಶಾಂದ್ರೇಯ ಅವರು. ಅನಂತ ಅವರು ಸಹ ಬೆಂಗಳೂರಿನ ಹಲವು ರಂಗತಂಡಗಳ ಚಿರಪರಿಚಿತ ಸ್ನೇಹಿತರು. ಒಂದು ರೀತಿಯಲ್ಲಿ ಅವರೂ ಸಹ ರಂಗಭೂಮಿಯವರೇ. ಅನೇಕ ಯಶಸ್ವಿ ಧಾರವಾಹಿಗಳ ಸಂಭಾಷಣೆಕಾರರು. ಅವರು ನಿರ್ದೇಶಕ ಶಶಾಂಕ ಸೋಗಾಲ ಅವರ ಜೊತೆ ನಿಂತು ಸಮಾನ ಮನಸ್ಕರಾಗಿ ಗುರುತಿಸಿಕೊಂಡು ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ಸರ್ಕಾರ ಈಗ ಈ ಚಿತ್ರಕ್ಕೆ ತೆರಿಗೆ ವಿನಾಯತಿಯನ್ನು ನೀಡಿ ಒಂದು ಉತ್ತಮ ಕೆಲಸವನ್ನು ಮಾಡಿದೆ. ವಿದ್ಯಾರ್ಥಿ ಸಮುದಾಯಕ್ಕೆ ಈ ಚಿತ್ರ ಹೆಚ್ಚು ಪ್ರದರ್ಶನವಾಗಬೇಕು. ಸಮೂಹ ಪ್ರದರ್ಶನಗಳಾಗಿ ಪ್ರದರ್ಶನದ ನಂತರದಲ್ಲಿ ಚರ್ಚೆಗಳಾಗಬೇಕು. ವಿದ್ಯಾರ್ಥಿ ಸಮೂಹ ಚಿತ್ರಮಂದಿರಗಳಿಗೆ ಬಂದು ನೋಡುವುದಕ್ಕೂ, ಚಿತ್ರವೇ ವಿದ್ಯಾರ್ಥಿ ಸಮೂಹದ ಹತ್ತಿರ ಹೋಗಿ, ಪ್ರಜ್ಞಾಪೂರ್ಣ ಚರ್ಚೆ ಆಗುವುದಕ್ಕೂ ಬಹಳ ಮೌಲ್ಯಾಧಾರಿತ ವ್ಯತ್ಯಾಸವಿದೆ. ಹಾಗೆ ಆದಾಗ ಈ ಚಿತ್ರದ ಅಂತರಂಗದ ಆಶಯ ಮತ್ತು ಸಾಮಾಜಿಕ ಸ್ವಾಸ್ಥ್ಯದ ಸೂಕ್ಷ್ಮ ವಿಷಯಗಳು ಎಲ್ಲರನ್ನೂ ತಲುಪಲು ಸಾಧ್ಯ. ಒಂದು ಯಶಸ್ವಿ ಚಿತ್ರ ನಿರ್ದೇಶನ ಮಾಡಿದ್ದಕ್ಕೂ ಸಾರ್ಥಕತೆ ಮೂಡುತ್ತದೆ ಎಂದು ನನ್ನ ಭಾವನೆ, ಅನಿಸಿಕೆ.

ಕನ್ನಡ ಚಿತ್ರರಂಗಕ್ಕೆ ಒಂದು ಪರಿಣಾಮಕಾರಿ, ಅತಿ ಅವಶ್ಯಕ ಆಲೋಚನೆಗಳ ಯಶಸ್ವಿ ಚಿತ್ರ ಕೊಟ್ಟಿದ್ದಕ್ಕೆ ಸಿನಮಾಮರ ತಂಡದ ಎಲ್ಲರಿಗೂ ಹೃದಯ ತುಂಬಿದ ಅಭಿನಂದನೆಗಳು.

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027

ಕಛೇರಿ ದೂರವಾಣಿ:
080–22234369
ಫೋನ್:
9448578021, 9483966467

ನವ ಶೀತಲ ಸಮರ, ನವ ಅಲಿಪ್ತ ಚಳುವಳಿ ಮತ್ತು ಮೋದಿ ಭೇಟಿ



ವಸಂತರಾಜ ಎನ್.ಕೆ

ಕಳೆದ ವಾರ ಜಾಗತಿಕ ರಾಜಕಾರಣದಲ್ಲಿ ಗಮನಾರ್ಹವಾದ ಎರಡು ಘಟನಾವಳಿಗಳು ನಡೆದವು. ಒಂದು ಭಾರತದಲ್ಲಿ ಭಾರೀ ಪ್ರಚಾರ ಪಡೆದ ಪ್ರಧಾನಿ ಮೋದಿ ಅವರ ಅಧಿಕೃತ ಯು.ಎಸ್ ಭೇಟಿ. ಇನ್ನೊಂದು ಹಲವು ಜಾಗತಿಕ ಸಾಮಾಜಿಕ, ಶಾಂತಿ ಚಳುವಳಿಗಳು, ಜಾಗತಿಕ ಜನಪರ ಸಂಶೋಧನಾ ಸಂಸ್ಥೆಗಳು ಭಾಗವಹಿಸಿದ ಜಾಗತಿಕ ಸಭೆ. ಇವೆರಡಕ್ಕೆ ಎಲ್ಲಿಯ ಕನೆಕ್ಷನ್ ಎಂದು ಕೇಳಬಹುದು. ಅದಕ್ಕೆ ಉತ್ತರಿಸುವ ಪ್ರಯತ್ನವಿದು.



ಜೂನ್ 17ರಂದು ನಡೆದ ಈ ಸಭೆಯಲ್ಲಿ "ನವ ಅಲಿಪ್ತ ಚಳುವಳಿ ಮತ್ತು ನವ ಶೀತಲ ಸಮರ' ಎಂಬ ವಿಷಯದ ಕುರಿತು ಚರ್ಚೆ ನಡೆದು 'ನವ ಶೀತಲ ಸಮರ ನಿಲ್ಲಿಸಬೇಕು', 'ಅಲಿಪ್ತ ಚಳುವಳಿ ಕಟ್ಟಲು' ಮೂರನೇ ಜಗತ್ತಿನ ದೇಶಗಳು ಮುಂದಾಗಬೇಕು ಎಂದು ಕರೆ ನೀಡಿದೆ. 'ಶೀತಲ ಸಮರ ಬೇಡ ಅಭಿಯಾನ', ಟ್ರೈ ಕೊಂಟಿನೆಂಟಲ್ ಇನ್ಸಿಟ್ಯೂಟ್ ಆಫ್ಹ ಸೋಶಿಯಲ್ ರಿಸರ್ಚ್ ಲ್ಯಾಟಿನ್ ಅಮೆರಿಕದ ALBA ಚಳುವಳಿ, ಪಾನ್–ಆಫ್ರಿಕನಿಸಂ ಟುಡೆ, ಇಂಟರ್–ನ್ಯಾಶನಲ್ ಸ್ಟ್ರಾಟೆಜಿ ಸೆಂಟರ್ ಮತ್ತು ಇಂಟರ್–ನ್ಯಾಶನಲ್ ಪೀಪಲ್ಸ್ ಅಸೆಂಬ್ಲಿ ಈ ಸಭೆಯನ್ನು ಜಂಟಿಯಾಗಿ ಸಂಘಟಿಸಿದ್ದವು. ಉಕ್ರೇನ್ ಯುದ್ಧದಲ್ಲಿ ಕೊನೆಗೊಂಡ ಕಳೆದ ಕೆಲವು ವರ್ಷಗಳಿಂದ ಯು.ಎಸ್–ಯುರೋ ಕೂಟಗಳು ರಶ್ಯಾ–ಚೀನಾ ಸೇರಿದಂತೆ ಎಲ್ಲ ದೇಶಗಳತ್ತ ತೋರಿಸುತ್ತಿರುವ ಆಕ್ರಾಮಕ ಧೋರಣೆಯನ್ನು 'ನವ ಶೀತಲ ಸಮರ'ವೆಂದು ಕರೆಯಲಾಗುತ್ತಿದೆ.

ಯು.ಎಸ್, ನಾಯಕತ್ವದಲ್ಲಿ ಯುರೋ ಕೂಟ ಉಕ್ರೇನ್ ಯುದ್ಧದ ಸಂದರ್ಭದಲ್ಲಿ ರಷ್ಯಾದ ಮೇಲೆ ಹಾಕಿದ ಆರ್ಥಿಕ ದಿಗ್ಬಂಧನದಲ್ಲಿ ಜಾಗತಿಕ ದಕ್ಷಿಣ (ಗ್ಲೋಬಲ್ ಸೌತ್) ಎಂದು ಕರೆಯಲಾಗುವ ಅಭಿವೃದ್ಧಿಶೀಲ ದೇಶಗಳು ಭಾಗವಹಿಸಲು ನಿರಾಕರಿಸಿದ್ದು, ರಷ್ಯಾದ ತೈಲ ಖರೀದಿ ಮಾಡಬಾರದು ಎಂಬ ಅವರ ಫರ್ಮಾನಿಗೂ ಕ್ಯಾರೇ ಅನ್ನದ್ದು ತೀವ್ರ ಆತಂಕ, ಆಘಾತ ತಂದಿದೆ. ಯು.ಎಸ್ ಪರವಿದ್ದ ಬಲಪಂಥೀಯ ನಾಯಕರಾದ ನಾಟೋ ಸದಸ್ಯ ದೇಶವಾದ ತುರ್ಕಿಯ ನಾಯಕ ಎರ್ಡೊಗಾನ್ ಮತ್ತು ಭಾರತದ ಮೋದಿ ಸಹ ಈ ಸಂದರ್ಭದಲ್ಲಿ ಯು.ಎಸ್–ಯುರೋ ಕೂಟ ಒತ್ತಡಕ್ಕೆ ಮಣಿಯದ್ದು ಅವರಿಗೆ ಆಶ್ಚರ್ಯ ತಂದಿದೆ. ಮಾತ್ರವಲ್ಲ, ಭಾರತ ಸೇರಿದಂತೆ ಜಾಗತಿಕ ದಕ್ಷಿಣದ ದೇಶಗಳು ಯುಕ್ರೇನ್ ಯುದ್ಧಕ್ಕೆ ರಶ್ಯಾವೇ ಕಾರಣವೆಂದು ಅದನ್ನು ಖಂಡಿಸಲು ಸಹ ಅವು ನಿರಾಕರಿಸಿವೆ. ಈ ಯುದ್ಧ ಆರಂಭ ಮಾಡುವುದರಲ್ಲಿ ಯು.ಎಸ್–ಯುರೋ ಕೂಟದ ಪಾತ್ರವೂ ಇದೆಯೆಂದು ಹಲವು ದೇಶಗಳು ಪರೋಕ್ಷವಾಗಿ, ಕೆಲವು ದೇಶಗಳು ನೇರವಾಗಿ ಸೂಚಿಸಿವೆ. ಈ ನಡುವೆ ಚೀನಾದ ವಿರುದ್ಧ ಆರ್ಥಿಕ, ತಂತ್ರಜ್ಞಾನ ದಿಗ್ಬಂಧನದ ಯುದ್ಧ ಹೂಡಿದೆ. ಚೀನಾ, ತೈವಾನ್ ಗಳ ನಡುವೆ ಸಹ ಸಂಘರ್ಷದ ಸನ್ನಿವೇಶ ಮೂಡಿಸಲು ಯು.ಎಸ್ ಪ್ರಯತ್ನಿಸುತ್ತಿರುವುದನ್ನು ಜಾಗತಿಕ ದಕ್ಷಿಣದ ದೇಶಗಳು ಆತಂಕದಿಂದ ಗಮನಿಸಿವೆ.

ಅದೇ ಸಮಯದಲ್ಲಿ ಜಾಗತಿಕ ದಕ್ಷಿಣ ದ ದೇಶಗಳು ಆರ್ಥಿಕ ದಿಗ್ಬಂಧನ ತಪ್ಪಿಸಿಕೊಳ್ಳಲು ಅಂತರ್ರಾಷ್ಟ್ರೀಯ ವ್ಯಾಪಾರದಲ್ಲಿ ಡಾಲರ್ ಗೆ ಪ್ರತಿಯಾಗಿ ತಮ್ಮದೇ ಅಥವಾ ಬೇರೆ ಕರೆನ್ಸಿ ಬಳಸಿಕೊಳ್ಳುತ್ತಿರುವುದು ಯು.ಎಸ್ ಗೆ ತೀವ್ರ ಆಘಾತ ತಂದಿದೆ. ಅಂತರ್ರಾಷ್ಟ್ರೀಯ ವ್ಯಾಪಾರದಲ್ಲಿ ಡಾಲರ್ ಯು.ಎಸ್ ನ ಜಾಗತಿಕ ಯಜಮಾನಿಕೆಯ ಪ್ರಮುಖ ಅಂಶ.

ಅಂತರ್ರಾಷ್ಟ್ರೀಯ ವ್ಯವಸ್ಥೆಯಲ್ಲಿ 'ಆಳವಾದ ಮತ್ತು ನಿರಂತರವಾದ ಬಿರುಕುಗಳು' ಕಂಡು ಬಂದಿವೆ ಜಾಗತಿಕ ಪಶ್ಚಿಮ (ಯು.ಎಸ್, ಯುರೋ ಕೂಟ, ಜಪಾನ್ ಮತ್ತಿತರ ಅದರ ಸಹಚರರು) ಮತ್ತು ಜಾಗತಿಕ ಪೂರ್ವ (ರಶ್ಯಾ, ಚೀನಾ ಮತ್ತು ಅದರ ಸಹಚರರು) ಗಳು ವ್ಯೂಹಾತ್ಮಕ ಹಿತಾಸಕ್ತಿಗಳಲ್ಲಿ ದೂರ ಸರಿಯುತ್ತಿವೆ. ಜಾಗತಿಕ ದಕ್ಷಿಣ (ಭಾರತ, ಬ್ರೆಜಿಲ್, ದ.ಆಫ್ರಿಕಾ ಸೇರಿದಂತೆ ಏಶ್ಯಾ, ಆಫ್ರಿಕ, ಲ್ಯಾಟಿನ್ ಅಮೆರಿಕದ ಅಭಿವೃದ್ಧಿಶೀಲ ದೇಶಗಳು) ತಮ್ಮ ಹಿತಾಸಕ್ತಿಗಳನ್ನು ಕಾಪಾಡಲು ಪುನಸರ್ಂಘಟಿತಗೊಳ್ಳುತ್ತಿವೆ, ಎಂದು ಪ್ರಸಿದ್ಧ ಸ್ವಿಸ್ ಬ್ಯಾಂಕ್ ಕ್ರೆಡಿಟ್ ಸೂಸಿ ಯ 2023 ಮುನ್ನೋಟದ ವರದಿಯಲ್ಲಿ ಹೇಳಲಾಗಿದೆ. ಜಪಾನಿನ ವಿದೇಶಾಂಗ ಸಚಿವಾಲಯದ ವರದಿಯಲ್ಲಿ ಶೀತಲ ಸಮರೋತ್ತರ (ಸೋವಿಯೆಟ್ ವಿಘಟನೆಯೊಂದಿಗೆ ಮುಗಿದ ಶೀತಲ ಸಮರದ ನಂತರದ ಯು.ಎಸ್–ಯುರೋ–ಜಪಾನ್ ಗಳ ಕೂಟದ ಏಕಛತ್ರಾಧಿಪತ್ಯದ) ಯುಗದ ಕೊನೆಯಲ್ಲಿದ್ದೇವೆ ಎಂದಿದೆ.

ಯು.ಎಸ್–ಯುರೋ–ಜಪಾನ್ ಗಳ ಕೂಟ ಜಗತ್ತಿನ ಮೇಲೆ ಸಾಧಿಸಿದ ಯಜಮಾನಿಕೆಯ ಯುಗ ಮುಗಿಯುತ್ತಾ ಬಂದಿರುವುದಕ್ಕೆ ಹಲವು ಕಾರಣಗಳಿವೆ. ಒಂದು ಕಡೆ ಈ ಕೂಟ ಆರ್ಥಿಕವಾಗಿ ಹಿಂದೆಂದಿಗಿಂತಲೂ ದುರ್ಬಲವಾಗಿದೆ. ಇನ್ನೊಂದು ಕಡೆ ಚೀನಾ ಜಗತ್ತಿನ ಅತಿ ದೊಡ್ಡ ಆರ್ಥಿಕವಾಗಿ ಹೊಮ್ಮಿದೆ. ಜಾಗತಿಕ ಉತ್ತರ (ಎಲ್ಲ ಶ್ರೀಮಂತ ದೇಶಗಳ ಕೂಟ) ದ ಜಿಡಿಪಿ ಜಾಗತಿಕ ದಕ್ಷಿಣ (ರಶ್ಯಾ, ಚೀನಾ, ಭಾರತ ಸೇರಿದಂತೆ ಎಲ್ಲ ಅಭಿವೃದ್ಧಿ ಹೊಂದುತ್ತಿರುವ ದೇಶಗಳ) ಜಿಡಿಪಿಗಿಂತ ಹಲವು ಶತಮಾನಗಳ ನಂತರ ಕಡಿಮೆಯಾಗಿದೆ. ಜಾಗತಿಕ ದಕ್ಷಿಣ ದ ದೇಶಗಳಲ್ಲಿ ಅಗಾಧ ಆಂತರಿಕ ಅಸಮಾನತೆ ಇದ್ದರೂ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು ಅವುಗಳಲ್ಲಿ ಪ್ರತ್ಯೇಕವಾಗಿಯೂ ಸಾಮೂಹಿಕವಾಗಿಯೂ ಹೊಸ ಆತ್ಮವಿಶ್ವಾಸ ಕಂಡು ಬಂದಿದೆ. ಜಾಗತಿಕ ಉತ್ತರದ ಆಣತಿಯನ್ನು ಮೊದಲಿನಂತೆ ಕೇಳಲು ಅವು ತಯಾರಿಲ್ಲ.

ಈಗಾಗಲೇ ಜಾಗತಿಕ ದಕ್ಷಿಣದ ದೇಶಗಳು ಪ್ರಾದೇಶಿಕ ಮತ್ತು ಅಂತರ್ರಾಷ್ಟ್ರೀಯ ಸಂಘಟನೆಗಳನ್ನು ಕಟ್ಟಿಕೊಂಡು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿವೆ. 2009ರಲ್ಲಿ ಸ್ಥಾಪಿತವಾದ ಬ್ರಿಕ್ಸ್ (ಬ್ರೆಜಿಲ್, ರಶ್ಯಾ, ಭಾರತ, ಚೀನಾ, ದ.ಆಫ್ರಿಕಾ) ಕೂಟದ ಜಿಡಿಪಿ ಜಿ–7 ದೇಶಗಳ ಜಿಡಿಪಿ ಯನ್ನು ಮೀರಿ ಬೆಳೆದಿದೆ. ಬ್ರಿಕ್ಸ್ ಶೃಂಗಸಭೆ ಇದೇ ಅಗಸ್ಟ್ ನಲ್ಲಿ ದ.ಆಫ್ರಿಕಾದಲ್ಲಿ ನಡೆಯಲಿದ್ದು ಇನ್ನೂ 12 ದೇಶಗಳು ಅದಕ್ಕೆ ಸೇರಲು ತುದಿಗಾಲಿನಲ್ಲಿ ನಿಂತಿವೆ. ಈ ಶೃಂಗ ಸಭೆಗೆ ಪೂರ್ವಭಾವಿಯಾಗಿ ನಡೆದ ವಿದೇಶ ಮಂತ್ರಿಗಳ ಸಭೆಯ ಹೇಳಿಕೆಯಲ್ಲಿ 'ಏಕಪಕ್ಷೀಯ ದಿಗ್ಬಂಧನಗಳನ್ನು' ಖಂಡಿಸಲಾಗಿದೆ. ಜಾಗತಿಕ ಉತ್ತರದ ಯಜಮಾನಿಕೆಯ ವಿಶ್ವ ಬ್ಯಾಂಕ್, ಐಎಂಎಫ್ ಗಳಿಗೆ ಬದಲಿಯಾದ ಅಂತರ್ರಾಷ್ಟ್ರೀಯ ಸಂಘಟನೆಗಳನ್ನು ಬ್ರಿಕ್ಸ್ ಕಟ್ಟಿ ಬೆಳೆಸುತ್ತಿದೆ. ಇದಲ್ಲದೆ ಭಾರತ, ಚೀನಾ, ರಶ್ಯಾ ಸೇರಿದಂತೆ ಯುರೇಶ್ಯಾದ 8 ದೇಶಗಳ ಸಂಘಟನೆ ಶಾಂಘಾಯ್ ಸಹಕಾರ ಸಂಘಟನೆ (SCO) 2001ರಿಂದ ಸಕ್ರಿಯವಾಗಿದೆ. ಲ್ಯಾಟಿನ್ ಅಮೆರಿಕ ಮತ್ತು ಕ್ಯಾರಿಬಿಯನ್ ಪ್ರದೇಶದ 32 ದೇಶಗಳ ಸಂಘಟನೆಯಾದ CELAC 2011ರಿಂದ ಕೆಲಸ ಮಾಡುತ್ತಿದ್ದು ಇಡೀ ಖಂಡದ ಹಿತಾಸಕ್ತಿ ಕಾಪಾಡಲು ಪ್ರಯತ್ನಿಸುತ್ತಿದೆ. ಅದೇ ರೀತಿ 1999ರಲ್ಲಿ ಲಿಬ್ಯಾದ ಆಗಿನ ನಾಯಕ ಗದ್ದಾಫಿ ಪ್ರಯತ್ನದಿಂದ ಸ್ಥಾಪಿತವಾದ ಆಫ್ರಿಕನ್ ಯೂನಿಯನ್ ಬಹಳ ಸಡಿಲವಾಗಿ ಸಂಘಟಿತವಾಗಿದ್ದರೂ ಆಫ್ರಿಕಾದ ದನಿ ಅಂತರ್ರಾಷ್ಟ್ರೀಯವಾಗಿ ಕೇಳಿ ಬರುವಂತೆ ಪ್ರಯತ್ನಿಸುತ್ತಿದೆ. ಯು.ಎಸ್–ಯುರೋ ಕೂಟ ಜಗತ್ತಿನ ಮೇಲೆ ಹೊರಿಸುತ್ತಿರುವ 'ನವ ಶೀತಲ ಸಮರ'ವನ್ನು ವಿರೋಧಿಸಲು ಸಜ್ಜಾಗುತ್ತಿವೆ.

ವಿಶ್ವಸಂಸ್ಥೆಯ ಚಾರ್ಟರ್ ಸಾರ್ವಭೌಮತೆ, ಸಮಾನತೆ ಮತ್ತು ಪ್ರಜಾಸತ್ತಾತ್ಮಕ ನೀತಿಗಳ ಮೇಲೆ ಆಧಾರಿತವಾಗಿದ್ದರೂ, ಅದರ ಸಂಘಟನಾ ವಿನ್ಯಾಸವನ್ನು ಶ್ರೀಮಂತ ದೇಶಗಳು ತಮ್ಮ ಮೂಗಿಗೆ ನೇರಕ್ಕೆ ಅನುವಾಗುವಂತೆ ರೂಪಿಸಿದ್ದು ಜಾಗತಿಕ ದಕ್ಷಿಣ ದ ದೇಶಗಳ ಹಿತಾಸಕ್ತಿ ಗಳ ರಕ್ಷಣೆಯನ್ನು ಅದು ಮಾಡಲಾಗುತ್ತಿಲ್ಲ. ಹಾಗಾಗಿ ವಿಶ್ವಸಂಸ್ಥೆಯ ಸಂಘಟನಾ ಸುಧಾರಣೆಗಳಿಗಾಗಿ (ಭದ್ರತಾ ಸಮಿತಿಯ ವಿಸ್ತರಣೆ, ಹೆಚ್ಚಿನ ಪ್ರಾದೇಶಿಕ ಪ್ರಾತಿನಿಧ್ಯ, ಸಮಾನತೆ ಇತ್ಯಾದಿ) ಹೋರಾಡುತ್ತಿವೆ.

1961ರಲ್ಲಿ ಯುಗೋಸ್ಲಾವಿಯದಲ್ಲಿ ಸ್ಥಾಪಿತವಾದ ಅಲಿಪ್ತ ಚಳುವಳಿ 20ನೆಯ ಶತಮಾನದ ಪ್ರಮುಖ ಜಾಗತಿಕ ವಿದ್ಯಮಾನವಾಗಿತ್ತು. ಯಾವುದೇ ಮಿಲಿಟರಿ ಕೂಟಕ್ಕೆ ಸೇರದೆ ಅಲಿಪ್ತ ವಾಗಿರುವುದು, ತಮ್ಮ ಸ್ವಾತಂತ್ರ್ಯ, ಸಾರ್ವಭೌಮತೆ ಕಾಪಾಡಲು ಸಾಮೂಹಿಕವಾಗಿ ಪ್ರಯತ್ನಿಸುವುದು ಅಲಿಪ್ತ ಚಳುವಳಿಯ ಮುಖ್ಯ ಧೋರಣೆಯಾಗಿತ್ತು. ನವ ಶೀತಲ ಸಮರವನ್ನು ಜಾಗತಿಕ ವಿನಾಶವನ್ನು ತಪ್ಪಿಸಬೇಕಾದರೆ, ಹೊಸ ಸನ್ನಿವೇಶದಲ್ಲಿ ಹೊಸ ರೂಪದ ಪ್ರಸ್ತುತವಾದ ಹೊಸ ಗುರಿಗಳನ್ನು ಹೊಂದಿದ 'ನವ ಅಲಿಪ್ತ ಚಳುವಳಿ'ಯ ಅಗತ್ಯವಿದೆ. ಮೇಲೆ ಹೇಳಿದ ಹಲವು ಕೂಟಗಳ, ಬೆಳವಣಿಗೆಗಳು ಈಗಾಗಲೇ ಇಂತಹ ಅಲಿಪ್ತ ಚಳುವಳಿ ರೂಪುಗೊಳ್ಳುತ್ತಿರುವ ಸೂಚನೆ ನೀಡುತ್ತಿವೆ.

ಅದೇ ಸಮಯದಲ್ಲಿ ಉಕ್ರೇನ್ ಯುದ್ಧದ ಭಾಗವಾಗಿ ರಶ್ಯಾದ ವಿರುದ್ಧ ಆರ್ಥಿಕ ದಿಗ್ಬಂಧನಗಳು ಬ್ಯೂಮರಾಂಗ್ ಆಗಿದ್ದು, ಜೀವನಾವಶ್ಯಕ ವಸ್ತುಗಳ ಕೊರತೆ, ಬೆಲೆಏರಿಕೆ ಗಳು ಯುರೋಪಿನ ಜನರ ಜೀವನವನ್ನು ದುರ್ಭರಗೊಳಿಸಿದ್ದು, ವಿಶ್ವ ಯುದ್ಧಗಳ ಕಹಿ ನೆನಪನ್ನು ಮರುಕಳಿಸಿದ್ದು, ಜನತೆ ಈ ಯುದ್ಧ ನೀತಿಯನ್ನು ಪ್ರಶ್ನಿಸಲಾರಂಭಿಸಿದ್ದಾರೆ. ಯುರೋಪಿನ ಆಳುವ ವರ್ಗಗಳು ಹೆಚ್ಚು ಕಡಿಮೆ ಯು.ಎಸ್ ಆಣತಿ ಗೆ ಮಣಿದಿದ್ದರೂ, ಅದರ ಕೆಲವು ವಿಭಾಗಗಳು ಪ್ರತಿರೋಧ ಒಡ್ಡಲಾರಂಭಿಸಿವೆ. ಯುರೋಪಿನ ವ್ಯೂಹಾತ್ಮಕ ಸ್ವಾತಂತ್ರ್ಯದ ಸೊಲ್ಲು ಎತ್ತಿವೆ. ಜರ್ಮನಿ ಮೊದಲಾದ ದೇಶಗಳಲ್ಲಿ ಹೊಸ ಶಾಂತಿ ಚಳುವಳಿ ಬೆಳೆಯಲಾರಂಭಿಸಿದೆ. ಇಂತಹ ಚಳುವಳಿ ಅಲಿಪ್ತ ಚಳುವಳಿಗೆ ಸೌಹಾರ್ದ ಬೆಂಬಲ ಸೂಚಿಸಿದೆ. ಇವೆಲ್ಲಾ ಮೇಲೆ ಹೇಳಿದ ಸಭೆಯಲ್ಲಿ ಚರ್ಚಿಸಲಾಯಿತು.


ಈ ಬೆಳವಣಿಗೆಗಳನ್ನು ಯು.ಎಸ್ ಕೂಟ ಆತಂಕದಿಂದ ಗಮನಿಸುತ್ತಿದ್ದು ಇದಕ್ಕೆ ಪ್ರತಿಯಾಗಿ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಭಾರತ–ಚೀನಾ ಗಡಿ ವಿವಾದ, ಘರ್ಷಣೆಯ ಹಿನ್ನೆಲೆಯಲ್ಲಿ ಚೀನಾದ ವಿರುದ್ಧ ಭಾರತವನ್ನು ಬಳಸುವ ಮತ್ತು ಭಾರತವನ್ನು ಓಲೈಸಿ ನವ ಅಲಿಪ್ತ ಚಳುವಳಿಯ ತೆಕ್ಕೆಯಿಂದ ಹೊರ ತರುವುದು ಅವುಗಳಲ್ಲಿ ಒಂದು. ಇತ್ತೀಚಿನ ಹಿರೋಶಿಮಾದಲ್ಲಿ ನಡೆದ ಜಿ–7 ಶೃಂಗಸಭೆ ಯಲ್ಲಿ ಭಾರತದ ಪ್ರಧಾನಿ ಮೋದಿಗೆ ಆಹ್ವಾನ, ಈಗ ಯು.ಎಸ್ ಗೆ ಅಧಿಕೃತ ಭೇಟಿ ಈ ಪ್ರಯತ್ನದ ಬಾಗಗಳು. ಈಗಾಗಲೇ ಭಾರತ ದ ಜತೆ ಹಲವು ಮಿಲಿಟರಿ ಒಪ್ಪಂದಗಳ ಸರಣಿಯನ್ನು ಕೈಗೊಳ್ಳಲಾಗಿದೆ. ಭಾರತವನ್ನು ನಾಟೋ ಪ್ಲಸ್ ನ ಬಾಗವಾಗಿಸುವ ಸೂಚನೆ, ಚೀನಾ ವಿರುದ್ಧ ಯು.ಎಸ್ ಸಂಘಟಿಸಿರುವ ಕ್ವಾಡ್ ಕೂಟದಲ್ಲಿ ಭಾರತವನ್ನು ಸೇರಿಸಿ ತೈವಾನ್ ಯುದ್ಧ ಕ್ಕೆ ಭಾರತವನ್ನು ಸೆಳೆಯುವುದು ಯು.ಎಸ್ ಗುರಿ. ಭಾರತವನ್ನು ರಶ್ಯಾ, ಚೀನಾ ಇರುವ ಸಂಘಟನೆಗಳಿಂದ ದೂರ ಮಾಡುವುದು ಸಹ ಅವರ ಉದ್ದೇಶ. ಯು.ಎಸ್ ಭೇಟಿಯಲ್ಲಿ ರಕ್ಷಣಾ ಉಪಕರಣ, ತಂತ್ರಜ್ಞಾನ ಗಳ ಮಾರಾಟಕ್ಕೆ ಒತ್ತು ಇದನ್ನು ಸ್ಪಷ್ಟ ಪಡಿಸುತ್ತದೆ. ಮೋದಿ ವಿದೇಶ ನೀತಿಯಲ್ಲಿ ಭಾರತ ಯು.ಎಸ್ ನ ಜೂನಿಯರ್ ಪಾರ್ಟನರ್ ಆಗಿದ್ದು ಭಾರತದ ಆಳುವ ವರ್ಗಗಳು ಇದನ್ನು ಸಂಭ್ರಮಿಸುತ್ತಿವೆ. ಈ ಆಮಿಷಕ್ಕೆ ಬಿದ್ದು ಮತ್ತು ಕುರುಡು ಚೀನಾ–ಭೀತಿ ಚೀನಾ–ದ್ವೇಷಗಳಿಂದಾಗಿ ತೈವಾನ್, ಉಕ್ರೇನ್ ಗಳಲ್ಲಿ ಯು.ಎಸ್ ಕೂಟದ ಹಿಂಬಾಲಕವಾಗುವ ಸಾಧ್ಯತೆ ಇಲ್ಲದಿಲ್ಲ. ಅದನ್ನು ನಿರಾಕರಿಸಿ ಭಾರತ ತನ್ನ ಹಿತಾಸಕ್ತಿ ಕಾಪಾಡಲು ಜಾಗತಿಕ ದಕ್ಷಿಣದ ಸಂಘಟನೆಗಳನ್ನು ಗಟ್ಟಿಗೊಳಿಸಬೇಕು. "ನವ ಶೀತಲ ಸಮರ ನಿಲ್ಲಿಸಬೇಕು' ಎಂದು ಒತ್ತಾಯಿಸಿ 'ಅಲಿಪ್ತ ಚಳುವಳಿ ಕಟ್ಟಲು' ಮುಂದಾಗಬೇಕು.



NEW No. MAG(3)/NPP/205/2021-2022
JANASHAKTHI KANNADA VARA PATRIKE JUNE 26-JULY 2, 2023 Price: Rs. 10/- Date of Publication: 23 JUNE 2023 RNI No. KARKAN /2006/17926 Posted on 27-06-2023
Posted at BG PSO, BG - 560026 **Posted at Periodical Rate** - Rs. 2

ಡೇರ್ ಡೆವಿಲ್ ಮುಸ್ತಫಾ. . . . ಸೌಹಾರ್ದತೆಯ ಗಟ್ಟಿ ಸಂದೇಶ. . . .

ಸಿ.ಕೆ.ಗುಂಡಣ್ಣ, ಚಿಕ್ಕಮಗಳೂರು



ಒಂದು ತೋಟದಲ್ಲಿ ನೂರು ಹೂವು ಅರಳಲಿ
ಎಲ್ಲ ಕೂಡಿ ಆಡುವಂತ ಗಾಳಿ ಬೀಸಲಿ
ಅನೇಕತೆಯಲ್ಲೇ ದೇಶ ಸೇರಿದೆ
ಸರ್ವಜನಾಂಗದ ಶಾಂತಿಯ ತೋಟ. . . . .

ಇದು ಡೇರ್ ಡೆವಿಲ್ ಮುಸ್ತಫಾ ಚಿತ್ರದ ಕೊನೆಯಲ್ಲಿ ಬರುವ ಹಾಡು. . .

ಈ ಸಾಹಿತ್ಯದ ಸತ್ವ ಮತ್ತು ತತ್ವ ನಮ್ಮ ದೇಶಕ್ಕೆ ದಿಕ್ಸೂಚಿಯಾಗಬೇಕಿದೆ. ಆಶಯದ ಹಾಡಾಗಬೇಕಿದೆ.

ಡೇರ್ ಡೆವಿಲ್ ಮುಸ್ತಫಾ ಪೂರ್ಣಚಂದ್ರ ತೇಜಸ್ವಿಯವರ ಹೆಸರಾಂತ ಸಣ್ಣ ಕತೆ. ಅರವತ್ತು-ಎಪ್ಪತ್ತರ ದಶಕದಲ್ಲಿ ಈ ಕತೆಯನ್ನು ಓದದ ಸಾಹಿತ್ಯಪ್ರೇಮಿಯೇ ಇಲ್ಲ. ಫುಟ್‌ಬಾಲ್ ಆಟದ ಮುಸ್ತಫಾ, ಪೂಚಂತೆ ಅವರ ಕತೆಯಲ್ಲಿ ಮಾಡದ ಸಾಹಸವಿಲ್ಲ. ಎಲ್ಲ ಸನ್ನಿವೇಶಗಳಲ್ಲೂ ಧೈರ್ಯವಾಗಿ ಮುನ್ನುಗ್ಗುವ ಕಾರಣಕ್ಕೇ ಅವನಿಗೆ ಡೇರ್ ಡೆವಿಲ್ ಎಂಬ ಅಡ್ಡ ಹೆಸರು ಬರಲು ಕಾರಣ.

ಕರ್ವಾಲೋ ಕತೆಯ ಮಂದಣ್ಣ ಮತ್ತು ಡೇರ್ ಡೆವಿಲ್ ಕತೆಯ ಮುಸ್ತಫಾ ಇವರಿಬ್ಬರೂ ತೇಜಸ್ವಿ ಅವರ ಮಾನಸ ಪುತ್ರರು ಎಂದರೂ ತಪ್ಪಲ್ಲ. ಇನ್ನೊಂದು ಅನಿಸಿಕೆಯಲ್ಲಿ ಈ ಪಾತ್ರಗಳು ಪೂರ್ಣ ಚಂದ್ರ ತೇಜಸ್ವಿ ಅವರೇ. . . ಅಷ್ಟು ಗಾಢವಾದ ಪಾತ್ರಗಳು ಇವು. ಮಂದಣ್ಣ ತನ್ನ ಮುಗ್ಧತೆ, ದಡ್ಡತನ ಇವುಗಳಿಂದ ನಮ್ಮ ಸುತ್ತಲ ಸಮಾಜ ಕಲಿಯಬೇಕಾದ ಸರಿಯಾದ ಪಾಠ ಹೇಳಿದರೆ, ಮುಸ್ತಫಾ ತನ್ನ ಧೈರ್ಯ, ಸಾಹಸಗಳಿಂದ ಅದೇ ರೀತಿಯ ಪಾಠವನ್ನು ಹೇಳುತ್ತಾನೆ. ಮುಸ್ತಫಾ ಮಂದಣ್ಣನಂತೆ ಮುಗ್ಧನಲ್ಲಾ.. ಅವನ ನಿಲುವುಗಳು ಎಲ್ಲರನ್ನೂ ಮೆಚ್ಚಿಸಬಲ್ಲ ನಿಲುವುಗಳು.

ಡೇರ್ ಡೆವಿಲ್ ಮುಸ್ತಫಾ ಚಲನಚಿತ್ರವನ್ನು ಯುವ ನಿರ್ದೇಶಕ ಶಶಾಂಕ ಸೋಗಾಲ್ ಅವರು ನಿರ್ದೇಶಿಸಿದ್ದಾರೆ. ಇದು ಅವರ ಪೂರ್ಣಪ್ರಮಾಣದ ನಿರ್ದೇಶನದ ಮೊದಲ ಚಿತ್ರ. ಮೊದಲನೇ ಚಿತ್ರದಲ್ಲೇ ಅವರು ನಿರ್ದೇಶನದ ವೃತ್ತಿಯಲ್ಲಿ ಹಾಗೂ ಧನಾತ್ಮಕ ಸಾಮಾಜಿಕ ಚಿಂತನೆಯಲ್ಲಿ ವೃತ್ತಿ ಪರತೆಯ ಪಾರಮ್ಯವನ್ನು ಸಾಕಷ್ಟು ಯಶಸ್ವಿಯಾಗಿ ತೋರಿಸಿದ್ದಾರೆ. ಇಂತಹ ನವಿರಾದ ಹಾಸ್ಯದ ಲೇಪನವುಳ್ಳ ಕೋಮು ಸೌಹಾರ್ದತೆಸತ್ವದ ಚಿತ್ರಗಳು ನಮಗೆ ಇಂದಿನ ಕಾಲಘಟ್ಟದಲ್ಲಿ ಅತಿ ಅವಶ್ಯ. ಸರಿಯಾದ ಕತೆಯ ಆಯ್ಕೆ, ಉತ್ತಮ ಸಂಭಾಷಣೆ ಹಾಗೂ ಯುವ ಕಲಾವಿದರ ಪ್ರಬುದ್ಧ ಅಭಿನಯ, ಇವೆಲ್ಲವೂ ಸೇರಿ ಡೇರ್ ಡೆವಿಲ್ ಚಿತ್ರ ಒಂದು ಯಶಸ್ವಿ ಚಲನಚಿತ್ರವಾಗಿದೆ. ಕುಟುಂಬದ ಎಲ್ಲ ಸದಸ್ಯರ ಜೊತೆ ಕೂತು ಯಾವುದೇ ಮುಜುಗರಗಳಿಲ್ಲದೆ ನೋಡಲು ಸಾಧ್ಯವಿರುವ ಒಂದು ಚಲನಚಿತ್ರವಾಗಿದೆ. ಕೋಮು ಸಾಮರಸ್ಯ ಸಾರಬಲ್ಲ ಇಂತಹ ಒಂದು ಗಟ್ಟಿಧ್ವನಿಯ ಕತೆಯನ್ನು 50-60 ವರುಷಗಳ ಹಿಂದೆಯೇ ಬರೆದ ಪೂರ್ಣಚಂದ್ರ ತೇಜಸ್ವಿಯವರಿಗೂ ನಾವು ಅಭಿನಂದನೆಗಳನ್ನು ಹೇಳಲೇಬೇಕು.

ಸಂಪೂರ್ಣ ಬ್ರಾಹ್ಮಣ್ಯದ ಹಿನ್ನಲೆಯ ಆಚಾರ-ವಿಚಾರಗಳಲ್ಲೇ ಬೆಳೆದುಬರುವ ಕುಟುಂಬದ ಶಾಲಾ-ಕಾಲೇಜು ಮಕ್ಕಳಿಗೆ ಹೇಗೆ ಜಾತಿ, ಮತ, ಧರ್ಮಗಳು ಒಂದು ಅನಾರೋಗ್ಯದ ಸೋಂಕಾಗಿ ಅವರನ್ನು ಆಕ್ರಮಿಸಿಕೊಂಡಿರುತ್ತದೆ; ಮನಸ್ಸು ಎಷ್ಟು ಸಂಕುಚಿತ ಚಿಂತನೆ, ವಿಚಾರಗಳಿಂದ ಕೂಡಿರುತ್ತದೆ ಎಂಬುದನ್ನು ನಾವು ರಾಮಾನುಜ ಅಯ್ಯಂಗಾರಿ ಪಾತ್ರದ ಮುಖಾಂತರ ಕಾಣಬಹುದು. ಸಮಾಜವು ಕೋಮು ದ್ವೇಶದ ಚಿಂತನೆಗಳಲ್ಲಿ ಮುಳುಗಿದ್ದಾಗ, ಪರ ಜಾತಿ, ಧರ್ಮದ ಜನಾಂಗದವರು ಮಾಡುವ ಒಳ್ಳೆಯ ಕೆಲಸಗಳೂ ಸಹ ಹೇಗೆ ದುಷ್ಕೃತ್ಯದ ರೀತಿಯಲ್ಲಿ ಕಾಣುತ್ತದೆ ಮತ್ತು ಸುಳ್ಳು ಕಟ್ಟುಕತೆಗಳ ರೆಕ್ಕೆಪುಕ್ಕಗಳನ್ನು ಪಡೆಯುತ್ತವೆ ಎಂಬುದನ್ನು ಮುಸ್ತಫಾ ಪಾತ್ರದ ಮುಖಾಂತರ ಕಾಣಬಹುದು. ಸಮಾಜದಲ್ಲಿ ವಿದ್ಯೆಯನ್ನು ಕಲಿಸುವ ಗುರುಗಳೂ ಸಹ ಹೇಗೆ ಇಂತಹ ಸೂಕ್ಷ್ಮ ವಿಷಯಗಳನ್ನು ಕಲಿಸುವ ಜವಾಬ್ದಾರಿಗಳಲ್ಲಿ ವಿಫಲರಾಗುತ್ತಾರೆ ಎಂಬುದನ್ನು ಇತಿಹಾಸ, ಕನ್ನಡ, ವಿಜ್ಞಾನ ಮೇಷ್ಟುಗಳ ಮುಖಾಂತರ ಕಟ್ಟುಕೊಟ್ಟಿದ್ದಾರೆ. ಮಿಲಿಟರಿ ಸೇವೆ ಸಲ್ಲಿಸಿ ದೈಹಿಕ ಚಟುವಟಿಕೆ ಮತ್ತು ಕ್ರೀಡಾ ಚಟುವಟಿಕೆಗಳ ಮೇಷ್ಟ್ರರಾಗಿ ಬರುವ ವ್ಯಕ್ತಿ ಮುಖಾಂತರ, ಸ್ವಸ್ಥ್ಯ ಸಮಾಜದದ ಸಮತೋಲನವನ್ನು ಕಾಪಾಡುವ ತೀರ್ಮಾನ, ನಿಲುವುಗಳನ್ನು ತೆಗೆದುಕೊಳ್ಳಲು ಹೇಗೆ ಸಾಧ್ಯ ಎಂಬುದು ನಿದರ್ಶಿತವಾಗಿದೆ.

ಕಾಲೇಜಿನ ಆವರಣದಲ್ಲಿ ಮುಸ್ತಫಾನ ಹೆಸರೇ ಇತರ ಹುಡುಗರಿಗೆ ಹೆದರಿಕೆ, ಅಸಹ್ಯ. ಮುಜುಗರ ತರುವ ಒಂದು ಹೆಸರು. ಅನೇಕಾನೇಕ ಸುಳ್ಳು ಕಲ್ಪನೆಗಳಲ್ಲಿ, ಗಾಳಿ ಮಾತಿನಲ್ಲೇ ಅವನನ್ನು ಸೃಷ್ಟಿಸಿಕೊಂಡು, ಈ ನಮ್ಮ ಕಾಲೇಜಿಗೇ ಸೇರಬಾರದ ಒಂದು ಸಮೂಹದ ವಿದ್ಯಾರ್ಥಿ ಎಂದು ಪರಿಗಣಿಸಿರುವ ಸಮಯದಲ್ಲೇ ಅವನ ಪ್ರವೇಶ. ಮುಸ್ತಫಾನನ್ನು ಮುಟ್ಟಿಸಿಕೊಳ್ಳುವುದಿರಲಿ, ನಡೆದಾಡುವಾಗ ಅವನ ಗಾಳಿಕೂಡಾ ಸೋಂಕಬಾರದು ಎನ್ನುವ ರೀತಿಯ ನಡುವಳಿಕೆಗಳು ಕೇವಲ ವಿದ್ಯಾರ್ಥಿಗಳಲ್ಲಿ ಮಾತ್ರ ಅಲ್ಲ, ಅವರಿಗೆ ವಿದ್ಯೆಯನ್ನು ಹೇಳಿಕೊಟ್ಟು ಸಮಾಜದಲ್ಲಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕಾದ ಮೇಷ್ಟ್ರುಗಳಲ್ಲೂ ಅದೇ ಮನೋಭಾವ ಇರುವುದನ್ನು ಚಿತ್ರ ಬಹಳ ಸಮರ್ಥವಾಗಿ ರೂಪಿಸಿದೆ.

ಫುಟ್‌ಬಾಲ್ ಆಟ ಆಡಿದರೆ, ಮುಸ್ತಫಾನನ್ನು ಮುಟ್ಟಿಸಿಕೊಂಡು ಆಡಬೇಕು, ಬದಲಿಗೆ ಕ್ರಿಕೆಟ್ ಆಡಿದರೆ ಅವನ ದೈಹಿಕ ಸಂಪರ್ಕ ನೇರವಾಗಿ ಆಗುವುದಿಲ್ಲ ಎನ್ನುವ ಮನೋಬಾವ; ಅದಕ್ಕೆ ಪೂರಕವಾಗಿ ಅಸಮಂಜಸ ತರ್ಕಗಳನ್ನು ಹೇಳಿ ಸ್ನೇಹಿತರನ್ನು ಮತ್ತು ಕ್ರೀಡಾ ಚಟುವಟಿಕೆಯ ಮೇಷ್ಟ್ರನ್ನು ಒಪ್ಪಿಸುವುದು; ಫುಟ್‌ಬಾಲ್ ತಂಡ ಕಟ್ಟಿದಲ್ಲಿ ಮುಸ್ತಫಾ ಕ್ಯಾಪ್ಟ್ ನ್ ಆಗುತ್ತಾನೆ, ಬದಲಿಗೆ ಕ್ರಿಕೆಟ್‌ನತಂಡ ಮಾಡಿದಲ್ಲಿ ನಾನು ಕ್ಯಾಪ್ಟನ್ ಆಗಬಹುದು ಎನ್ನುವ ರಾಮಾನುಜನ ಸಣ್ಣತನದ ಆಲೋಚನೆ; ಪ್ರತಿದಿನ ಮುಸ್ತಫಾ ಬಿರಿಯಾನಿ ತಿನ್ನುತ್ತಾನೆ ಎನ್ನುವ ಕಲ್ಪಿತ ಆಲೋಚನೆ; ಎಲ್ಲರನ್ನೂ ಅವನು ತಬ್ಬಿಕೊಳ್ಳುತ್ತಾನೆ ಎನ್ನುವ ರೋಮಾಂಚನ ಹಾಗು ಭಯದ ಮಿಶ್ರ ಆಲೋಚನೆಯ ರಮಾಮಣಿ; ಹೊದಿಸಿದ ಬಟ್ಟೆಗೆ ಬೆಂಕಿ ತಗುಲಿ ಹೋರಿ ಎಲ್ಲರನ್ನೂ ತಿವಿದು ದೊಂಬಿ ಆದಾಗ, ಅದನ್ನು ಹಿಂದು-ಮುಸ್ಲಿಂ ಗಲಾಟೆ ಎಂದು ಸುಳ್ಳು ಸುದ್ದಿ ಹಬ್ಬಿಸುವುದು; ಇಂತಹ ವಿಚಾರಗಳು ಅನೇಕ ಸಣ್ಣ ಸಣ್ಣ ದೃಶ್ಯ ಮತ್ತು ಸಂಭಾಷಣೆಗಳ ಮುಖಾಂತರ ಪರಿಣಾಮಕಾರಿಯಾಗಿ ಮೂಡಿಬಂದಿವೆ. ಅದೇ ಸಮಯದಲ್ಲಿ ಮುಸ್ತಫಾ ಮ್ಯಾಜಿಕ್ ಮಾಡುವಾಗ ಕೋಳಿಮೊಟ್ಟೆಯ ದೃಶ್ಯ ಬೇಕಿರಲಿಲ್ಲ; ನೋಡುವ ಪ್ರೇಕ್ಷಕರು ಎಲ್ಲರೂ ಪ್ರಬುದ್ಧರಾಗಿರುತ್ತಾರೆ ಎಂದು ಭಾವಿಸಿಕೊಳ್ಳುವುದು ಸರಿಯಲ್ಲ.

ಪ್ರಜ್ಞಾವಂತ ನಾಗರೀಕರು ಎಂದು ಭಾವಿಸುವ ನಾವುಗಳು ಇಲ್ಲಿ ಗುರುತಿಸಬೇಕಾದ ಮುಖ್ಯ ಅಂಶವೆಂದರೆ, ಮನಸ್ಸು, ಮಿದುಳು ವಿಕಾಸಗೊಳ್ಳುವ ವಿದ್ಯಾರ್ಥಿ ಜೀವನದ ಸಮಯದಲ್ಲೇ ಯುವ ವಿದ್ಯಾರ್ಥಿ ಮನಸ್ಸುಗಳು ಹೀಗೆ ಜಾತಿ ಧರ್ಮಗಳ ಸೂಕ್ಷ್ಮತೆಯಲ್ಲಿ ಸಂಕುಚಿತ ಮನೋಭಾವಕ್ಕೆ ಈಡಾದರೆ, ಈ ದೇಶವನ್ನು ಸಂವಿಧಾನದ ಪ್ರಮುಖ ಆಶಯವಾದ ಧರ್ಮ ಸಹಿಷ್ಣುತೆಯ ದೇಶವನ್ನಾಗಿ ಕಟ್ಟಲು ಹೇಗೆ ಸಾಧ್ಯ? ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ಅರಳಿಸಲು ಹೇಗೆ ಸಾಧ್ಯ? ಎಂಬುದು ನಮ್ಮ ಚಿಂತನೆಗೆ ಒಳಗಾಗಬೇಕಾದ ಪ್ರಮುಖ ಅಂಶ; ನಮ್ಮ ಮಕ್ಕಳ್ಳಲ್ಲಿ ವಿಕಾಸಗೊಳ್ಳುವ ಹಾಗೆ ನಾವು ನೋಡಿಕೊಳ್ಳಬೇಕಾದ ಪ್ರಮುಖ ಚಿಂತನೆ. ಈ ಚಿಂತನೆ ಚಿತ್ರದಲ್ಲಿ ಎರಡು ಸಂದರ್ಭದಲ್ಲಿ ಯಶಸ್ವಿಯಾಗಿ ಮೂಡಿಬಂದಿದೆ. ಮೊದಲನೆಯದು ಎಂದರೆ, ಈಗಾಗಲೇ ಸಹೃದಯ ಪ್ರೇಕ್ಷಕರು ಗುರುತಿಸಿರುವ ಭಾವನಾತ್ಮಕ ಕ್ಷಣದ ಸಂದರ್ಭ – ರಾಮಾನುಜ ಕೊನೆಯ ಕ್ಷಣದಲ್ಲಿ ಮನಸ್ಸು ಬದಲಿಸಿ ಕ್ರಿಕೆಟ್ ಪಂದ್ಯವನ್ನು ಗೆಲ್ಲಿಸುವುದು ಹಾಗೂ ಅದಕ್ಕೆ ಅವಶ್ಯವಾಗಿರುವ ಒಂದು ರನ್‌ಗೆ ಮುಸ್ತಫಾ ಜೊತೆ ಓಡುವುದು. ಆದರೆ ಇದಕ್ಕಿಂತ ಪ್ರಮುಖವಾದ ಪರಿಣಾಮಕಾರಿ ದೃಶ್ಯವೆಂದರೆ, ಚಿತ್ರದ ಕೊನೆಯಲ್ಲಿ, ರಾಮಾನುಜ ತನ್ನ ಮನೆಯಲ್ಲಿನ ಕೌಟುಂಬಿಕ ಫೋಟೋದಲ್ಲಿ ಮುಚ್ಚಿಟ್ಟಿರುವ ತನ್ನ ತಂಗಿಯ ಫೋಟೋ ಭಾಗವನ್ನು ಹೊರತೆಗೆದು ಪೂರ್ಣ ಫೋಟೋವನ್ನು ಎಲ್ಲರಿಗೂ ಕಾಣುವ ಹಾಗೆ ಗೋಡೆಗೆ ಮತ್ತೆ ನೇತುಹಾಕುವುದು. ಈ ಒಂದು ಸನ್ನಿವೇಶದಲ್ಲಿ ಚಿತ್ರ ಧರ್ಮ ಸಹಿಷ್ಣುತೆಯ, ಮರ್ಯಾದ ಹತ್ಯೆಯ ನೂರಾರು ಅರ್ಥಗಳನ್ನು ಸಕಾರಾತ್ಮಕವಾಗಿ ತೆರೆದಿಡುತ್ತದೆ. ನಿರ್ದೇಶಕ ಶಶಾಂಕ ಸೋಗಾಲ್ ಅವರು ಈ ಚಿತ್ರದ ಯಶಸ್ವಿ ನಿರ್ದೇಶಕ ಎನ್ನಿಸಿಕೊಳ್ಳುವುದು ಈ ಒಂದು ದೃಶ್ಯದಿಂದ ಎನ್ನುವ ಮಾತನ್ನು ಅಭಿಮಾನದಿಂದ ಹೇಳಲೇಬೇಕಾಗುತ್ತದೆ.

ಡೇರ್ ಡೆವಿಲ್ ಮುಸ್ತಫಾ ಚಲನಚಿತ್ರದಲ್ಲಿ, ಪ್ರಮುಖ ಪಾತ್ರವನ್ನು ಮಾಡಿರುವ ಎಲ್ಲ ನಟ-ನಟಿಯರೂ ರಂಗಭೂಮಿಯ ಹಿನ್ನಲೆಯವರು. ಅದರಲ್ಲೂ ಇವರೆಲ್ಲರೂ ಮೈಸೂರಿನ ಪ್ರತಿಷ್ಟಿತ ರಂಗ ಶಾಲೆ, ರಂಗ ತಂಡ "ನಟನ" ದ ವಿದ್ಯಾರ್ಥಿಗಳು ಎಂಬುದನ್ನು ನಾವು ಹೆಮ್ಮೆಯಿಂದ ಗುರುತಿಸಬೇಕು. ಇಂತಹ ಖ್ಯಾತನಾಮರಲ್ಲದ ನಟರನ್ನು ಗುರುತಿಸಿ, ನಟಿಸಲು ಅವಕಾಶ ನೀಡಿಯಶಸ್ವಿಯಾಗಿರುವ ಯುವ ನಿರ್ದೇಶಕ ಶಶಾಂಕ ಸೋಗಾಲ್ ಅವರಿಗೆ ಧನ್ಯವಾದಗಳನ್ನು ಎಷ್ಟು ಹೇಳಿದರೂ ಸಾಲದು. ಹಾಗೆಯೇ ಪೋಷಕ ಪಾತ್ರಗಳಲ್ಲಿ ಹಿರಿಯ ರಂಗ ಹಾಗೂ ಚಿತ್ರ ನಟ ಎಮ್.ಎಸ್. ಉಮೇಶ್, ಇಂದಿನ ಜನಪ್ರಿಯ ಹಾಗೂ ಪ್ರಬುದ್ಧ ನಟ ಮಂಡ್ಯ ರಮೇಶ್, ಸುಂದರ್ ವೀಣಾ, ಹರಿಣಿ ಶ್ರೀಕಾಂತ್, ಮೈಸೂರು ಆನಂದ್, ವಿಜಯ್ ಶೋಭರಾಜ್ ಪಾವೂರ್ ಮುಂತಾದ ನಟರ ಬಳಗ ಸಹ ಚಿತ್ರಕ್ಕೆ ಅವಶ್ಯಕವಾದ ಅಭಿನಯವನ್ನು ನೀಡಿ, ಚಿತ್ರದ ಯಶಸ್ಸಿಗೆ ಸಹಕಾರಿಯಾಗಿದ್ದಾರೆ. ಕ್ರೀಡಾ ಚಟುವಟಿಕೆಗಳ ಮೇಷ್ಟ್ರರಾಗಿ ಅಭಿನಯಿಸಿರುವ ವಿಜಯ್ ಶೋಭರಾಜ್ ಪಾವೂರ್ ಅವರು ಮೊದಲ ಬಾರಿಗೆ ವಿಭಿನ್ನ ಪಾತ್ರದಲ್ಲಿ ಎಲ್ಲರ ಗಮನ ಸೆಳೆದಿದ್ದಾರೆ, ಅದೇ ರೀತಿ ಚಿತ್ರ ಮುಗಿದ ಮೇಲೂ ನಮ್ಮ ಮನಸ್ಸಿನಲ್ಲಿ ಉಳಿಯುವ ಪಾತ್ರವೆಂದರೆ, ಕಾಲೇಜಿನ ಅಟೆಂಡರ್ ಪಾತ್ರದ ಮೈಸೂರು ಆನಂದ್ ಅವರ ಅಭಿನಯದ ಪಾತ್ರ. ನಟ ಮಂಡ್ಯ ರಮೇಶ್ ಅವರ ಅಭಿನಯದ ಬಗ್ಗೆ ಏನು ಹೇಳುವುದು? ಎಷ್ಟು ಸಹಜವಾಗಿ ಅಭಿನಯಿಸಿದ್ದಾರೆ ಎಂದರೆ, ಸಹಜ ನಟನೆಯನ್ನು ರಮೇಶ್ ಅವರಿಂದ ಕಲಿಯಬೇಕು ಎಂದು ಮಾತ್ರ ನಾನು ಹೇಳಬಲ್ಲೆ.

ಕೇವಲ ಮೂರು ನಾಲ್ಕು ಅರ್ಥಪೂರ್ಣ ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**